"ಮಂಕುತಿಮ್ಮನ ಕಗ್ಗದ ಸಾರ್ವತ್ರಿಕ ಮೌಲ್ಯಗಳು ಒಂದು ಅಧ್ಯಯನ"

ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿ:

ಸರ್ವಮಂಗಳ.ಎಲ್.ಎಸ್.
ರಿ.ನಂ. BMS BKS -00666

ಮಾರ್ಗದರ್ಶಕರು :

ಡಾ. ಲೋಕೇಶ್ವರಪ್ಪ
ಸಹ ಪ್ರಾಧ್ಯಾಪಕರು
ಎಂ.ಇ.ಎಸ್. ಕಾಲೇಜು, ಮಲ್ಲೇಶ್ವರಂ,
ಬೆಂಗಳೂರು.

ಕನ್ನಡ ವಿಭಾಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦ ೦೧೯.

೨೦೧೩-೨೦೧೪

"ಮಂಕುತಿಮ್ಮನ ಕಗ್ಗದ ಸಾರ್ವತ್ರಿಕ ಮೌಲ್ಯಗಳು ಒಂದು ಅಧ್ಯಯನ"

ಕನ್ನಡ ಎಂ.ಫಿಲ್ ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿ:

ಸರ್ವಮಂಗಳ.ಎಲ್.ಎಸ್.
ರಿ.ನಂ. BMS BKS -00666

ಮಾರ್ಗದರ್ಶಕರು :

ಡಾ. ಲೋಕೇಶ್ವರಪ್ಪ
ಸಹ ಪ್ರಾಧ್ಯಾಪಕರು
ಎಂ.ಇ.ಎಸ್. ಕಾಲೇಜು, ಮಲ್ಲೇಶ್ವರಂ,
ಬೆಂಗಳೂರು.

ಕನ್ನಡ ವಿಭಾಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ
ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯.

೨೦೧೩–೨೦೧೪

1122

ಮಾರ್ಗದರ್ಶಕರ ದೃಢೀಕರಣ ಪತ್ರ

2013-14ನೇ ಸಾಲಿನಲ್ಲಿ **ಸರ್ವಮಂಗಳ.ಎಲ್.ಎಸ್.** ಎಂ.ಫಿಲ್. ವಿದ್ಯಾರ್ಥಿಯು ಈ ಪರೀಕ್ಷೆಯ ಅಂಗವಾಗಿ **"ಮಂಕುತಿಮ್ಮನ ಕಗ್ಗದ ಸಾರ್ವತ್ರಿಕ ಮೌಲ್ಯಗಳು ಒಂದು ಅಧ್ಯಯನ"** ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಇದನ್ನು ಇವರು ಮೊದಲು ಯಾವುದೇ ಪದವಿ ಡಿಪ್ಲೋಮ ಅಧ್ಯಯನ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು :

(ಡಾ. ಲೋಕೇಶ್ವರಪ್ಪ)
ಸಹ ಪ್ರಾಧ್ಯಾಪಕರು,
ಎಂ.ಇ.ಎಸ್. ಕಾಲೇಜು, ಮಲ್ಲೇಶ್ವರಂ
ಬೆಂಗಳೂರು.

ದಿನಾಂಕ : 21.7.14
ಸ್ಥಳ : ಬೆಂಗಳೂರು

ಡಾ|| ಲೋಕೇಶ್ವರಪ್ಪ ಕೆ.ಬಿ.
ಕನ್ನಡ ವಿಭಾಗ, ಎಂ.ಇ.ಎಸ್. ಕಾಲೇಜು
ಮಲ್ಲೇಶ್ವರ, ಬೆಂಗಳೂರು - 3.

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಇಲ್ಲಿ ನಡೆಸುತ್ತಿರುವ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ 2013-14ರ ಸಾಲಿಗೆ **ಕನ್ನಡ ಎಂ.ಫಿಲ್** . ಅಧ್ಯಯನದ ಅಂಗವಾಗಿ ಸಂಶೋಧನಾ ನಿಂಬಂಧ ರಚಿಸಲು ಬರೆದಿರುವ **'ಮಂಕುತಿಮ್ಮನ ಕಗ್ಗದ ಸಾರ್ವತ್ರಿಕ ಮೌಲ್ಯಗಳು ಒಂದು ಅಧ್ಯಯನ'** ಕಾದಂಬರಿಗಳ ತೌಲನಿಕ ಅಧ್ಯಯನವನ್ನು ಆಯ್ಕೆ ಮಾಡಿಕೊಂಡು ಡಾ. ಲೋಕೇಶ್ವರಪ್ಪರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್ (ಕನ್ನಡ) ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸಂಶೋಧನಾ ವಿದ್ಯಾರ್ಥಿ:

ಸರ್ವಮಂಗಳ ಎಲ್.ಎಸ್.

(ಸರ್ವಮಂಗಳ.ಎಲ್.ಎಸ್.)

ರಿ.ನಂ. **BMS BKS-00666**

ಕನ್ನಡ ವಿಭಾಗ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ

ನರಸಿಂಹರಾಜ ಕಾಲೋನಿ,

ಬೆಂಗಳೂರು - 560 019.

ದಿನಾಂಕ : 21/07/2014

ಸ್ಥಳ : ಬೆಂಗಳೂರು

ಪರಿವಿಡಿ

ಡಿ.ವಿ.ಜಿ.ರವರ ಮಂಕುತಿಮ್ಮನ ಕಗ್ಗದ ಸಾರ್ವತ್ರಿಕ ಮೌಲ್ಯಗಳು ಒಂದು ಅಧ್ಯಯನ

ಅಧ್ಯಾಯ-೧

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಕನ್ನಡದ ಜಾಗತಿಕ ಸಂಸ್ಕೃತಿಗೆ ಘನತೆಯನ್ನು ತಂದುಕೊಟ್ಟ ಮಹಾನ್ ಮೇಧಾವಿ ಡಿ.ವಿ.ಜಿ. ತಮ್ಮ ಬದುಕಿನುದ್ದಕ್ಕೂ ಹಲವಾರು ಸಾಹಿತ್ಯ ಕೃತಿಗಳನ್ನು ಬರೆಯುವ ಮೂಲಕ ಸಾಹಿತ್ಯ ಕೃಷಿಗೈದರು. ಇವರ ಕೃತಿಗಳಲ್ಲಿ ಒಂದಾದ 'ಮಂಕುತಿಮ್ಮನ ಕಗ್ಗ' ಅವುಗಳಲ್ಲಿ ಮಹತ್ವದ ಕೃತಿಯಾಗಿದೆ. ಇದನ್ನು ನಾನು ನನ್ನ ಎಂ.ಫಿಲ್. ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

ಜಾಗತೀಕರಣದ ಪ್ರಭಾವಕ್ಕೊಳಗಾಗಿರುವ ಇಂದಿನ ಸಮಾಜದಲ್ಲಿ ಮೋಸ, ವಂಚನೆ, ಅಪ್ರಮಾಣಿಕತೆ, ಅಸೂಯೆ, ಅಸಭ್ಯತೆ, ಅನೈತಿಕತೆ, ಮಿತಿಮೀರಿದ ಭ್ರಷ್ಟಾಚಾರ, ಅನ್ಯಾಯ, ಅಶಾಂತಿಗಳು ತಲೆದೋರಿವೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪರಿಣಾಮ ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳು ಬದಲಾಗುತ್ತಿದ್ದು, ವಿಭಿನ್ನ ಸಮಸ್ಯೆಗಳು ತಲೆದೋರುತ್ತಿವೆ.

ಜನರಲ್ಲಿ ಅನುಕರಣೀಯ ಮನೋಭಾವ ಹೆಚ್ಚಾಗುತ್ತಿದೆ. ಬೃಹತ್ ಕೈಗಾರಿಕೆಗಳ ಅಸ್ತಿತ್ವ ಒಂದು ಕಡೆ, ಸಣ್ಣ ಗುಡಿ ಕೈಗಾರಿಕೆಗಳ ಅವನತಿ. ಮತ್ತೊಂದೆಡೆ ಇವೆಲ್ಲದರ ಪರಿಣಾಮವಾಗಿ ಸಮಾಜದಲ್ಲಿ ಜನರ ಬದುಕಿನ ಮೌಲ್ಯಗಳು ಅಧೋಗತಿಗಿಳಿಯುತ್ತಿವೆ. ಪರಸ್ಪರ ಜನರಲ್ಲಿ ದ್ವೇಷ-ವೈಶಮ್ಯಗಳು ಮನೆಮಾಡುತ್ತಿವೆ.

ಮೇಲ್ಕಾಣಿಸಿದ ಈ ವಿಚಾರಗಳು ಎಂದಿಗೂ ಮನುಕುಲದ ಏಳಿಗೆಗೆ ಮಾರಕ. ಈ ಎಲ್ಲಾ ಸಮಸ್ಯೆಗಳಿಂದ ಹೊರಬಂದು ಮನುಷ್ಯ ಸುಗಮ ಜೀವನ ನಡೆಸಬೇಕೆಂದೆ ತನ್ನ ಜೀವನದಲ್ಲಿ ಕೆಲವೊಂದು ಬದಲಾವಣೆಗೆ ಸಿದ್ಧನಾಗಬೇಕು. ಈ ನಿಟ್ಟಿನಲ್ಲಿ ಬದುಕಿನ ಮೌಲ್ಯಗಳನ್ನು ಸಾರುವಂತಹ ಸರ್ವ ವಿಧದಲ್ಲೂ ಜನರನ್ನು ಸಲಹಬಲ್ಲಂತಹ ವೈಚಾರಿಕ ಕೃತಿಯಿಂದ 'ಮಂಕುತಿಮ್ಮನ ಕಗ್ಗ' ಕೃತಿ ಪ್ರಯೋಜನಕಾರಿ ಎಲ್ಲಾ ದೇಶ, ಕಾಲ, ಸಂದರ್ಭಗಳಿಗೂ ಅನ್ವಯಿಸುವಂತಹ ಸಾರ್ವತ್ರಿಕ ಮೌಲ್ಯಗಳನ್ನು ಸಾರುವ ಈ ಕೃತಿ ಅರಿವಿನ ಪರಿಧಿಯನ್ನು ವಿಸ್ತರಿಸುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಗಣಕಯಂತ್ರ, ದೂರದರ್ಶನ, ದೂರವಾಣಿ, ಜಂಗಮ ವಾಣಿ, ಅಂತರ್ಜಾಲ ಹೀಗೆ ಮೊದಲಾದ ವಿದ್ಯುನ್ಮಾನ ಉಪಕರಣದಲ್ಲೇ ತಮ್ಮನ್ನು ತೊಡಗಿಸಿಕೊಂಡು, ಒತ್ತಡದ ಬದುಕಿಗೆ ಒಳಗಾಗಿ ಬದುಕಿನ ಜಂಜಾಟದಲ್ಲಿ ಸಿಕ್ಕಿ ದಿಕ್ಕುಗಾಣದ ಮನುಕುಲಕ್ಕೆ ಕವಿದಿರುವ ಮಂಕುತನವನ್ನು, ಕ್ಲೈಬ್ಯವನ್ನು ಅಳಿಸುವ ನಿಟ್ಟಿನಲ್ಲಿ ಮಾರ್ಗದರ್ಶಕ ಕೃತಿಯಾಗಿ 'ಮಂಕುತಿಮ್ಮನ ಕಗ್ಗ' ನಿಲ್ಲಬಲ್ಲದು. ಈ ಕಗ್ಗ ಕೃತಿಯು ಕೇವಲ ದೇವರು, ಧರ್ಮ, ಪಲಾಯನ, ಮೋಕ್ಷ, ತತ್ವಶಾಸ್ತ್ರ, ಆಧ್ಯಾತ್ಮಗಳನ್ನಷ್ಟೇ ಉಪದೇಶ ಮಾಡದೆ. ಜನರನ್ನು ಸ್ವೀಕಾರಯೋಗ್ಯ ಬದುಕಿನತ್ತ ಮುನ್ನಡೆಸುತ್ತದೆ ಎಂಬ ವಿಚಾರವಾಗಿ ನನ್ನ ಚಿಂತನೆಗಳನ್ನು

ಇಲ್ಲಿ ಪ್ರಸ್ತುತ ಪಡಿಸಿದ್ದೇನೆ.

"ನೂರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ" ಎನ್ನುವ ವಚನಕಾರರ ಮಾತು ವಿವಿಧ ದಿಕ್ಕುಗಳಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತದೆ. ಹಾಲು ವಿವಿಧ ಬಗೆಯಲ್ಲಿ ಉಪಯೋಗಕ್ಕೆ ಬರುತ್ತದೆ. ಹಾಗೇ ಕಾಯಿಸಿ ಕಾಫಿಗೂ ಬಳಸಬಹುದು ಹೆಪ್ಪಿಟ್ಟರೆ ಮೊಸರೂ, ಕಡೆದರೆ ಅದರಿಂದ ಬೆಣ್ಣೆ, ಮಜ್ಜಿಗೆ ಮತ್ತು ಬೆಣ್ಣೆಯನ್ನು ಕಾಯಿಸಿದರೆ ತುಪ್ಪವೂ ಸಿಗುತ್ತದೆ. ಅದೇ ಬಗೆಯಲ್ಲಿ ಭಗವಂತನ ಲೀಲೆ ವಿಚಿತ್ರವಾದದ್ದು. ಅರ್ಥಾತ್ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಮಹತ್ವವಿದೆ ಯಾರೂ ಮೇಲುಶಾ ಅಲ್ಲ ಕೀಳೂ ಅಲ್ಲ. ಅವರವರ ಯೋಗ್ಯತೆಗನುಸಾರವಾಗಿ ಎಲ್ಲರೂ ಸಮರ್ಥರೇ.

"ತೇನ ವಿನ ತೃಣಮಪಿನ ಚಲತು" ಎನ್ನುವ ಮಾತನ್ನು ಡಿವಿಜಿ ಸಮರ್ಥಿಸುತ್ತಾರೆ. ಭಗವಂತನ ಜಗನ್ನಾಟಕವಲ್ಲಿ ಜನರೆಲ್ಲಾ ಪಾತ್ರಧಾರಿಗಳು, ಮಾನವ ಪ್ರಯತ್ನವನ್ನೂ ಮೀರಿದ ಅತಿಮಾನುಷ ಶಕ್ತಿ, ಅಂದರೆ ನಾವೆಲ್ಲ ದೇವರು ಎಂದೇ ಗುರುತಿಸುವ ಆ ಶಕ್ತಿಯ ದಯೆ ಇಲ್ಲದೆ, ನಿರ್ದೇಶನವಿಲ್ಲದೆ ಏನೂ ಸಂಭವಿಸುವುದಿಲ್ಲ. ಜಡವಸ್ತುವೂ ಭಗವಂತನ ಕೃಪೆ ದೊರೆತರೆ ಚೈತನ್ಯವನ್ನು ಹೊಂದುತ್ತದೆ. ಕಲ್ಲೂ ಸಹ ತನ್ನದೇ ಆದ ವಿಶೇಷತೆಯನ್ನು ಹೊಂದಿರುತ್ತದೆ. ಕಾಲದ ತೆರೆ ಸರಿದಾಗ ಅದರ ಮಹತ್ವ ಜಗಜ್ಜಾಹೀರಾಗುತ್ತದೆ ಎನ್ನುತ್ತಾರೆ. ಡಿವಿಜಿ ನಿದರ್ಶನವಾಗಿ ಕಲ್ಲಾಗಿದ್ದ ಅಹಲ್ಯೆಯ ಚಿತ್ರಣ ಕೊಡುತ್ತಾರೆ.

'ಶಿಲೆಯಾಗಿ ನಿದ್ರಿಸುತ್ತಿದ್ದಾಕೆ ರಾಮಪದ
ತಲದ ಸಂಸ್ಪರ್ಶದಿಂದೆದ್ದು ನಿಂತಂತೆ'

ಡಿವಿಜಿರವರ ಮಂಕುತಿಮ್ಮನ ಕಗ್ಗವು 'ಕನ್ನಡದ ಭಗವದ್ಗೀತೆ' ಎಂಬ ಮನ್ನಣೆಗೊಳಗಾಗಿದೆ. 'ಬಾಳಿಗೊಂದು ಭರವಸೆ'ಯನ್ನು ಕೊಡುವಂತಹದ್ದು. ಸಂಸ್ಕೃತಿ ಸಂಪನ್ನವೂ ಆದುದಾಗಿದ್ದು, ಇದರ ವ್ಯಾಪ್ತಿ ಬಹಳ ವಿಶಾಲವಾಗಿದೆ. ವಿಶೇಷವಾಗಿ ಈ ಕೃತಿ ದೇವರು-ಮಾನವ, ಹುಟ್ಟು, ಸಾವು, ಬದುಕು, ಬದುಕಿನ ಜಂಜಾಟ, ಬದುಕಿನ ಸಾರ್ಥಕತೆ, ನಿತ್ಯದ ಬವಣೆ, ಬ್ರಹ್ಮ, ಪ್ರಕೃತಿ, ಪ್ರಕೃತಿ ಸೌಂದರ್ಯ, ಸಂಸ್ಕೃತಿ, ವಿಶ್ವದ ಲೀಲೆ, ಭೌತ ವಿಜ್ಞಾನ, ಸಚ್ಚಿದಾನಂದತ್ವ, ಪಾಪ, ಪುಣ್ಯ, ಅದೃಷ್ಟ, ನಿಷ್ಕಾಮ ಪೂಜೆ, ವ್ಯಕ್ತಿ, ಮೌಲ್ಯ, ಕಾಯಕದ ಮಹತ್ವ, ಮನುಷ್ಯ ಪ್ರತಿಭೆ, ಆತ್ಮ ಚಿಕಿತ್ಸೆ, ಜೀವಮರ್ಮ, ಜೀವನ ಕಲೆ, ಲೋಕ ಪ್ರಗತಿ ಹೀಗೆ ಸಮಾಜದ ಉನ್ನತಿಗೆ ಅವಶ್ಯವಾದ ಅಗತ್ಯ ವಿಚಾರಗಳನ್ನು ಹೇಳುತ್ತದೆ.

ಈ 'ಮಂಕುತಿಮ್ಮನ ಕಗ್ಗವು' ಸಾರ್ವಕಾಲಿಕ ಕೃತಿಯಾಗಿದೆ. ಎಲ್ಲ ಶತಮಾನಗಳ, ಮಾನವ ಜನಾಂಗಗಳಿಗೂ ವಿಚಾರ ಪ್ರಚೋದಕವೆನಿಸಿ, ಅವಶ್ಯ ಚಿಂತನ-ಮಂಥನವನ್ನು ಒಳಗೊಂಡಿದೆ. "ಡಿವಿಜಿರವರೇ ಹೇಳುವಂತೆ ವಿವಿಧ ಮತ ಧರ್ಮಗಳಲ್ಲಿ ಸಾಮರಸ್ಯವು ಶಕ್ಯ ಮತ್ತು ಅವಶ್ಯ, ಸಮ್ಯಕ್ ಜೀವನವೂ ಭಗವದಾರಾಧನೆ ಕಹಿ-ಸಿಹಿ, ನೋವು-ನಲಿವು, ಅಳು-ನಗು ಎಲ್ಲವನ್ನೂ ಸಮಭಾವದಿಂದ ಸ್ವೀಕರಿಸಬೇಕು ಬದುಕಿನಲ್ಲಿ ಶ್ರದ್ಧೆ, ಪುರುಷ

ಪ್ರಯತ್ನ, ಲೋಕ ಸ್ನೇಹ – ಎಂಬ ಈ ಮೂರು ಗುಣಗಳು ನಮ್ಮ ಜನರ ಸ್ವಭಾವದಲ್ಲಿ ಪ್ರಬಲವಾಗಿವೆ. ಪ್ರಗತಿ, ವಿಜ್ಞಾನ, ಸೌಜನ್ಯ ಇವುಗಳಲ್ಲಿ ನಂಬಿಕೆಯೇ ನಮ್ಮ ಜನರ ಉದ್ಧಾರಕ್ಕೆ ಅವಶ್ಯಕವಾಗಿರುವ ಸಿದ್ಧತೆ, ಮನೆ, ಕುಟುಂಬ, ಉದ್ಯೋಗ, ಊರು, ರಾಜ್ಯ, ರಾಷ್ಟ್ರ, ಮಾನವ ವರ್ಗ – ಎಂಬೀ ಏಳು ಮುಖ್ಯ ಜೀವನ ವಲಯಗಳಲ್ಲಿ ಚಿಕ್ಕದು, ದೊಡ್ಡದಕ್ಕೆ ಅಡ್ಡಿಯಾಗಬಾರದು, ದೊಡ್ಡದು ಚಿಕ್ಕದನ್ನು ಕುಗ್ಗಿಸಲೂಬಾರದು ಜೀವನ ಶಿಖರವನ್ನು ತಲುಪಲು ಈ ಏಳು ಮೆಟ್ಟಿಲುಗಳೂ ಅವಶ್ಯಕ" ಎಂಬ ಮಾತು ಮನನೀಯವಾದದ್ದು."

ಸ್ವತಃ ಡಿವಿಜಿರವರೇ ತಮ್ಮ ಕಗ್ಗ ಕೃತಿಯನ್ನು ಕುರಿತು "ಇದು ಪ್ರಸಿದ್ಧರನ್ನು ಪುಷ್ಟರನ್ನು ಉದ್ದೇಶಿಸಿದ್ದಲ್ಲ. ಬಹು ಸಾಮಾನ್ಯರಾದವರ ಮನೆಯ ಬೆಳಕಿಗೆ ಇದು ಒಂದು ತೊಟ್ಟಿನಷ್ಟು ಎಣ್ಣೆಯಂತಾದರೆ ನನಗೆ ತೃಪ್ತಿ" ಎಂದಿದ್ದಾರೆ. ಅವರ ಇಚ್ಛೆಯಂತೆಯೇ ಈ ಕೃತಿ ಜನಜೀವನಕ್ಕೆ ಸುಗಮ ಹಾದಿತೋರಿದೆ.

"'ಮಂಕುತಿಮ್ಮನ ಕಗ್ಗ' ಸರಳ ರಗಳೆಯಲ್ಲಿ ಹೆಣೆಯಲ್ಪಟ್ಟಿದೆ. ಈ ಕಗ್ಗ ಕೃತಿಗೆ ಪೀಠಿಕೆಯಾಗಿ ಬರುವ ತಿಮ್ಮ ಗುರುವಿನ ಕಥೆ ಸ್ವಾರಸ್ಯ ಪೂರ್ಣವಾದದ್ದು. ಈ ಹಿನ್ನೆಲೆಯಲ್ಲಿ ಮಂಕುತಿಮ್ಮನ ಕಗ್ಗ 'ಬಾಳ್ಗೆ ಸಲುವ ತತ್ವಮಥಿತ'ವನ್ನು ಒಳಗೊಂಡಿದೆ. "ಈ ಕೃತಿಯಲ್ಲಿ ಡಿವಿಜಿ ವೇದ, ಉಪನಿಷತ್ತು, ಪುರಾಣ, ಇತಿಹಾಸಗಳೆಲ್ಲದರ ಸಾರವನ್ನು ತಮ್ಮ ವೈವಿಧ್ಯಮಯವಾದ ತುಂಬು ಜೀವನಾನುಭವದ ರಸಘಟ್ಟಗಳೊಂದಿಗೆ ಸೇರಿಸಿ, ಅದನ್ನು ಭಟ್ಟಿ ಇಳಿಸಿ, ಗಟ್ಟಿ ಹರಳುಗಳ ರೂಪದಲ್ಲಿ ಕನ್ನಡಿಗರಗಷ್ಟೇ ಅಲ್ಲ ವಿಶ್ವಮಟ್ಟದಲ್ಲಿ ಜನರಿಗೆ ನೀಡಿದ್ದಾರೆ. ಇಲ್ಲಿನ ಮುಕ್ತಗಳಲ್ಲಿ ತತ್ವಿದೆ, ಸತ್ವವಿದೆ, ಸಾಹಿತ್ಯಾಸಕ್ತರನ್ನು ಸೆಳೆಯಬಲ್ಲ ಚುಂಬಕ ಶಕ್ತಿಯಿದೆ".[೧]

ಕಗ್ಗದಲ್ಲಿನ ಮುಕ್ತಕಗಳು ಸರ್ವಜ್ಞನ ವಚನಗಳಂತೆ, ಮನಸ್ಸು ಕುಗ್ಗಿದಾಗ ಸಾಂತ್ವನ ನೀಡಿ, ಭವ್ಯ ಬಾಳನ್ನು ನಡೆಸಬೇಕೆನ್ನುವವರಿಗೆಲ್ಲ ಮಾರ್ಗದರ್ಶನ ನೀಡುತ್ತದೆ. ಹಾಗಾಗಿಯೇ ಕರ್ತೃ ಡಿ.ವಿ.ಜಿ.ರವರನ್ನು ೨೦ನೆಯ ಶತಮಾನದ ಸರ್ವಜ್ಞ ಎನ್ನುತ್ತಾರೆ.

ವೈಜ್ಞಾನಿಕ ಕ್ಷೇತ್ರದಲ್ಲೂ ಕಗ್ಗದ ಪ್ರಭಾವವನ್ನು ಕಾಣಬಹುದು. "ದೇವರ ಧ್ಯಾನಕ್ಕಿಂತ ಉತ್ತಮವಾದ ಔಷಧ ಬೇರೊಂದಿಲ್ಲ" ಎನ್ನುವ ಮಾತಿಗೆ ಈ ಕೃತಿ ಸಮರ್ಥನೆ ನೀಡುತ್ತದೆ. ದೇವರು, ಆಧ್ಯಾತ್ಮವನ್ನು ಕುರಿತಂತೆ ಇಲ್ಲಿ ವ್ಯಕ್ತವಾಗುವ ಮುಕ್ತಕಗಳನ್ನು ಕಂಡು ತಿರಸ್ಕಾರ ಮನೋಭಾವ ತಾಳುವ ಜರನ್ನು ಎಚ್ಚರಿಸುತ್ತದೆ. ಜಾಗತೀಕರಣದ ಒತ್ತಡಕ್ಕೆ ಸಿಕ್ಕು, ಒತ್ತಡದ ಬದುಕನ್ನು ನಡೆಸುತ್ತ ಅರಿಷಡ್ವರ್ಗಗಳ ದಾಸರಾಗಿ, ಸದಾ ಆತಂಕ, ಆವೇಶಯುತ ಬದುಕನ್ನು ಸಾಗಿಸುತ್ತಿರುವ ಜನ ಮಧುಮೇಹ, ರಕ್ತದೊತ್ತಡ, ಹೃದಯಾಘಾತ ಮೊದಲಾದ ರೋಗಗಳಿಗೆ ತುತ್ತಾಗಿ ಅಕಾಲಿಕ ಮರಣವನ್ನಪ್ಪುತ್ತಿದ್ದಾರೆ. ಇಂತಹ ಸಮಸ್ಯೆಗಳಿಂದ ಹೊರಬರಲು ಕಗ್ಗದಂತಹ ಕೃತಿ ಪರಿಹಾರಕ ಮಂತ್ರವಾಗಿದೆ.

೧ 'ಮಂಕುತಿಮ್ಮನ ಕಗ್ಗ' – ಜೀವನ ದೀವಿಗೆ–ಎಸ್ ಶ್ರೀನಿವಾಸಶೆಟ್ಟಿ ಪು. xi.

ಪ್ರಸ್ತುತ ಯೋಗ ತರಭೇತಿ ಕೇಂದ್ರಗಳಲ್ಲಿ, ವ್ಯಕ್ತಿತ್ವ-ವಿಕಾಸನ ತರಗತಿಗಳಲ್ಲಿ, ವೃದ್ಧಾಶ್ರಮಗಳಲ್ಲಿ ಮಂಕುತಿಮ್ಮನ ಕಗ್ಗದ ಮುಕ್ತಕಗಳನ್ನು ವಾಚಿಸುವ ಮೂಲಕ ಬದುಕಿಗೆ ಅಳವಡಿಸಿಕೊಳ್ಳುತ್ತಿದ್ದಾರೆ. ಆರೋಗ್ಯಕರವಾದ, ಅಭಿವೃದ್ಧಿಕಾರಕ ಚಿಂತನೆಗಳನ್ನು ಮಾಡುತ್ತ ಆ ಮುಖೇನ ಮನುಷ್ಯನನ್ನು ಚಿತೆಯಂತೆ ಸುಡುವ ಚಿಂತೆಗಳಿಂದ ಹೊರಬಂದು ಸುಗಮ ಜೀವನ ನಡೆಸುವಂತೆ ಕಗ್ಗ ಪ್ರೇರೇಪಿಸುತ್ತಿದೆ.

ಜೀವನದ ಆತ್ಯಂತಿಕ ಕ್ಷಣವಾದ ಸಾವನ್ನೂ ಸಹ ಧೈರ್ಯವಾಗಿ ಆಹ್ವಾನಿಸುವಂತಹ ಸಾಮರ್ಥ್ಯವನ್ನು ಡಿ.ವಿ.ಜಿ. ಕಗ್ಗದ ಮೂಲಕ ತುಂಬುತ್ತಾರೆ. "ಮರಣ ಜೀವನ ನಾಟಕದ ಚರಮಾಂಕವಲ್ಲ ಅದು ಬರಿಯ ನಿಷ್ಕಂಭಕ" ಎನ್ನುವ ಮೂಲಕ ಸಾವಿನ ಭಯವನ್ನು ದೂರಾಗಿಸುತ್ತಾರೆ ಮತ್ತು ಮುಂದುವರೆದು ಸಾವನ್ನು ಎದುರುಗೊಳ್ಳುವ ಮನುಷ್ಯನಿಗೆ ಯಾವ ನಷ್ಟವೂ ಆಗುವುದಿಲ್ಲ. "ಜೀವಕಂ ಸಾವಿಗಂ ಸಮಸಿದ್ಧನಾದವನೇ ಜಗತ್ತಿನಲ್ಲಿ ಕೋವಿದೆ" ಎನ್ನುತ್ತಾರೆ.

ಮನುಷ್ಯರ ಪ್ರಜ್ಞೆಯನ್ನು ದೈವತ್ವಕ್ಕೇರಿಸುವ ಪಾರಮಾರ್ಥಿಕ ನಿಲುವುಗಳನ್ನು ಡಿ.ವಿ.ಜಿ.ರವರ ಕಗ್ಗದಲ್ಲಿ ಕಾಣಬಹುದು. 'ಯಥಾಬೀಜಃ ತಥಾ ವೃಕ್ಷಃ' ಎಂಬ ನಾಣ್ಣುಡಿಯಂತೆ ಬಿತ್ತಿದ ಬೀಜವೇ ನಾಳೆ ಮೊಳೆತು ಫಲ ನೀಡುತ್ತದೆ. 'ಬಿತ್ತಿದಂತೆ ಬೆಳೆ' ಬೇವನ್ನು ಬಿತ್ತಿ ಮಾವನ್ನು ನಿರೀಕ್ಷಿಸಿದರೆ ಅದು ನಮ್ಮ ಮೂರ್ಖತನದ ಪರಮಾವಧಿಯಾಗುತ್ತದೆ.

ತಂಗಳುಣಿಸಾದೊಡಂ ಸಾಕೆನುವನುಪವಾಸಿ
ಸಿಂಗಾರ ಸಂಗಾತಿ ಬೇಕುಂಡವನಿಗೆ॥
ಬಂಗಾರ ಪದವಿ ಪ್ರತಿಷ್ಠೆ ಬೇಕಾ ಬಳಿಕ ।
ಹಿಂಗದಾಯೆದೆ ಚಿಲುಮೆ – ಮಂಕುತಿಮ್ಮ ॥

ಮನುಷ್ಯ ಹಂತ ಹಂತವಾಗಿ ಬೆಳೆಯುತ್ತಾ ಹೋದಂತೆ ಆತನ ಆಸೆಯ ಬಳ್ಳಿ ಮತ್ತೂ ಚಿಗಿಯುತ್ತಾ ಹೋಗುತ್ತದೆ. ಅಂಬಿಗರ ಚೌಡಯ್ಯ ಸಹ ಇದನ್ನೇ ಹೇಳುತ್ತಾರೆ. "ಬಡತನಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ ಉಡಲಾದರೆ ಇಡುವ ಚಿಂತೆ .... ನಿಜ ಶಿವನ ಚಿಂತೆಯಲ್ಲಿಪ್ಪ ವರನೊಬ್ಬರನೂ ಕಾಣೆನೆಂದಾತ."

ಆಸೆಯೇ ಮನುಷ್ಯನನ್ನು ದುರಂತದೆಡೆಗೆ ಕೊಂಡೊಯ್ಯುತ್ತದೆ. ಆಸೆಗೆ ಬಲಿಯಾದ ವ್ಯಕ್ತಿ ತನ್ನ ತನವನ್ನು ಕಳೆದುಕೊಂಡು ಸ್ವ-ಜನ ಪಕ್ಷಪಾತ, ಭ್ರಷ್ಟಾಚಾರ, ಮಿತಿಮೀರಿದ ಲಂಚಗುಳಿತನಗಳಿಗೆ ಒಳಗಾಗಿ ಕಡೆಗೆ ಖಿನ್ನನಾಗಿ, ಕಳಂಕ ಭೂಷಿತನಾಗಿ ದುರಂತದ ಬದುಕನ್ನು ನಡೆಸುತ್ತಾನೆ. ಇದಕ್ಕೆ ಉದಾಹರಣೆಯಾಗಿ ರಾಜಕೀಯ ವ್ಯಕ್ತಿಗಳನ್ನು ಕಾಣಬಹುದು.

'ಮಂಕುತಿಮ್ಮನ ಕಗ್ಗ' ಕೃತಿಯು ಡಂಬಾಚಾರದಿಂದ ಅಬ್ಬರದ ಅಲೆಗಳ ಮೂಲಕ ಜನರನ್ನು ಆಕರ್ಷಿಸುವ, ಎಚ್ಚರಿಸುವ ಬದಲು ಸಾಂತ್ವನದ ಸೂಳ್ನುಡಿಗಳ ಮೂಲಕ ಜೀವನಾದರ್ಶಕ ಉಪದೇಶವಾಗಿದೆ.

ವ್ಯಕ್ತಿ ಚಿಂತನಾಪರನಾದರೆ ನಂತರ ಆತನ ವ್ಯಕ್ತಿತ್ವದ ವಿಕಾಸ, ನಂತರ ಸಮಾಜದ, ದೇಶದ ವಿಕಾಸವಾಗುತ್ತದೆಂಬುದು ಡಿ.ವಿ.ಜಿ. ರವರ ಅನಿಸಿಕೆ. ಡಿ.ವಿ.ಜಿ. ಲೋಕಪರ ಚಿಂತಕರಾಗಿ (೨೦ನೆಯ ಶತಮಾನ) ಸಾರ್ವಜನಿಕ ಸೇವೆಗೈದರೆ; ೨೧ನೆಯ ಶತಮಾನದಲ್ಲಿರುವ ನಾವು ಇಂದು ಸ್ವಾರ್ಥಪರ ಆಲೋಚನೆಗಳಲ್ಲಿ ಮುಳುಗಿ ಸ್ವಾರ್ಥಪರ ಚಿಂತಕರಾಗಿದ್ದೇವೆ. ಈ ಕಗ್ಗ ಕೃತಿಯು ಅವರ ಬದುಕಿನ ಅನುಭವಗಳಿಂದ ಹೊರಹೊಮ್ಮಿದ ಒಂದು ಅವಿಭಾಜ್ಯ ಅಂಗ ಎನ್ನಬಹುದು. ೧೧ನೆಯ ಶತಮಾನದಲ್ಲಿ ಆದಿಕವಿ ಪಂಪ 'ಮಾನವ ಜಾತಿ ತಾನೊಂದೇ ವಲಂ' ಎಂದುದನ್ನು ಡಿ.ವಿ.ಜಿ. ೨೦ನೆಯ ಶತಮಾನದಲ್ಲಿ ಕಗ್ಗದ ಮೂಲಕ ಸಾರಿದರು.

ಕಗ್ಗ ಕೃತಿ ಕನ್ನಡಕ್ಕೆ ರಸಘಟ್ಟವಾಗಿದ್ದು, ಭಾರತಕ್ಕೆ ಬೆಲೆಯುಳ್ಳ ಕಾಣಿಕೆಯಾಗಿದೆ. ಪಾಶ್ಚಾತ್ಯ ಮತ್ತು ಪೌರ್ವಾತ್ಯ, ವಿಚಾರಾಧಾರೆ, ಚಿಂತನ–ಮಂಥನಗಳ ಸಾರಭೂತ ಅಂಶಗಳನ್ನು ಸಮನ್ವಯಗೊಳಿಸಿ ಡಿ.ವಿ.ಜಿ.ರವರು ಗಳಿಸಿದ ಜ್ಞಾನ ಕಾವ್ಯ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. 'ಕವನ ನೆನಪಿಗೆ ಸುಲಭ' ಎಂಬ ಅವರಿಚ್ಛೆಯಂತೆ ಕಗ್ಗ ಕೃತಿ ಗದ್ಯ ಗೀತೆಗಳೆರಡರ ಸಮ್ಮಿಶ್ರ ಕೃತಿ.

ಆಡಂಬರದ ಬದುಕಿಗೆ ಜೋತು ಬಿದ್ದಿರುವ ಜನ ಕೇವಲ ಬಾಹ್ಯ ಬದುಕಿಗಷ್ಟೇ ಪ್ರಾಮುಖ್ಯತೆ ನೀಡಿದ್ದಾರೆ. ಬಾಹ್ಯ ಬದುಕಿನ ಶುಚಿತ್ವ ಎಷ್ಟು ಮುಖ್ಯವೋ, ಅವರ ಅಂತರಂಗದ ಶುಚಿತ್ವವೂ ಅಷ್ಟೇ ಮುಖ್ಯ. ಆಡಂಬರದ ಜೀವನವನ್ನು ಆಶಿಸಿ, ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕ ವಿಬ್ಧ ಮನಸ್ಸುಗಳಲ್ಲಿ ಶಾಂತಿ ಸೌಹಾರ್ದತೆ, ಆದ್ರತೆ, ಪ್ರೀತಿಯ ಒರತೆಗಳು ಚಿಮ್ಮಬೇಕಾದರೆ ಮಂಕುತಿಮ್ಮನ ಕಗ್ಗದಂತಹ ಕೃತಿಯ ಅವಶ್ಯಕತೆ ಇದೆ.

ದೃಷ್ಟಾಂತಗಳ ಮೂಲಕ ಜೀವನಾನುಭವಗಳನ್ನು ವಿಶ್ವದ ನೀತಿ ಸಾಹಿತ್ಯಕ್ಕೆ ನೀಡಿದ ಕನ್ನಡದ ಕೊಡುಗೆಯಾಗಿ ಕಗ್ಗ ಕೃತಿ ನಿಂತಿದೆ. ಈ ಕೃತಿಯಲ್ಲಿನ ನುಡಿಗಳು ಆದರ್ಶ ಸಮಾಜದ ಅಡಿಪಾಯವಾಗಿದ್ದು, ನಿತ್ಯ ಬಳಕೆಯ ಮಾತುಗಳಾಗಿವೆ. ಈ ಕೃತಿಯನ್ನು ಕುರಿತು ಹಲವಾರು ಬುದ್ಧಿಜೀವಿಗಳು, ಲೇಖಕರು, ದಾರ್ಶನಿಕರು, ಚಿಂತಕರು, ಅಧ್ಯಯನ ಮಾಡಿ ಹಲವಾರು ಲೇಖನ, ಪ್ರಬಂಧ, ಕೃತಿಗಳನ್ನು ಹೊರತಂದಿದ್ದಾರೆ. (ಉದಾ : ಕಗ್ಗದೊಳಗಿನ ಸಗ್ಗ–ಗಣರಾಜ ಕುಂಬ್ಳೆ, ಶ್ರೀಕಾಂತ್, ಮಂಕುತಿಮ್ಮನ ಕಗ್ಗದ ತಾತ್ಪರ್ಯ ಇತ್ಯಾದಿ).

ಕಿವಿಗೂ, ಮನಸ್ಸಿಗೂ ಹಿತವನ್ನುಂಟು ಮಾಡುವ, ಮನ ಮುದಗೊಳಿಸುವ ಸ್ವಾರ್ಥ ರಹಿತವಾದ, ಅರ್ಥ ಬದ್ಧವಾದ, ಅರಿವಿಗೆ ನಿಲುಕುವ ಕಗ್ಗದೊಳಗಿನ ವಿಚಾರ ಪ್ರಧಾನ ಪದ್ಯಗಳು ಧ್ವನಿ ಮುದ್ರಿತೆಗಳಾಗಿಯೂ ಹೊರಬಂದಿವೆ. ವಿಸ್ತಾರವಾದ ವ್ಯಾಪ್ತಿಯುಳ್ಳ ಮಂಕುತಿಮ್ಮನ ಕಗ್ಗವನ್ನು ಪರಿಮಿತ ವ್ಯಾಪ್ತಿಯಲ್ಲಿ ಅಧ್ಯಯನ ಮಾಡಲು ಉದ್ದೇಶಿಸಿದ್ದೇನೆ.

ಅಧ್ಯಾಯ-೨

ಡಿ.ವಿ.ಜಿ. ರವರ ಬದುಕು ಬರಹ

ಡಿ.ವಿ.ಜಿ.ರವರ ಬದುಕು ಬರಹ

ಡಿ.ವಿ.ಜಿ. ಎಂಬ ಸಂಕ್ಷಿಪ್ತ ನಾಮದಿಂದಲೇ ಖ್ಯಾತರಾದ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಜನಿಸಿದ್ದು, ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ೧೮೮೮ರಲ್ಲಿ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ, ಇವರು ತೀರಾ ಸಾಮಾನ್ಯ ಬ್ರಾಹ್ಮಣ ಕುಟುಂಬಕ್ಕೆ ಸೇರಿದವರು. ಪೂರ್ವಿಕರು ತಮಿಳು ನಾಡಿನ ತಿರುಚಿನಾಪಳ್ಳಿಯ ಕಡೆಯವರು. ಗುಂಡಪ್ಪನವರಿಗೆ ಆ ಹೆಸರು ಬಂದುದು ಅವರ ಮುತ್ತಜ್ಜನವರಿಂದ.

"ಲೋಯರ್ ಸೆಕೆಂಡರಿ, ಪ್ರೌಢಶಾಲೆಗಳ ಹಂತದಲ್ಲಿ ತಮ್ಮ ಹದಿಹರೆಯದ ನಡುಘಟ್ಟದಲ್ಲೇ ಕನ್ನಡ, ಇಂಗ್ಲೀಷ್, ಸಂಸ್ಕೃತ, ಭಾಷೆ, ಸಾಹಿತ್ಯಗಳಲ್ಲಿ ಪರಿಣತಿ ಗಳಿಸಿದ್ದರು. ಆದರೂ ಮೆಟ್ರಿಕ್ಯೂಲೇಷನ್ ಪರೀಕ್ಷೆಯ ಕನ್ನಡ, ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ತೇರ್ಗಡೆಯಾಗಲಿಲ್ಲ. ಶಾಲಾ ಶಿಕ್ಷಣಕ್ಕೆ ವಿದಾಯ ಹೇಳಿದರು. ಏಕೆಂದರೆ ಅವರಿಗೆ ಬದುಕಿನ ದೊಡ್ಡ ವಿಶ್ವವಿದ್ಯಾನಿಲಯವೇ ಕೈಮಾಡಿ ಕರೆಯುತ್ತಿತ್ತು. ಮಹಾ ವಿದ್ವಾಂಸರಿಂದ, ಗುರುಗಳಿಂದ ತಾವು ಕಲಿಯಲಿಲ್ಲವಲ್ಲ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ದೊಡ್ಡ ಗುರುವಿನಲ್ಲಿ ಓದಿದೆ ಎಂದು ಹೇಳಿಕೊಂಡು ಹೆಮ್ಮೆ ಪಡುವುದು ನನ್ನ ಪಾಲಿಗೆ ದೇವರು ನೀಡಲಿಲ್ಲ ಎಂದು ಅವರೇ ಹೇಳಿಕೊಂಡಿದ್ದಾರೆ. ಆದರೆ ಅಂತರಂಗಕ್ಕೆ ಬೆಳಕನ್ನು ಅನುಗ್ರಹಿಸಿದ ಗುರು "ಡಿ.ವಿ.ಜಿ. ಆಧುನಿಕ ಭಾರತೀಯ ಸಾಹಿತ್ಯದ ಒಂದು ಅಶ್ವತ್ಥವೃಕ್ಷ."[೧] ಈ ಸಂದರ್ಭದಲ್ಲಿ "ದಿನವ ಕಳೆ; ಗುರುಶಿಷ್ಯ ಪಟ್ಟಗಳು ನಿನಗೇಕೆ?। ನಿನಗೆ ನೀನೇ ಗುರುವೊ ಮಂಕುತಿಮ್ಮ ಎಂಬ ಮಾತು ಸಾರ್ಥಕವಾಗಿದೆ.

ಡಿ.ವಿ.ಜಿ. ಪ್ರೌಢಶಾಲೆಯಲ್ಲಿದ್ದಾಗಲೇ ವಿವಾಹಿತರಾಗಿದ್ದರು. ಗುಂಡಪ್ಪನವರು ಎಂದೂ ಇತರರಲ್ಲಿ ಕೈಚಾಚಿದವರಲ್ಲ. ಸ್ವಾಭಿಮಾನದ ಬದುಕು ಅವರದ್ದು. ಆದ್ದರಿಂದಲೇ ಸರ್ಕಾರಿ ನೌಕರಿಯನ್ನು ಬಯಸಿದವರಲ್ಲ. ಲೇಖನಿ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಗುಂಡಪ್ಪನವರ ಗ್ರಹಿಕಾ ಸಾಮರ್ಥ್ಯ ಹಾಗೂ ಅಭಿವ್ಯಕ್ತಿ ಚಾತುರ್ಯಗಳು ಉತ್ತಮವಾಗಿದ್ದವು. ಆದರೂ ಕೆಲಸಕ್ಕಾಗಿ ಅಲೆಯುವಂತಾಯಿತು. "ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ!" ಎನ್ನುವ ಡಿ.ವಿ.ಜಿ. ಕೆಲಸಕ್ಕಾಗಿ ಕಛೇರಿಗಳಿಗೆ ಅಲೆದು ಕಡೆಗೆ ಬಣ್ಣದ ಕಾರ್ಖಾನೆಯೊಂದರಲ್ಲಿ ನೌಕರಿ ಹೊಂದಿ. ಅದರಲ್ಲೇ ತೃಪ್ತಿ ಪಟ್ಟಂತಹ ಮಹಾನ್ ವ್ಯಕ್ತಿ. ನಂತರ ಅವರು ಒಂದೆಡೆ ನೆಲೆ ನಿಲ್ಲದೆ. ಪತ್ರಿಕಾರಂಗ, ಸಾಹಿತ್ಯ ಕ್ಷೇತ್ರ, ಸಾರ್ವಜನಿಕ ಸೇವೆ ಹೀಗೆ ತಮ್ಮ ಬದುಕನ್ನು

೧. (ಡಿ.ವಿ.ಜಿ. ಕೃತಿ ಶ್ರೇಣಿ ಸಂಪುಟ ೯ : ಕಾವ್ಯ-೧ ಮುನ್ನುಡಿ)

ಕಳೆದರು. ಗುಂಡಪ್ಪನವರ ಪತ್ನಿ ಭಾಗೀರತಮ್ಮ ಪತಿಗೆ ತಕ್ಕ ಸಹಧರ್ಮಿಣಿಯಾಗಿ ಪ್ರೋತ್ಸಾಹಿಸಿದರು.

ಅಪೂರ್ವವಾದ ಪಾಂಡಿತ್ಯ, ದೈತ್ಯ ಪ್ರತಿಭೆ, ಇದ್ದಾಗ್ಯೂ ಯಾವ ರೀತಿಯ ಪ್ರಶಂಸೆ ಪ್ರಚಾರ ಪುರಸ್ಕಾರಗಳಿಗೆ ಆಸೆ ಪಡದೆ, ಸರಳತೆ, ಸೌಜನ್ಯ, ಔದಾರ್ಯದಂತಹ ಮಾನವೀಯ ಗುಣಗಳ ಸಾಕಾರ ಮೂರ್ತಿಯಂತಿದ್ದ ಡಿ.ವಿ.ಜಿ. ೨೦ನೆಯ ಶತಮಾನ ಕಂಡಂತಹ ಶ್ರೇಷ್ಠ ವ್ಯಕ್ತಿ. ಇವರ ಜೀವನ ಬಹುಕಷ್ಟಗಳಿಂದ ಕೂಡಿದ್ದಿತು. ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ಅವರ ಹೆಗಲಿಗೆ ಹೆಗಲು ಕೊಟ್ಟು ನಿಂತಿದ್ದ ಪತ್ನಿ ಮರಣಿಸಿದ್ದರು. ಅವರ ಆರೋಗ್ಯವೂ ಹದಗೆಟ್ಟಿತ್ತು. ಬದುಕಿನ ಸತ್ಯವನ್ನು ಅರಿತಿದ್ದ ದಿಟ್ಟ ವ್ಯಕ್ತಿ ಡಿ.ವಿ.ಜಿ. ಇದಾವುದರಿಂದಲೂ ಹತಾಶೆಗೊಳ್ಳಲಿಲ್ಲ. ಇವರೊಬ್ಬ ಹೊಸ ಕಾಲದ ಋಷಿ; ವಿಚಾರಗಳ ಆಗರವಾಗಿದ್ದರು. "ಕಷ್ಟಕರವಾದದ್ದೇ ಶ್ರೇಯಸ್ಕರ" ಎಂಬ ಸತ್ಯವನ್ನು ಮೈಗೂಡಿಸಿಕೊಂಡಿದ್ದರು. ಸದಾ ಆಲೋಚನಾ ಮಗ್ನರಾಗಿರುತ್ತಿದ್ದರು.

ಬರಹವನ್ನೇ ಬದುಕಾಗಿಸಿಕೊಂಡಿದ್ದ ಡಿ.ವಿ.ಜಿ.ಲ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

ಕಾವ್ಯ ಮಾಲೆಗಳು : ವಸಂತ ಕುಸುಮಾಂಜಲಿ (೧೯೨೨), ನಿವೇದನ (೧೯೨೪)

ಪ್ರಬಂಧಗಳು : ಜೀವನ ಸೌಂದರ್ಯ ಮತ್ತು ಸಾಹಿತ್ಯ

ಅನುವಾದಗಳು : ಉಮರನ ಒಸಗೆ, ಮ್ಯಾಕ್‌ಬೆತ್ ನಾಟಕ

ಪದ್ಯಕಾವ್ಯಗಳು : ಶ್ರೀರಾಮ ಪರೀಕ್ಷಣಂ, ಅಂತಃಪುರ ಗೀತೆ, ಕೇತಕೀವನ, ಗೀತ ಶಾಕುಂತಲ, ಮಂಕುತಿಮ್ಮನ ಕಗ್ಗ, ಮರಳು ಮುನಿಯನ ಕಗ್ಗ.

ಜೀವನ ಚರಿತ್ರೆಗಳು : ರಂಗಾಚಾರ್ಲು, ಗೋಪಾಲಕೃಷ್ಣ ಗೋಖಲೆ, ವಿದ್ಯಾರಣ್ಯರು ಮತ್ತು ಅವರ ಸಮಕಾಲೀನರು, ಶ್ರಿ ಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನಧರ್ಮ ಯೋಗ ಎಂಬ ಉಪನ್ಯಾಸ ಗ್ರಂಥಕ್ಕೆ (೧೯೬೭) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿವೆ. ದೇವರು ವೈಚಾರಿಕ ಕೃತಿ : ಪುರುಷ ಸೂಕ್ತ, ಕಾವ್ಯ ಸ್ವಾರಸ್ಯ ಇವು ಅವರ ಕಡೆಗಾಲದ ಕೃತಿಗಳು, ಇವರು ೧೯೩೨ರಲ್ಲಿ ಮಡಿಕೇರಿಯಲ್ಲಿ ನಡೆದ ೧೮ನೆಯ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ೧೭-೧೦-೧೯೭೫ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಡಿ.ವಿ.ಜಿ. ಮತ್ತು ಸಾಹಿತ್ಯ

ಡಿ.ವಿ.ಜಿ. ಹೊಸಗನ್ನಡ ಲೋಕದ ದಿವ್ಯ ತಾರೆ, ಸು. ೫೦ ಕ್ಕೂ ಹೆಚ್ಚು ಕೃತಿಗಳನ್ನು ಸರಸ್ವತಿಯ ಭಂಡಾರಕ್ಕೆ ಕಾಣಿಕೆಯಾಗಿ ನೀಡಿದ್ದಾರೆ.

"ಉತ್ತಮ ದೇಶ ಸೇವಕ, ರಾಜಕಾರಣಿ, ಸಮಾಜ ಸುಧಾರಕ, ಲೇಖಕ,

ವಿನೋದಪ್ರಿಯ, ಸರ್ವಜನ ಮಿತ್ರ, ಪ್ರತಿಭೆಯ ಜೊತೆಗೆ ಪ್ರಯತ್ನವೂ ಇದ್ದರೆ ಒಬ್ಬ ವ್ಯಕ್ತಿ ಎಷ್ಟು ಉನ್ನತಿ ಹೊಂದಬಹುದು ಎಂಬುದಕ್ಕೆ ಜ್ವಲಂತ ಉದಾಹರಣೆಯಾಗಿದ್ದಾರೆ. ಸ್ವಾತಂತ್ರ್ಯ ವಿಚಾರ, ಪ್ರಾಮಾಣಿಕತೆ, ಯುಕ್ತಾಯುಕ್ತಾ ವಿವೇಚನೆ ಇದ್ದ ಗುಣವಂತರು. ಸಾಹಿತ್ಯದ ಮೂಲಕ ತಾವು ಕಂಡ ನೀತಿ ಪ್ರಜ್ಞೆ, ಒಳಿತು, ಕೆಡುಕುಗಳ ತುಲನಾತ್ಮಕ ವಿಮರ್ಶೆಯೊಂದಿಗೆ ಸಾಹಿತ್ಯ ಕೃತಿಗಳ ಮೂಲಕ ದೃಢ ತೀರ್ಪನ್ನು ಕೊಟ್ಟಿದ್ದಾರೆ. ಹಲವಾರು ಶಬ್ದಗಳ ಸಮನಾರ್ಥ ಪದಗಳನ್ನು ಕನ್ನಡದಲ್ಲಿ ಸೃಷ್ಟಿಸಿಕೊಟ್ಟು 'ನೂತನ ಪದಗಳ ಬ್ರಹ್ಮ' ಎನಿಸಿಕೊಂಡು ನವೋದಯ ಕನ್ನಡ ಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರೆನಿಸಿದ್ದಾರೆ. ಜೊತೆಗೆ ಹೊಸ ಗನ್ನಡ ಸಾಹಿತ್ಯದ ಪುರೋಭಿವೃದ್ಧಿಗೆ ಶ್ರಮಿಸಿದ್ದಾರೆ."[೧]

ಡಿ.ವಿ.ಜಿ. ಸಾಮಾನ್ಯ ಬದುಕಿನ ಶ್ರೇಷ್ಠತೆಯ ಸಾರವನ್ನು ಮೈಗೂಡಿಸಿಕೊಂಡಿದ್ದ ಸರಳ ಜೀವಿ, ಬುದ್ಧಿಜೀವಿ, ಲೇಖನಿಯ ಕೃತಿಯಿಂದ ಸ್ವತಂತ್ರವಾಗಿ ಜೀವನ ನಿರ್ವಹಿಸಿದರು. ಕವಿ, ಕಾವ್ಯ ಜೀವಿಯಾಗಿ ಶ್ರೇಷ್ಠ ಕೃತಿಗಳನ್ನು ನೀಡಿದ್ದಾರೆ.

"ಆಧುನಿಕ ಕನ್ನಡ ಸಾಹಿತ್ಯದ ನವೋದಯ ಕಾಲದ ಕವಿಗಳಿಗೆ, ಬದುಕು ಕೇವಲ ಭೋಗದಾಗರವಲ್ಲ, ಭೋಗದಾಚೆಗೆ ಸಾಧಿಸಬೇಕಾದ ಯೋಗವಿದೆಯೆಂಬ ಎಚ್ಚರ ಅವರಿಗಿತ್ತು. ಬದುಕಿನ ಸರಳತೆಗೆ, ಪ್ರಗಲ್ಬತೆಗೆ ಒತ್ತುಕೊಟ್ಟರು. ಅವರ ದೃಷ್ಟಿ ಆಧ್ಯಾತ್ಮಿಕದೆಡೆಗೆ ಪ್ರಪಂಚವನ್ನು ತೆರೆದ ಒಳಗಣ್ಣಿಂದ ಕಾಣುವ ಬಗೆ ಈ ಕವಿಗಳ ಸ್ವಭಾವವಿತ್ತು. ಆದ್ದರಿಂದಲೇ ಅವರ ಸಾಹಿತ್ಯ 'ರಮ್ಯ' ಸಾಹಿತ್ಯವಾಗಿ ರಂಜಿಸಿತು. ಡಿ.ವಿ.ಜಿ. ಸಂದರ್ಭದಲ್ಲಿ ಬೆಳೆದು ನಿಂತರು. ಅವರು ಬೆಳೆದು ಬಂದ ದಾರಿಯ ಕಡೆಗೆ ಕಣ್ಣು ಹೊರಳಿಸಿ ನೋಡಿದರು. ಭಗವದ್ಗೀತೆಯಂಥ ಆಧ್ಯಾತ್ಮ ನಿಷ್ಠೆ ಕೃತಿಯನ್ನು ಓದಿ ಅರಗಿಸಿಕೊಂಡರು. ಮಹರ್ಷಿ ವೇದವ್ಯಾಸರು ಜಗತ್ತಿನ ಕಣ್ಣು ತೆರೆಸಲು ಬರೆದ ಉಪನಿಷತ್ತುಗಳೆಂಬ ಗೋವುಗಳನ್ನು ಕರೆದಿತ್ತ ನೊರೆವಾಲು. ವ್ಯಾಸರು ಗೀತಾಮೃತವನ್ನು ಕರೆದುಣಿಸಿದರೆ, ಒಳಗಣ್ಣು ತೆರೆಸಿದರೆ, ಡಿ.ವಿ.ಜಿ. 'ಕಗ್ಗ' ಎನ್ನುತ್ತಾ ತನ್ನನ್ನು 'ಮಂಕುತಿಮ್ಮ' ಎಂದು ಕರೆದುಕೊಳ್ಳುತ್ತಾ ಮನುಕುಲಕ್ಕೆ ಕವಿದಿರುವ ಮಂಕನ್ನು ಕ್ಲೈಬ್ಯವನ್ನು ಅಳಿಸಲು ತೊಡಗುತ್ತಾರೆ."[೨]

ಜೀವನದ ಮೌಲ್ಯಗಳನ್ನು ವಿಭಿನ್ನ ರೀತಿಯಲ್ಲಿ ವಿಮರ್ಶಿಷಿ, ಬೋಧಿಸಿದ ಮಹಾನ್ ವೇದಾಂತಿ, ದೇವರು, ದೇಶ, ಮಾನವ ಕುಲಗಳ ಬಗ್ಗೆ ಅಮಿತವಾದ ಪ್ರೀತಿಯನ್ನು ಹೊಂದಿದ್ದರು. ಗಾಂಧಿ, ಬುದ್ಧ, ಬಸವಣ್ಣರಂತೆ ದೇವರು, ಧರ್ಮಗಳನ್ನು ಅನುಸರಿಸಿ ಜನರನ್ನು ತಿದ್ದಲು ಪ್ರಯತ್ನಿಸಿದರು. ಸಾಹಿತ್ಯವನ್ನು ಇದಕ್ಕೆ ಮಾಧ್ಯಮವಾಗಿ ಬಳಸಿ ಹಲವಾರು ಕೃತಿಗಳನ್ನು ಕೊಡುಗೆಯಿತ್ತರು. ಇವರ ಸಾಹಿತ್ಯ ಕೃಷಿ ಅನುಪಮವಾದದ್ದು. ಕನ್ನಡ ನವೋದಯ

೧. ಜಗತ್ತಿನ ಪ್ರಸಿದ್ಧ ವ್ಯಕ್ತಿಗಳು – ಎಚ್.ಜೆ.ರಾಮಯ್ಯಂಗಾರ್

೨. ಕಗ್ಗದೊಳಗಿನ ಕುಂಬೈ ಪು.೫

ಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯದ ಕುರಿತು ಬಹು ಗಂಭೀರವಾಗಿ ಧೀರೋದಾತ್ತವಾಗಿ ಚಿಂತನೆಗೈದ ಶ್ರೇಯಸ್ಸು ಡಿ.ವಿ.ಜಿ.ರವರದ್ದಾಗಿದೆ. ಇವರ ಪ್ರಮುಖ ವಿಮರ್ಶಾಕೃತಿಗಳು : ೧) ಜೀವನ ಸೌಂದರ್ಯ ಮತ್ತು ಸಾಹಿತ್ಯ, ೨) ಸಾಹಿತ್ಯ ಶಕ್ತಿ ಮತ್ತು ಕಾವ್ಯ ಸ್ವಾರಸ್ಯ, ೩) ಜೀವನ ಮತ್ತು ಸಾಹಿತ್ಯಗಳ ಸಂಬಂಧ ಸಾಹಿತ್ಯದ ಸ್ವರೂಪ ಮತ್ತು ಸಾಹಿತ್ಯದ ಉದ್ದೇಶ ಡಿ.ವಿ.ಜಿ.ರವರ ವಿಮರ್ಶೆಯ ಪ್ರಮುಖ ಲಕ್ಷಣವಾಗಿದೆ.

ತಮ್ಮ ಸಾಹಿತ್ಯ ಶಕ್ತಿ ಕೃತಿಯ ಮುನ್ನಡಿಯಲ್ಲಿ ಸ್ವತಃ ಡಿ.ವಿ.ಜಿ. "ಸಾಹಿತ್ಯದ ಉಪಕಾರ ಮನೋರಂಜನೆ ಮಾತ್ರವಲ್ಲ; ಅದು ಜೀವನ ಪ್ರಯುಕ್ತವಾದ ಒಂದು ಶಕ್ತಿ, ಮಹಾಶಕ್ತಿ" ಎಂಬುದಾಗಿ ಬರೆಯುತ್ತಾರೆ. ಸಾಹಿತ್ಯ ಸಹೃದಯನಿಗೆ ಉಪಯಕ್ತವಾಗಿರಬೇಕೆಂಬುದೇ ಡಿ.ವಿ.ಜಿ.ರವರ ಆಶಯ.

ಡಿ.ವಿ.ಜಿ.ರವರ ಗ್ರಂಥಗಳು ಹರಡುವ ವಿಷಯ ಸಮೃದ್ಧಿ, ವೈವಿಧ್ಯ ಬೆರಗು ಮೂಡಿಸುತ್ತದೆ. ಅವು ಒಳಗೊಳ್ಳುವ ವಿಚಾರದ ವ್ಯಾಪ್ತಿ, ತಲಸ್ಪರ್ಶಿ, ತರ್ಕಬದ್ಧತೆ, ಚಿಂತನಶೀಲ ಲೇಖಕರಿಗೆ ಅನುಕರಣೀಯವೆನ್ನಿಸುತ್ತದೆ. ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲೆ, ಜೀವನ ಚರಿತ್ರೆ, ವ್ಯಕ್ತಿ, ಚಿತ್ರಣ, ವಿಮರ್ಶೆ, ಮೀಮಾಂಸೆ, ಜೀವನ ಸಂಸ್ಕರಣ ಇತ್ಯಾದಿ ಸಂಗತಿಗಳ ಮೇಲೆ ಅಧಿಕಾರಯುತವಾಗಿ ಬಡೆಯಬಲ್ಲ ಡಿ.ವಿ.ಜಿ.ರವರ ಭಾಷೆಯ ಸ್ಥಾಯಿ ಲಕ್ಷಣವೆಂದರೆ ವಿಷಯ ಸ್ಪಷ್ಟತೆ ಮತ್ತು ಗೊಂದಲಕ್ಕೆ ಆಸ್ಪದವೀಯದ ಸಂವಹನತೆ, ವಿಷಯದ ವಿದವತೆಗೆ ಅನುಕೂಲವಾಗುವಂತೆ ಡಿ.ವಿ.ಜಿ. ಆಗಿಂದಾಗ್ಗೆ ಹೋಲಿಕೆ, ದೃಷ್ಟಾಂತ, ಉಪಕಥೆ ಹಾಗೂ ಜೀವನ ಘಟನೆಗಳನ್ನು ಬಳಸುತ್ತಾರೆ. ಅವುಗಳದು ಅಧ್ಯಯನ ಯೋಗ್ಯವಾದ ಒಂದು ವಿಶಿಷ್ಟ ಜಗತ್ತು. ಅವುಗಳ ಸೊಂಪಿಗೆ ಸರಿಸಾಟಿಯಾದ್ದು ನಮ್ಮ ಸಾಹಿತ್ಯದಲ್ಲಿ ಮತ್ತೊಂದು ಸಿಗಲಾರದು.

ಡಿ.ವಿ.ಜಿರವರ ಪ್ರಕಾರ "ಶಬ್ದಕ್ಕೆ ಅರ್ಥ ಬರುವುದು ನಿಘಂಟಿನಿಂದ ಭಾವಕ್ಕೆ ಸ್ವಾರಸ್ಯ ಬರುವುದು ಅಂತರಂಗದ ಅನುಭವದಿಂದ ಅನುಬವ ಪರಿಪಾಕದಿಂದ". ಹೀಗೆ ತಮ್ಮದೇ ಆದ ಯೋಜನೆಗಳ ಮೂಲಕ ಸಾಹಿತ್ಯ ಪೋಷಣೆಗೈದ ಡಿ.ವಿ.ಜಿ.ರವರ ಸಾಹಿತ್ಯ ಭಂಡಾರ ಸರಸ್ವತಿಯ ಮಣಿಮುಕುಟದಲ್ಲಿ ಅಗ್ರ ಪಂಕ್ತಿಯಲ್ಲಿ ಸೇರಿ ರಾರಾಜಿಸುತ್ತಿವೆ.

ಪತ್ರಕರ್ತರಾಗಿ ಡಿ.ವಿ.ಜಿ.

"ಆಡುಮುಟ್ಟದ ಸೊಪ್ಪಿಲ್ಲ ಸರ್ವಜ್ಞ ಹೇಳದ ಮಾತಿಲ್ಲ" ಎಂಬ ನುಡಿಗೆ ಸರಿ ಸಮನಾಗಿ ಡಿ.ವಿ.ಜಿ. ಹೇಳಿದ ಮಾತಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ಡಿ.ವಿ.ಜಿ. ಜೀವನಾನುಭವಗಳ ಮೂಲಕವೇ ಬಹಳ ಎತ್ತರಕ್ಕೆ ಬೆಳೆದವರು. ಅಧಿಕಾರದ ದರ್ಪವನ್ನು, ಸಾಮರ್ಥ್ಯಶಕ್ತಿ, ತಮ್ಮ ಪ್ರತಿಭೆಗಳನ್ನು ತಾವಾಗಿಯೇ ಎಂದೂ ಯಾರಿಗೂ ಹೇಳಿಕೊಂಡವರಲ್ಲ ಎಲೆ ಮರೆಯ ಕಾಯಂತೆ ಬದುಕಿದವರು.

ತಮ್ಮ ಸಾಹಿತ್ಯದಲ್ಲಿ ಏನನ್ನು ಅಭಿವ್ಯಕ್ತಿಸಿದರೋ ಅಂತೆಯೇ ನಡೆದವರು ಡಿ.ವಿ.ಜಿ. ಎಂದೂ. ಸುಖಕ್ಕೆ ಹಿಗ್ಗದೆ, ದುಃಖಕ್ಕೆ ಕುಗ್ಗದೆ ಸಮಬಾಳ್ವೆ ನಡೆಸಿದವರು. 'ಪರೋಪಕಾರಾರ್ಥಂ ಇದಂ ಶರೀರಂ' ಎನ್ನುವ ಸುಭಾಷಿತದಂತೆ ತಮ್ಮ ಜೀವಿತದುದ್ದಕ್ಕೂ ಸಾರ್ವಜನಿಕ ಜಾಗೃತರಾಗಿ ನಾಗರೀಕ ಜೀವನದ ಅಭಿವೃದ್ಧಿಗಾಗಿ ಹೋರಾಡಿದರು.

ಡಿ.ವಿ.ಜಿ. ಪತ್ರಿಕೋದ್ಯಮವನ್ನು ಎಂದೂ ಆಶಿಸದಿದ್ದವರು ವಿಧಿ ಅವರನ್ನು ಪತ್ರಿಕಾ ಕ್ಷೇತ್ರದಿಂದಲೇ ಜೀವನವನ್ನು ಆರಂಭಿಸುವಂತೆ ಮಾಡಿತು. ಅವರು ಮನಸ್ಸು ಮಾಡಿದ್ದರೆ ತಮ್ಮ ವಿಫುಲವಾದ ಜ್ಞಾನ ಭಂಡಾರದಿಂದ ಉತ್ತಮವಾದ ಸರ್ಕಾರಿ ನೌಕರಿಯನ್ನೇ ಗಿಟ್ಟಿಸಬಹುದಾಗಿತ್ತು. ಆದರೆ ಆದರ್ಶವಾದಿಯಾದ ಡಿ.ವಿ.ಜಿ. ಅದಕ್ಕೆ ಮನಸ್ಸು ಕೊಡಲಿಲ್ಲ.

"ಜೀವನೋಪಾಯಕ್ಕಾಗಿ ಬೆಂಗಳೂರಿಗೆ ಬಂದು ವೃತ್ತ ಪತ್ರಿಕಾ ಕೆಲಸವನ್ನು ಉದರಂಭರಣಕ್ಕಾಗಿ ಪ್ರವೇಶಿಸಿ ಆರು ದಶಕಗಳ ಸುದೀರ್ಘಕಾಲ ಪತ್ರಿಕಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ತಮ್ಮ ಅನುಭವಗಳ ಪರಿಪಾಕವನ್ನು ಆಧರಿಸಿ 'ವೃತ್ತ ಪತ್ರಿಕೆ' ಎಂಬ ಗ್ರಂಥವನ್ನು ಬರೆದಿದ್ದಾರೆ. 'ಪತ್ರಿಕೋದ್ಯಮದ ಭೀಷ್ಮ ಪಿತಾಮಹ' ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಪತ್ರಿಕೋದ್ಯಮದ ವಿದ್ಯಾರ್ಥಿಗಳು ಇಂದಿಗೂ ಅವರ ವೃತ್ತ ಪತ್ರಿಕೆ ಕೃತಿಯನ್ನು ಅಧ್ಯಯನ ಮಾಡುತ್ತಿದ್ದಾರೆ. ಡಿ.ವಿ.ಜಿ.ರವರು ಪತ್ರಿಕೋದ್ಯಮ ಪ್ರಾರಂಭಿಸಿದಾಗ ಹಲವಾರು ಕಷ್ಟ–ನಷ್ಟಗಳನ್ನು ಅನುಭವಿಸಬೇಕಾಗಿತ್ತು. ಆರು ದಶಕಗಳಷ್ಟು ದೀರ್ಘಕಾಲ ಪತ್ರಿಕಾ ವೃತ್ತಿಯಲ್ಲಿ ತಮ್ಮ ಬದುಕನ್ನು ನಿಯೋಜಿಸಿಕೊಂಡ ಡಿ.ವಿ.ಜಿ.ಗೆ ಪತ್ರಿಕೋದ್ಯಮ ಕೇವಲ ವೃತ್ತಿಯಾಗಿರಲಿಲ್ಲ. ಅದೊಂದು ಅಸಿಧಾರಾವ್ರತವಾಗಿತ್ತು. ಸ್ವಾತಂತ್ರ್ಯ ಪೂರ್ವದ ರಾಜಕೀಯ, ಸಾಮಾಜಿಕ ಜೀವನದಷ್ಟೇ ಶಿಸ್ತಿನಿಂದ ಸ್ವಾತಂತ್ರ್ಯ ನಂತರದ ರಾಜಕೀಯದ ಬದುಕನ್ನು ಹತ್ತಿರದಿಂದ ಕಂಡ ಡಿ.ವಿ.ಜಿ. ಯಂತಹ ಹಿರಿಯ ಚೇತನ 'ವೃತ್ತ ಪತ್ರಿಕೆ'ಯನ್ನು ಬೆಳೆಸ ಹೊರಟಾಗಿನ ಸನ್ನಿವೇಶ ಮತ್ತು ಚಿಂತನೆ, ಚಿಂತನೆಗಳನ್ನರಗಿಸಿಕೊಂಡ ಕ್ರಮ – ಈ ಕಾಲದ ನಮ್ಮಂತವರಿಗೆ ಮುಖ್ಯವಾದದ್ದು."[೧]

ಡಿ.ವಿ.ಜಿ. ಅನಿರೀಕ್ಷಿತವಾಗಿ ಪತ್ರಿಕಾರಂಗಕ್ಕೆ ಕಾಲಿಟ್ಟರೂ, ಮಹತ್ತರವಾದ ಕಾರ್ಯವನ್ನು ಮಾಡಿದರು. ಪ್ರಾರಂಭದಲ್ಲಿ 'ಸೂರ್ಯೋದಯ ಪ್ರಕಾಶಿಕೆ' ಎಂಬ ಪತ್ರಿಕೆಗೆ ಬಾತ್ಮೀದಾರರಾಗಿ ಸೇರಿಕೊಂಡರು. ಒಂದೆರಡೆ ವರ್ಷಗಳಲ್ಲಿ ಆ ಪತ್ರಿಕೆ ನಿಂತು ಹೋಗಿ ಜೀವನ ನಿರ್ವಹಣೆ ಕಷ್ಟವಾಯಿತು. ನಂತರ ಬೆಂಗಳೂರು ದಂಡು ಪ್ರದೇಶದಿಂದ 'ಈವನಿಂಗ್ ಮೈಲ್' ಎಂಬ ಇಂಗ್ಲೀಷಿನ ಅರ್ಧವಾರ ಪತ್ರಿಕೆಯೊಡನೆ ಸಂಪರ್ಕ ಹೊಂದಿದ್ದರು. 'ಭಾರತಿ' ಎಂಬುದು ಗುಂಡಪ್ಪನವರ ಲೇಖನಿಯ ಸಹಾಯದಿಂದ ನಡೆಯುತ್ತಿದ್ದ ಮತ್ತೊಂದು ಪತ್ರಿಕೆ.

೧. ಡಿ.ವಿ.ಜಿ. ಸಮಗ್ರ ಕೃತಿ ಪರಿಶೀಲನೆ ಎಂ.ಎಸ್. ಕೋಟೆ ನಾಗಭೂಷಣ – ಪು. ೩೨೨

ಯಾವತ್ತೂ ಗೊಡ್ಡು ಸಂಪ್ರದಾಯಕ್ಕೆ ಮಣಿಯದಿದ್ದ ಡಿ.ವಿ.ಜಿ. ಪತ್ರಿಕೋದ್ಯಮದ ನಿಷ್ಟುರ ಸತ್ಯಗಳನ್ನು ಅರಿತಿದ್ದರು. ಮುಖ್ಯವಾಗಿ ಪತ್ರಿಕೋದ್ಯಮ ಯಾವುದೇ ಆಮಿಶಗಳಿಗೆ ಒಳಗಾಗದವರಾಗಿ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕೆಂಬ ಕಟು ಸತ್ಯವನ್ನು ಬೋಧಿಸಿದರು. ಸತತವಾದ ಪರಿಶ್ರಮವಿಲ್ಲದೆಯೆ ಯಾವುದೇ ಸಾಧನೆ ಮಾಡಲು ಸಾಧ್ಯವಿಲ್ಲ ಎಂಬ ಸತ್ಯವರಿತಿದ್ದ ಡಿ.ವಿ.ಜಿ.ರವರ ಪತ್ರಿಕೋದ್ಯಮದ ಸಾಧನೆಗೆ ಬ್ರಿಟೀಷರೇ ತಲೆದೂಗಿದ್ದರು, ಉತ್ಸುಕರಾಗಿದ್ದರು.

ನಿಷ್ಠುರವಾದಿಯಾಗಿದ್ದ ಡಿ.ವಿ.ಜಿ. ವೃತ್ತ ಪತ್ರಿಕಾ ಕಾನೂನನ್ನು ರದ್ದು ಮಾಡುವಂತೆ ಆ ಮೂಲಕ ಜನರ ಉದ್ದಾರಕ್ಕೆ ಸಹಕರಿಸಬೇಕೆಂದು ಆಗ್ರಹಿಸಿ ಒಂದು ವೇಳೆ ರದ್ದು ಮಾಡದಿದ್ದರೆ ಅವರ ಪಶುಶಕ್ತಿಯಿಂದ ಅವರಿಗೆ ಜಯವಾಗುತ್ತದೆಯೇ ಹೊರತು ಅವರ ನೈತಿಕ ಶಕ್ತಿಯಿಂದಲ್ಲ ಎಂದು ಗುಡುಗಿದರು. ನೆರೆದ ಜನರು ಸ್ತಂಭೀಭೂತರಾಗಿ ವೀಕ್ಷಿಸುತ್ತಿದ್ದ ಕ್ಷಣ ರೋಮಾಂಚಕಾರಿಯಾಗಿತ್ತೆನ್ನುತ್ತಾರೆ. ಆದರೆ ದಿವಾನ್ ಸಾಹೇಬರು ಮುಜುಗರಕ್ಕೊಳಗಾಗಿ ಭಾಷಣವನ್ನು ಅರ್ಧಕ್ಕೆ ನಿಲ್ಲಿಸದರಂತೆ. ಸತ್ಯ, ಪ್ರಾಮಾಣಿಕ ಬದುಕನ್ನು ನಡೆಸಿದ ಡಿ.ವಿ.ಜಿ. ಇಷ್ಟರ ಮಟ್ಟಿಗೆ ಕಟುತ್ವವಾಯಾಗಿ ಕಂಡು ಬರುತ್ತಾರೆ. ೧೯೦೮ರಲ್ಲಿ ಮೈಸೂರು ಸಂಸ್ಥಾನದಲ್ಲಿ ಜಾರಿಗೆ ಬಂದ ಒಂದು ಪತ್ರಿಕಾ ಕಾನೂನಿನ ಫಲವಾಗಿ ಅವರು ಮದ್ರಾಸಿಗೆ ಹೋಗಿ ಅಲ್ಲಿ ಕೆಲಕಾಲ ಇದ್ದು 'ವೀರಕೇಸರಿ' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಮದ್ರಾಸಿನ 'ಇಂಡಿಯನ್ ರೆವ್ಯೂ' ಪತ್ರಿಕೆಯಲ್ಲಿ ಪ್ರಕಟವಾದ ದಿವಾನ್ ರಂಗಾಚಾರ್ಲು ಅವರ ಆಡಳಿತವನ್ನು ಕುರಿತ ಲೇಖನದ ಫಲವಾಗಿ ಡಿ.ವಿ.ಜಿ.ರವರ ಪ್ರಸಿದ್ಧಿ ಹೆಚ್ಚಿತು.

ಅಖಂಡ ಕರ್ನಾಟಕ ವೃತ್ತ ಪತ್ರಿಕಾ ಕರ್ತೃಗಳ ಸಂಘವೊಂದನ್ನು ಬಾಗಲಕೋಟೆಯಲ್ಲಿ ಸ್ಥಾಪಿಸಿದರು. ಈ ಸಂಘಕ್ಕೆ ಡಿ.ವಿ.ಜಿ.ರವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ೧-೧೨-೧೯೪೦ರಲ್ಲಿ ಮೈಸೂರು ಪತ್ರಿಕೋದ್ಯಮಿಗಳ ಮೊದಲನೆಯ ಸಮ್ಮೇಳನ ಬೆಂಗಳೂರಿನಲ್ಲಿ ಡಿ.ವಿ.ಜಿ.ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಾಗೆಯೇ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಎರಡನೆಯ ಅಧಿವೇಶನ ತಿರುಮಲೆ ತಾತಾಚಾರ್ಯ ಶರ್ಮ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ ೧೯೪೩ರಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಡಿ.ವಿ.ಜಿ. ಪತ್ರಿಕೋದ್ಯೋಗಿಗಳಿಗಳು ಪಡೆಯಬೇಕಾಗಿರುವ ಶಿಕ್ಷಣದ ಅವಶ್ಯಕತೆಯನ್ನು ವಿವರಿಸಿದ್ದರು.

೧೬-೫-೧೯೪೯ರಲ್ಲಿ ಅಖಿಲ ಭಾರತ ಸಂಪಾದಕರ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಿತು. ಆಗ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದವರು ಡಿ.ವಿ.ಜಿ. ಭಾರತದ ಗವರ್ನರ್ ಜನರಲ್ ಆಗಿದ್ದ ಸಿ.ರಾಜಗೋಪಾಲಾಚಾರ್ಯರು ಸಮ್ಮೇಳನವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪತ್ರಕರ್ತರ ನಡಾವಳಿಯನ್ನು ನಿಯಮಿಸಲು ಒಂದು ನಿಯಮಾವಳಿ ಅಗತ್ಯವೆಂದು ಡಿ.ವಿ.ಜಿ. ಹೇಳಿದರು. ಪತ್ರಿಕಾ ನ್ಯಾಯಾಲಯದ ಅಗತ್ಯವನ್ನು ಪ್ರತಿಪಾಸಿದಿರು. ವೃತ್ತ ಪತ್ರಿಕೋದ್ಯಮದ ತರಭೇತಿಗಾಗಿ ಒಂದು ಸ್ಕೂಲು ಅಗತ್ಯ ಎಂದು ಆ ಉದ್ದೇಶಕ್ಕಾಗಿ

"ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ" ಸ್ಥಾಪಿಸಿದರು.

ಮೈಸೂರಿನಲ್ಲಿ ಪ್ರಜಾಪಕ್ಷವೆಂಬ ಪಾರ್ಟಿ ಹೊರಟ ಮೇಲೆ ಮತ್ತು ವೈಯಕ್ತಿಕ ಕಾರಣಗಳಿಂದ ಗುಂಡಪ್ಪನವರು 'ಕರ್ನಾಟಕ' ಪತ್ರಿಕೆಯನ್ನು ನಿಲ್ಲಿಸಿದರು. 'ಕರ್ನಾಟಕ ಎಂಡ್ ಇಂಡಿಯನ್ ರೆವ್ಯೂ ಆಫ್ ರೆವ್ಯೂಸ್' ಎಂಬ ಮಾಸ ಪತ್ರಿಕೆಯನ್ನು, 'ಕರ್ನಾಟಕ ಜನ ಜೀವನ ಮತ್ತು ಅರ್ಥಸಾಧಕ' ಪತ್ರಿಕೆ ಎಂಬ ಮಾಸ ಪತ್ರಿಕೆಯನ್ನು ಅವರು ಒಂದೊಂದು ವರ್ಷ ಪ್ರಕಟಿಸಿ ಸಲ್ಲಿಸಿದರು. ಹೀಗೆ ಡಿ.ವಿ.ಜಿ. ಸಾರ್ವಜನಿಕ ರಂಗದಲ್ಲಿ ಪತ್ರಿಕೋದ್ಯಮಿಯಾಗಿ ನ್ಯಾಯಯುತವಾಗಿ ದುಡಿಯುತ್ತ ಜನರ ಸೇವೆಗೈದರು.

ಡಿ.ವಿ.ಜಿ.ರವರ ಸಂಕೀರ್ಣ ಬರಹಗಳು

ಗುಂಡಪ್ಪನವರು ಎಂದೂ ತಮ್ಮ ಅಧ್ಯಯನವನ್ನು ನಿರ್ಲಕ್ಷಿಸಿದವರಲ್ಲ. ಬದುಕಿನುದ್ದಕ್ಕೂ ಜೀವನಾನುಭವದಿಂದ ಪಕ್ವಗೊಂಡ ಅನುಭವಗಳನ್ನೇ ಸಾಹಿತ್ಯ ಕೃತಿಗಳಾಗಿ ಬರೆದವರು. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮೊದಲಾದ ವಿಷಯಗಳಿಗೆ ಸಂಂಧಿಸಿದಂತೆ ಯೂರೋಪಿನ ಚಿರ ಕೃತಿಗಳನ್ನೆಲ್ಲ ಅಭ್ಯಾಸ ಮಾಡಿದವರು. ಕಾವ್ಯಮೀಮಾಂಸೆ, ವ್ಯಾಕರಣ, ಧರ್ಮಶಾಸ್ತ್ರ, ಮೊದಲಾದವುಗಳ ಅಧ್ಯಯನವೂ ಆ ವಿಚಾರಗಳಿಗೆ ಸಂಬಂಧಿಸಿದ ವಿವಿಧ ಬರಹಗಳಿಗೂ ಇವರ ಮೂಲಕ ನಡೆಯಿತು.

ಕವಿ ಕಾವ್ಯ ಜೀವಿಯಾಗಿ ಅನೇಕ ಕೃತಿಗಳನ್ನು ರಚಿಸಿದರು. ವನಸುಮ ಅವರ ಹಾಡು ಅತಿ ಜನಪ್ರಿಯವಾದದ್ದು. ಮಂಕುತಿಮ್ಮನ ಕಗ್ಗ, ಭೂತ, ವರ್ತಮಾನ, ಭವಿಷ್ಯತ್ ಕಾಲಗಳ ಕಾವ್ಯ ಸಾಹಿತ್ಯವಾಗಿದ್ದು,'ಎಲ್ಲ ಶತಮಾನಗಳ ಮಾನವ ಜನಾಂಗಗಳಿಗೂ ವಿಚಾರ ಪ್ರಚೋದಕವೆನಿಸಿದೆ.

ಇನ್ನು ಡಿ.ವಿ.ಜಿ.ರವರ ವಸಂತ ಕುಸುಮಾಂಜಲಿಯಲ್ಲಿ ೩ ಕವಿತೆಗಳಿವೆ. ಶತಾವಧಾನಿ ಡಾ. ಆರ್.ಗಣೇಶ್‌ರವರು ತಮ್ಮ ಡಿ.ವಿ.ಜಿ.ರವರ 'ಬೆಲೆ ಬಾಳುವ ಬರಹಗಳು' ಕೃತಿಯಲ್ಲಿ ಹೇಳುವಂತೆ ಅವರ ವಸಂತ ಕುಸುಮಾಂಜಲಿ ಸರಳರಿಗೆ ಅವರ ಭಾವಗೀತಾತ್ಮಕ ರಚನೆಯ ಸಿದ್ಧಿಯನ್ನು ಸ್ನೇಹ ಮಾಧುರ್ಯದ ಬುದ್ಧಿಯನ್ನು ಸರಳ-ಸುಂದರ ಭಾಷೆಯಲ್ಲಿ, ತೋರಿ, ಅವರ ಬದುಕಿನ ಪ್ರಮುಖ ಮೌಲ್ಯಗಳಲ್ಲಿ ಒಂದಾದ ನಮ್ರತೆಯನ್ನು ಧ್ವನಿಸುತ್ತದೆ.

ಇನ್ನು ನಿವೇದನದಲ್ಲಿ ನಿಸರ್ಗವರ್ಣನೆ ಮತ್ತು ಮಾನುಷೋನ್ನತಿಯನ್ನು ಕುರಿತ ಪದ್ಯಗಳಿವೆ. ಡಾ. ಆರ್.ಗಣೇಶ ಶತಾವಧಾನಿಗಳೇ ಹೇಳುವಂತೆ "ಈ ನಿವೇದನ ಕವನ ಸಂಕಲನದಲ್ಲಿ ಕಡೆಯಲ್ಲಿ ಡಿ.ವಿ.ಜಿ.ರವರ ಪತ್ನಿ ವಿಯೋಗದ ಸಂಗತಿ ತುಂಬ ಆರ್ದ್ರವಾದ ಸಾಹಿತ್ಯ-ಭಾಷೆಯು ಕೋಮಲವಾಗಿ ಮೂಡಿ ಬಂದಿದೆ. ಅವರ ಪ್ರಕೃತಿ ಪ್ರೀತಿ, ದೈವ ಶ್ರದ್ಧೆ ಮತ್ತು ಮಾನುಷ ಪ್ರೇಮಗಳು ಮುಪ್ಪುರಿಗೊಂಡ ಭಾವಪರಿಪಾಕದ ಸಿದ್ಧಿ" ಎನಿಸುತ್ತದೆ.

ಹಾಗೆಯೇ ಕೊಡಗಿನ ಬೆಡಗು, ಜೋಗದ ಜಲಪಾತ, ಶಿವನ ಸಮುದ್ರ, ಚಾಮುಂಡಿ

ದೀಪಗಳು ಮತ್ತು ಬಾಬಾ ಬುಡನ ಬೆಟ್ಟ ಕವನಗಳಿಂದಾಯ್ದು ಕವನ ಕಂದ ವೃತ್ತಗಳು ನಮ್ಮ ಭಾಷೆ–ಬಂಧಗಳಿಂದ ಪೂರ್ವದ ಚಂಪೂ ಕವಿಗಳಿಗೆ ಆಧುನಿಕ ಸಂವೇದನಗಳಲ್ಲಿ ಅವೆಂತು ಹೊಮ್ಮುತ್ತಿದ್ದವೆಂಬುದನ್ನು ತೋರಿಸಬಲ್ಲ. ಸಮರ್ಥಕರಚನೆಗಳೆಂದೂ ಶತಾವಧಾನಿ ಡಾ. ಆರ್. ಗಣೇಶ್‌ರವೇ ಹೇಳುತ್ತಾರೆ.

ಇನ್ನು ಕೇತಕೀವನ ಡಿ.ವಿ.ಜಿ.ರವರ ಕೊನೆಗಾಲದಲ್ಲಿ ಬಿಚ್ಚಾದ ಹೊತ್ತಿಗೆಯಾದರೂ ಅಲ್ಲಿನ ಕವಿಗಳೆಲ್ಲ ಕನ್ನಡದ ನವೋದಯ ಕಾವ್ಯ ಯುಗವು ಆರಂಭವಾಗುತ್ತಿದ್ದ ಹೊತ್ತಿನವೇ.

ಶ್ರೀರಾಮ – ಶ್ರೀಕೃಷ್ಣ ಪರೀಕ್ಷಣಂಗಳು ಡಿ.ವಿ.ಜಿ.ರವರ ವಿಶಿಷ್ಟ ರಚನೆಗಳು, ಇಲ್ಲಿ ಭಾವಕ್ಕಿಂತ ಬುದ್ಧಿಯೇ ಮಿಗಿಲಾಗಿದೆ.

ನಮ್ಮ ನಾಡು ಬ್ರಿಟಿಷರಿಂದ ಬಿಡುಗಡೆಗೊಂಡ ನಟ್ಟಿರುಳಿನಂದೆ ಡಿ.ವಿ.ಜಿ.ರವರು ಬರೆದು ಪ್ರಕಟಿಸಿದ "ಸ್ವತಂತ್ರ ಭಾರತಾಭಿನಂದನಸ್ತವ"ವು ಅದೊಂದು ರೀತಿಯ ಪುರಾಣವೆನ್ನಬೇಕು. ಗಂಭೀರವೂ, ಪ್ರೌಢವೂ ಆದ ಈ ಕಾವ್ಯ ಡಿ.ವಿ.ಜಿ.ರವರ ವೃತ್ತ ನಿರ್ವಾಹಕ್ಕೊಂದು ಸುಂದರ ನಿದರ್ಶನ.

"ಚನ್ನಕೇಶವನ ಮತ್ತು ಅನ್ತಃಪುರಗೀತೆಗಳು ಡಿ.ವಿ.ಜಿ. ರವರದಷ್ಟೇ ಅಲ್ಲ, ಕನ್ನಡ ಸಾಹಿತ್ಯದ ಗೀತರಚನೆ ವರ್ಗದಲ್ಲೇ ಅಪೂರ್ವಸಿದ್ಧಿಗಳು ಇದೇ ಜಾಡಿನಲ್ಲಿ ಸಾಗುವಂತಹದ್ದು ಅವರ ಗೀತ ಶಾಕುಂತಲ.

ಗೀತ ಶಾಕುಂತಲ ಹೆಸರೇ ಸೂಚಿಸುವಂತೆ ಕಾಳಿದಾಸನ ಶಾಕುಂತಲ ನಾಟಕದಲ್ಲಿ ಬರುವ ಕೆಲವು ಸರಸ ಸಂದರ್ಭಗಳನ್ನು ಕುರಿತ ಗೀತಾನುವಾದಗಳು. ಈ ಕೃತಿಯಲ್ಲಿ ಒಟ್ಟು ೩೬ ಗೀತಾನುವಾದಗಳಿವೆ. ಪುಟದ ಒಂದು ಮಗ್ಗುಲಲ್ಲಿ ಈ ಗೀತಾನುವಾದಗಳು ಮತ್ತೊಂದು ಮಗ್ಗುಲಲ್ಲಿ ಈ ಗೀತೆಗಳಿಗೆ ಸಂಬಂಧಿಸಿದ ಮೂಲ ಸಂಸ್ಕೃತಿ ನಾಟಕದ ಶ್ಲೋಕ ಮತ್ತು ವಚನಗಳನ್ನು ಕೊಟ್ಟಿದ್ದಾರೆ.[೧]

'ಶೃಂಗಾರ ಮಂಗಳಂ' ಕೃತಿ ಅಂತಃಪುರ ಗೀತದ ಮೂಲ ಸ್ಫೂರ್ತಿಯಾದ 'ಕೀಟ್ಸ್'ನ Ode to the Gratian urn ಕವಿತೆಯನ್ನು, ಮತ್ತಿತರ ಮೌಲಿಕ ವಿಚಾರಗಳನ್ನು ಆಧರಿಸಿದ ಚಿಂತನ ಕವಿತೆ ಎನ್ನುತ್ತಾರೆ. ಶತಾವಧಾನಿ ಡಾ. ಆರ್.ಗಣೇಶ್‌ರವರು.

"ದಾರ್ಶನಿಕ, ಸಾಹಿತ್ಯ ಸಮ್ಯಗ್ದರ್ಶನದ ಚಿಲುಮೆಯಾಗಿದ್ದ ಡಿವಿಜಿ ಸದಾ ದೈವತ್ವಕ್ಕೆ ತಲೆಬಾಗಿ ಬಾಳಿದವರು ಯಾವುದನ್ನು ತಿಳಿದರೆ ಎಲ್ಲವನ್ನು ತಿಳಿದಂತಾಗುತ್ತದೋ ಅಂಥ ಜ್ಞಾನಾರಾಧಕರಾಗಿದ್ದವರು. ಆದ್ದರಿಂದಲೇ ಅವರು 'ದೇವರು' ಎಂಬ ವಿಚಾರದ ಬಗ್ಗೆ ತಮ್ಮ ನಿರ್ದಿಷ್ಟವಾದ, ಸಂಶಯವಿಲ್ಲದ ದೃಢ ವಿಶ್ವಾಸದ ಚಿಂತನೆಯನ್ನು ನಡೆಸಿದ್ದಾರೆ. ತಮ್ಮ 'ದೇವರು' ಎಂಬ ಕೃತಿಯಲ್ಲಿ."

'ಬಾಳಿಗೊಂದು ನಂಬಿಕೆ' ಕೃತಿ ಜೀವನದ ಬಗೆಗೆ ಅರಿವು ಮೂಡಿಸುತ್ತ, ಬದುಕಿನ

ಶೈಲಿ ಹೇಗಿರಬೇಕೆಂಬುದನ್ನು ಬೋಧಿಸುತ್ತಿದೆ. ಉತ್ತಮ ವಾಕ್ ಚಾತುರ್ಯವನ್ನು ಹೊಂದಿದ್ದ ಡಿ.ವಿ.ಜಿ. ವೇದಿಕೆ ಏರಿ ಭಾಷಣ ಮಾಡತೊಡಗಿದರೆ ಸಭೆಯೇ ದಂಗಾಗಿ ಕೂರಿತ್ತುತ್ತು. ಇವರು ಮಾಡಿದ ಭಾಷಣಗಳ ಸಂಗ್ರಹವೇ ಈ ಬಾಳಿಗೊಂದು ನಂಬಿಕೆ ಕೃತಿ.

ಉಮರನ ಒಸಗೆ ಕೃತಿ ೧೯೩೦ರಲ್ಲಿ ಮೊದಲು ಬೆಳಕಿಗೆ ಬಂತು. "ಒಂದಲ್ಲ ಒಂದು ದಿನ ಪ್ರತಿ ಜೀವಿಯೂ ತನ್ನ ಬದುಕಿನ ಬಗೆಗೆ, ಬದುಕಿಗೆ ಇರಬಹುದಾದ ಅರ್ಥದ ಬಗೆಗೆ, ತನಗೂ ಸುತ್ತಣ ಸಮಾಜ ಹಾಗೂ ಇರಬಹುದಾದ ದೇವರ ನಡುವಣ ಸಂಬಂಧದ ಬಗೆಗೆ ಕೇಳಿಕೊಳ್ಳುವ ಪ್ರಶ್ನೆಗಳೇ ಉಮರನ ಕಾವ್ಯವಸ್ತು" ಎನ್ನುತ್ತಾರೆ ಉಮರನ ಒಸಗೆ ಕೃತಿ ಪರಿಶೀಲಿಸಿದ ಬಿ.ಸಿ.ರಾಮಚಂದ್ರ ಶರ್ಮ.

ಡಿ.ವಿ.ಜಿ.ರವರ ವಿದ್ಯಾರಣ್ಯರು ಮತ್ತು ಅವರ ಕಾಲ, ವಿದ್ಯಾರಣ್ಯರ ಸಮಕಾಲೀನರು ಶ್ರೀ ವಿದ್ಯಾರಣ್ಯ ವಿಜಯ ಅಥವಾ ವಿಜಯನಗರ ರಾಜ್ಯ ಸ್ಥಾಪನೆ ಮತ್ತು ಶ್ರೀ ವಿದ್ಯಾರಣ್ಯಸ್ತುತಿ ಎಂಬ ನಾಲ್ಕು ರಚನೆಗಳು ಈ ನಾಲ್ಕರ ವಸ್ತು ವಿದ್ಯಾರಣ್ಯರ ವ್ಯಕ್ತಿತ್ವದ ಹಾಗೂ ಕಾಲದ ತಿಳಿವಳಿಕೆಯನ್ನು ಪರಸ್ಪರವಾಗಿ ಪೂರೈಸಿಕೊಡುವ ಉದ್ದೇಶದಿಂದ ವಿನ್ಯಾಸಗೊಂಡುದಾಗಿದೆ.

ಇಂದ್ರವಜ್ರ–ಬೆಕ್ಕೋಜಿ ಡಿ.ವಿ.ಜಿ.ರವರ ಮತ್ತೊಂದು ಕೃತಿ. "ಡಿ.ವಿ.ಜಿ. ಸಮಗ್ರ ಕೃತಿ ಪರಿಶೀಲನೆ" ಎಂಬ ಕೃತಿಯಲ್ಲಿ ಡಿ.ವಿ.ಜಿ.ರವರ ಇಂದ್ರವಜ್ರ – ಬೆಕ್ಕೋಜಿ ಕೃತಿ ಕುರಿತ ಲೇಖನದಲ್ಲಿ ಜೆ.ಎಸ್. ವಸಂತ ಹೇಳುವಂತೆ "ಮಕ್ಕಳಿಗಾಗಿಯೇ ರಚಿತವಾದ ಈ ಕಿರುಹೊತ್ತಿಗೆ ನೀತಿಯಷ್ಟೇ ಪ್ರಧಾನ ಉದ್ದೇಶವಾಗಿ ಉಳ್ಳದ್ದಾಗಿದೆ. ಈ ಸಂಗ್ರಹ ಮೂರು ಸಣ್ಣಕಥೆಗಳನ್ನು ಒಳಗೊಂಡಿವೆ." ಇಂದ್ರವಜ್ರ ಜನಪದ ಕಥೆಯಂತಿದೆ. ಬೆಕ್ಕೋಜಿ ಹಾಸ್ಯಪ್ರಧಾನತೆಯ ಮೂಲಕ ಬಾಲಸಹಜ ಕುತೂಹಲವನ್ನು ಕೆರಳಿಸುತ್ತದೆ.

ಇಷ್ಟೇ ಅಲ್ಲದೆ ಡಿ.ವಿ.ಜಿ. ತಿಲೋತ್ತಮೆ ಎಂಬ ನಾಟಕ, ಮ್ಯಾಕ್‌ಬೆತ್ ಎಂಬ ಅನುವಾದಿತ ನಾಟಕ, ಶ್ರೀ ಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ ಎಂಬ ಇನ್ನು ಹಲವಾರು ಕೃತಿಗಳನ್ನು ರಚಿಸಿ ಜನ ಮಾನಸದಲ್ಲಿ ಚಿರವಾಗಿ ಉಳಿದಿದ್ದಾರೆ.

ಮರುಳು ಮುನಿಯನ ಕಗ್ಗ ಕೃತಿಯೂ ಸಹ ಮಂಕುತಿಮ್ಮನ ಕಗ್ಗದಂತೆ ಅತ್ಯುತ್ತಮವಾದ ಮುಕ್ತಕ ಸಾಹಿತ್ಯ ಕೃತಿ. ಜೀವನದ ಮೂಲಾರ್ಥವನ್ನು ಮನದಟ್ಟು ಮೂಡಿಸುತ್ತ ಅಂಧಕಾರದಲ್ಲಿರುವ ಜಗತ್ತನ್ನು ಬೆಳಕಿನೆಡೆಗೆ ಕೊಂಡೊಯ್ಯುತ್ತದೆ.

ಅಧ್ಯಾಯ-೩

ಕನ್ನಡದ ತತ್ವಕಾವ್ಯ ಚರಿತ್ರೆ

ಸಾಹಿತ್ಯದ ವಿಶಿಷ್ಟ ಅಭಿವ್ಯಕ್ತಿಯ ಮಾಧ್ಯಮವಾಗಿ ತತ್ವಪದಗಳು ಮಹತ್ವವನ್ನು ಹೊಂದಿವೆ. ತತ್ವ ಪದಗಳು ಜನಸಾಮಾನ್ಯರಿಗೆ ಬದುಕಿನ ವೈಖರಿಯನ್ನು ತಿಳಿಸುತ್ತವೆ. ಇವು ಜನರಿಗೆ ಕೇವಲ ತತ್ವಗಳನ್ನು ಆದರ್ಶಗಳನ್ನಷ್ಟೇ ಉಪದೇಶಿಸದೆ ತತ್ವಪದಕಾರರ ಕಾಲದ ಸಂಪೂರ್ಣ ಜನ ಜೀವನದ ಚಿತ್ರಣಗಳನ್ನು ಅಭಿವ್ಯಕ್ತಿಸುತ್ತವೆ. ಅಂದರೆ ಸಮರ್ಪಕವಾಗಿ ಕಟ್ಟಿಕೊಡುತ್ತವೆ. ತತ್ವಪದಕಾರರು ಸಮಾಜವನ್ನು ತಿದ್ದುತ್ತ, ಸಮಾಜದ ಉನ್ನತಿಗೆ ಸ್ಪಂದಿಸಿದರು.

ಅನುಭಾವ ಪದಗಳಿಗೆ ಭಜನೆ ಪದಗಳೆಂದು, ತತ್ವಪದಗಳೆಂದು, ಸ್ವರ ವಚನಗಳೆಂದು ಹೆಸರುಗಳಿವೆ. ಜನರಲ್ಲಿ ಮನೆಮಾಡಿದ್ದ ಮೌಢ್ಯ, ಅಂಧಕಾರ, ಅನ್ಯಾಯ, ಅಕ್ರಮಗಳ ನಿರ್ಮೂಲನೆ ಸಮರ್ಥವಾಗಿ ದುಡಿಯುವುದೇ ಇವರ ಉದ್ದೇಶವಾಗಿತ್ತು. ಸಮಾಜದ ಜನರಲ್ಲಿ ಸಮನ್ವಯತೆಯನ್ನು ಬೋಧಿಸುವುದು ಇವರ ಮುಖ್ಯ ಉದ್ದೇಶವಾಗಿತ್ತು. ಜನ ಸಾಮಾನ್ಯರಿಗೆ ಬದುಕಿನ ಸಾರ್ಥಕತೆಯನ್ನು ತಿಳಿಸುತ್ತಾ ಬಂದರು. ಜನರಿಗೆ ನೈತಿಕ ಮಾರ್ಗದರ್ಶನ ನೀಡಿದರು. ಆಧ್ಯಾತ್ಮಿಕ ಮಾರ್ಗವನ್ನು ಪರಿಚಯಿಸುತ್ತ ಇಹ-ಪರ ಬದುಕಿನ ಗೌಪ್ಯತೆಯನ್ನು ಮಹತ್ವವನ್ನು ಮನದಷ್ಟು ಮಾಡಿಸಲು ಕಾಳಜಿ ವಹಿಸಿದರು.

"ಶಿಷ್ಟ ಸಾಹಿತ್ಯದಂತೆ ಕೇವಲ ಸಮಾಜದ ಮೇಲ್ವರ್ಗಗಳ ಓದಿಗೆ ಸೀಮಿತವಾಗದೆ ಭಾರತೀಯ ಸಂಸ್ಕೃತಿಯ ಅತ್ಯಂತ ವಿಶಿಷ್ಟ ಅಭಿವ್ಯಕ್ತಿ ರೂಪವಾದ ಮೌಖಿಕ ಮಾಧ್ಯಮದ ಅನಂತ ಸಾಧ್ಯತೆಗಳನ್ನು ಪರಿಣಾಮಕಾರಿಯಾಗಿ ದುಡಿಸಿಕೊಂಡ ರಚನೆಗಳಿವು. ಕೆಲವು ತತ್ವಪದಗಳನ್ನು ಬರೆದು ಇಟ್ಟಿದ್ದರೂ ಅವುಗಳ ಪ್ರಸಾರವಾದದ್ದು ಹಾಡಿನ ಮೂಲಕ, ಭಜನೆಗಳ ಮೂಲಕ, ಮಠಗಳು, ಗುಡಿಗಳು, ಅನುಭಾವಗೋಷ್ಠಿಗಳು, ಭಜನಾ ಮೇಳಗಳು ಹಳ್ಳಿಗಾಡಿನ ಮೂಲೆ ಮೂಲೆಗಳಲ್ಲೂ ಇಂದಿಗೂ ಕ್ರಿಯಾಶೀಲವಾಗಿದ್ದು, ಪುಟ್ಟ ಸಂಸ್ಕೃತಿ ಕೇಂದ್ರಗಳಾಗಿ, ಬಹುದೊಡ್ಡ ಸಂಖ್ಯೆಯ ಅನಕ್ಷರಸ್ಥರಲ್ಲಿ ಸಂಸ್ಕೃತಿ ಪ್ರಸಾರದ ಮಹತ್ವದ ಕೆಲಸ ಮಾಡುತ್ತಿವೆ. ಅಕ್ಷರದ ನೆರವಿಲ್ಲದೆಯೂ ಒಂದು ಜನಾಂಗ ಹೇಗೆ ತನ್ನ ಸಂಸ್ಕೃತಿಯನ್ನು ಅರ್ಥಪೂರ್ಣವಾಗಿ ಬೆಳೆಸಿಕೊಳ್ಳಬಲ್ಲದೆಂಬುದಕ್ಕೆ ಇದೊಂದು ದೊಡ್ಡ ನಿದರ್ಶನವಾಗಿದೆ."[೧]

ಪಾಶ್ಚಾತ್ಯ ಸಂಸ್ಕೃತಿ ನಮ್ಮನ್ನು ಮೋಹಿಸುವ ಮುಂಚೆ ನಮ್ಮ ದೇಶೀಯ ಸಂಸ್ಕೃತಿಯನ್ನು ರೂಪಿಸಿದ್ದ ಅಂಶಗಳನ್ನು ಈ ತತ್ವಪದಗಳಿಂದ ಗುರುತಿಸಬಹುದಾಗಿದೆ. ಅಂತೆಯೇ ಪಶ್ಚಿಮದ ಸಂಸ್ಕೃತಿಯ ದಾಳಿಗೆ ಸಿಕ್ಕಿ ತತ್ತರಿಸುತ್ತಿರುವ ಇಂದಿನ ನಮಗೆ. ಅದನ್ನು ಪರಿಣಾಮಕಾರಿಯಾಗಿ ಎದುರಿಸುವ, ಅವರೊಂದಿಗೆ ಅರ್ಥಪೂರ್ಣ ಒಡಂಬಡಿಗೆ ಮಾಡಿಕೊಳ್ಳುವ

೧. ತತ್ವಪದಗಳು ಪ್ರಾತಿನಿಧಿಕ ಸಂಕಲನ-ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು-ಅಧ್ಯಕ್ಷರ ಮಾತು)

ತಂತ್ರೋಪಾಯಗಳೂ ಇಲ್ಲಿ ಸಿಗಬಹುದಾಗಿದೆ.

ಪಂಡಿತ ಮಾನ್ಯವಾಗಿದ್ದ ಶಿಷ್ಟ ಸಾಹಿತ್ಯ ತನ್ನ ಶಿಷ್ಟತೆಯ ಕಾರಣಕ್ಕಾಗಿ ಜನ ಮನ್ನಣೆಯನ್ನು ಕಳೆದುಕೊಂಡು ಮಂಕಾಗುತ್ತಿದ್ದ ಸಂದರ್ಭದಲ್ಲಿ ಜನಭಾಷೆಯ ಮೌಖಿಕ ಪರಂಪರೆಯ ಈ ತತ್ವಪದ ಸಾಹಿತ್ಯ ತನ್ನ ಪ್ರಭಾವವನ್ನು ಕ್ರಮೇಣವಾಗಿ ಬೀರುತ್ತ ಜನ ಮಾನಸದಲ್ಲಿ ನೆಲೆಯೂರತೊಡಗಿತು. ತತ್ವಪದಕಾರರು ಜನರನ್ನು ಆಕರ್ಷಿಸುತ್ತ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಅವರಿಗೆ ಬೋಧನೆ ಮಾಡತೊಡಗಿದರು. ಮುಖ್ಯವಾಗಿ ತತ್ವಪದ ಸಾಹಿತ್ಯದ ವ್ಯಾಪ್ತಿಯಲ್ಲಿ ವೀರಶೈವ ಪರಂಪರೆ ಮತ್ತು ಹರಿದಾಸ ಪರಂಪರೆಗಳು ತಮ್ಮದೇ ಆದ ವಿಶೇಷ ಪ್ರಭಾವವನ್ನು ಬೀರಿದವು. ಸಮಾಜದ ಜಾತಿ ಶ್ರೇಣಿಯಲ್ಲಿ ಕೆಳಮಟ್ಟದವರೆಂದು ಹಣೆ ಪಟ್ಟಿಯನ್ನು ಹೊತ್ತಿದ್ದ ಕೆಳವರ್ಗದ ಜನರೂ ಸಹ ಈ ತತ್ವಪದಕಾರರಿಗೆ ಪ್ರೋತ್ಸಾಹ ನೀಡುತ್ತಾ, ತಮ್ಮದೇ ಆದ ರಚನೆಗಳ ಮೂಲಕ ವಿಶೇಷ ಕೊಡುಗೆಗಳನ್ನು ಕೊಟ್ಟರು.

ತತ್ವಪದಕಾರರ ಬೋಧನೆ, ಹಿತ ನುಡಿಗಳಿಗೆ ಕಿವಿಗೊಟ್ಟ ಜನತೆ ಬದುಕಿನ ಶೈಲಿಯನ್ನು ಬದಲಿಸಿಕೊಂಡರು. ಅವರ ಮಾತುಗಳಿಗೆ ಸ್ಪಂದಿಸಿದ ಜನ ತಮ್ಮ ನಡುವಿನ ತಾರತಮ್ಯಗಳನ್ನು ಕಳಚಿಕೊಂಡು ಪರಸ್ಪರ ಕೊಡು–ಕೊಳ್ಳುವ ವ್ಯವಹಾರಗಳನ್ನು ಕೈಗೊಂಡರು. ಭಾತೃತ್ವಕ್ಕೆ ಹೆಸರಾದ ಈ ಗುಂಪಿನಲ್ಲಿ ಸೂಫಿಗಳು, ಮುಸ್ಲಿಮರೂ ಸಹ ಭಾಗವಹಿಸಿದ್ದರು. ಜಾತಿ, ಮತ, ಧರ್ಮ, ಪಂಥಗಳನ್ನೂ ಮೀರಿದ ಸೌಹಾರ್ದಯುತ ಆಂದೋಲನ ಇದಾಗಿತ್ತು. ಸಮಾಜದ ಮೇಲು–ಕೀಳಿನ ತಾರತಮ್ಯಕ್ಕೆ ಒಳಗಾಗಿ, ಉಸಿರು ಕಟ್ಟುವ ವಾತಾವರಣದಲ್ಲಿದ್ದ ಜನಕ್ಕೆ ವಿಶಾಲವಾದ ಪರಿಸರಕ್ಕೆ ಬಂದಾಗ ಮೂಡುವ ಅನುಭವವಾಯಿತು. ಸ್ವಚ್ಛಂದ ಪಕ್ಷಿಗಳಂತೆ ನೆಮ್ಮದಿಯ ನಿಟ್ಟುಸಿರು ಬಿಟ್ಟು ವ್ಯವಹರಿಸ ತೊಡಗಿದರು. ತಾವೂ ಸಹ ಅಭಿವ್ಯಕ್ತಿ ಮಾಡುವ ಮೂಲಕ ಅಭಿವೃದ್ಧಿಯ ಪಥದಲ್ಲಿ ಮುನ್ನುಡಿಯಿಟ್ಟರು.

ತತ್ವಪದ ಸಾಹಿತ್ಯವು ಕ್ರಿ.ಶ. ಸು. ೧೨ನೆಯ ಶತಮಾನದಲ್ಲಿ ಪ್ರಾರಂಭಗೊಂಡು ಇನ್ನೂ ಸಹ ಬೆಳವಣಿಗೆಯ ಪ್ರಕ್ರಿಯೆಯಲ್ಲೇ ಇದೆ. ತತ್ವಪದಕಾರರಲ್ಲಿ ಮೊದಲಿಗರಾಗಿ ವಚನಕಾರರು ಕಾಣಿಸಿಕೊಂಡರೆ ಅವರನ್ನು ಅನುಕರಿಸಿ ದಾಸರು ನಂತರ ನಿಜಗುಣಶಿವಯೋಗಿಗಳು ಹೀಗೆ ಪಟ್ಟಿ ಬೆಳೆಯುತ್ತದೆ. ಕಾಲ ಕ್ರಮೇಣ ಜಾತಿ ಮತಗಳನ್ನು ಮೀರಿ ಎಲ್ಲ ವರ್ಗ ಪಂಥದವರೂ ಇಲ್ಲಿ ಭಾವಹಿಸಿದರು. ತತ್ವಪದಕಾರರ ಬೋಧನೆ ಮುಖ್ಯವಾಗಿ ಜನರಿಗೆ ಸರಳತೆ, ಸ್ಪಷ್ಟತೆಗಳನ್ನು ತಿಳಿಸುವುದು. ಜಾತಿ, ಲಿಂಗ ಭೇದಗಳನ್ನು ಹೋಗಲಾಡಿಸಿ ವರ್ಗ, ವರ್ಣ ರಹಿತ ಸಮಾಜವನ್ನು ನಿರ್ಮಾಣ ಮಾಡುವುದೇ ಆಗಿತ್ತು. ಜನರ ಮನಸ್ಸಿನಲ್ಲಿ ಬೇರೂರುತ್ತಿದ್ದ ಸಂಕುಚಿತ ಮನೋಭಾವಗಳನ್ನು ಕಿತ್ತು ಹಾಕಿ ಪರಸ್ಪರರಲ್ಲಿ ಪ್ರೀತಿ, ಅನುಕಂಪಗಳ ಬೀಜವನ್ನು ಬಿತ್ತುವುದಾಗಿತ್ತು. ಪರಧರ್ಮಗಳನ್ನು ತಿಳಿದು, ಅನ್ಯಧರ್ಮೀಯರಲ್ಲಿ ಸಹಿಷ್ಣುತಾ ಮನೋಭಾವವನ್ನು ಕೋರುತ್ತ ಸಮಾಜದ ಹಿತ ಕಾಯುವುದೇ ಇವರ ಗುರಿ.

[illegible]

"ಮಾನವ ಜಾತಿ ತಾನೊಂದು ವಲಂ" ಎಂಬ ಪಂಪನ ಮಾತನ್ನು ಸಾರ್ಥಕಗೊಳಿಸುವ ಮಾರ್ಗದಲ್ಲಿ ನಡೆದು ಪರಧರ್ಮಗಳನ್ನು ಪ್ರೀತಿಸಿ, ಗೌರವಿಸುತ್ತ ಬೇರೆ ಧರ್ಮಗಳನ್ನೂ ಕುರಿತು ಸಮಾಜದ ಕಟ್ಟುಪಾಡುಗಳನ್ನು ಲೆಕ್ಕಿಸದೆ ಹಾಡಿದರು. ದೇವನೊಬ್ಬ ನಾಮ ಹಲವು ಎಂಬ ತತ್ವ ವಾಕ್ಯವನ್ನು ಸಮರ್ಥಿಸಿ ತೋರಿಸಿದರು. "ಜಾನಪದ ಕಾವ್ಯ, ವಚನಗಳು, ಕೀರ್ತನೆಗಳು ಮತ್ತು ಸಾಂಗತ್ಯದ ಮೂಲಕ ಒಂದು ದೊಡ್ಡ ಪರಂಪರೆಯನ್ನೇ ಹೊಂದಿರುವ ಕನ್ನಡ ಭಾವಗೀತೆಯಲ್ಲಿ ವಚನಗಳು ಮತ್ತು ಕೀರ್ತನೆಗಳು ಭಕ್ತಿ ಪ್ರಧಾನವಾದುವು. ಅವುಗಳಲ್ಲಿ ಸ್ವಂತ ದೌರ್ಬಲ್ಯಗಳ ನಿವೇದನೆ, ದೇವರ ಬಗ್ಗೆ ಪ್ರೇಮ ಮತ್ತು ಪ್ರಾರ್ಥನೆಯ ಅಂಶಗಳು ಮುಖ್ಯವಾದುವು. ಅವು ಸಮಾಜಮುಖಿಯಾದವು. ಅವುಗಳಲ್ಲಿ ಸಮಾಜಿಕ ವಿಮರ್ಶೆ, ನೀತಿ ಬೋಧನೆ ಮತ್ತು ದೈವದ ಕಡೆ ಜನರ ಮನಸ್ಸನ್ನು ತಿರುಗಿಸುವ ಲಕ್ಷಣಗಳು ಕಾಣುತ್ತಿದ್ದವು. ಜಾನಪದ ಮುಖ್ಯವಾಗಿ ಕೌಟುಂಬಿಕ ಪ್ರೇಮ, ಗಂಡು ಹೆಣ್ಣಿನ ಪ್ರೇಮ, ದೈನಂದಿನ ಬದುಕಿನ ಸಂತೋಷ ಬವಣೆಗಳನ್ನು ಅಭಿವ್ಯಕ್ತಿಸುತ್ತಿತ್ತು. ವಚನಗಳು ಮತ್ತು ಕೀರ್ತನೆಗಳ ಹಿನ್ನೆಲೆಯಲ್ಲಿದ್ದ ತತ್ವ ಜಿಜ್ಞಾಸೆ ಜಾನಪದ ಕಾವ್ಯದಲ್ಲಿ ಇರಲಿಲ್ಲ."[೧]

ಕೆಲವರು ಸುಶಿಕ್ಷಿತರಲ್ಲದ ತತ್ವಪದಕಾರರು ಅನುಭವನಿಷ್ಠ ಮಾತುಗಳ ಮೂಲಕ ಜನಮನ್ನಣೆ ಪಡೆದು ಸಂತರೆಂದು, ಸಾಧುಗಳೆಂದು ಖ್ಯಾತರಾದರು. ಆದರೆ ಅವರ ಬರಹಗಳು, ಅವರ ಮೌಖಿಕ ನುಡಿಗಳು ಪ್ರಚಾರಕ್ಕೆ ಬಾರದೇ ಮೂಲೆ ಸೇರಿದವು. ಆದರೂ ಅವರ ನುಡಿಗಳನ್ನು ಆಲಿಸಿದ್ದ ಜನ ಬಾಯಿಂದ ಬಾಯಿಗೆ ಪಠಿಸುತ್ತ ಇಂದೂ ಸಹ ಅವರ ಹೆಸರನ್ನು ಹೇಳುತ್ತ ಅವರು ಜನಿಸಿದ್ದ ಸ್ಥಳಗಳನ್ನು ಪವಿತ್ರವೆಂದು ಗೌರವಿಸುತ್ತಾರೆ.

ತತ್ವಪದಕಾರರು 'ಆತ್ಮಜ್ಞಾನಿ'ಗಳು ಅವರನ್ನು ನೆನೆವುದೇ ನಮಗೆ ಪುಣ್ಯ ಸಂಪಾದನೆ ಮಾಡಿದಂತೆ. ಅವರುಗಳ ಕಾವ್ಯ ರಚನೆಯನ್ನು ಅಧ್ಯಯನ ಮಾಡುವುದು. ಅದು ನಮ್ಮ ಅಂತರಂಗದ ಶ್ರೇಯೋಭಿವೃದ್ಧಿಗೆ ಸಹಕಾರಿ. "ತತ್ವವೆಂದರೇನು? ಕನ್ನಡಕ್ಕೆ ಶಬ್ದಶಃ ಭಾಷಾಂತರಿಸಿದರೆ ತತ್ತ್ವ ಎಂದರೆ 'ಅದುತನ', 'ಅದು' ಎನ್ನುವುದು 'ತತ್ತ್ವಮಸಿ' ಮಹಾಕಾವ್ಯದಲ್ಲಿ ಬರುವ ತತ್ ಎಂದು ಹೇಳಿರುವ ಬ್ರಹ್ಮ, ಎಲ್ಲರ ಆತ್ಮನಾಗಿರುವ ಬ್ರಹ್ಮವು ವ್ಯಕ್ತಿಯೊಬ್ಬನಲ್ಲಿರುವ 'ಆತ್ಮ'ವಾಗುತ್ತದೆ. ಎಂದರೆ ನಾವು, ನಾನು ಎಂದು ಕರೆಯುವೆವಲ್ಲ ಅದು ನಾವು ಕೆಲವೊಮ್ಮೆ ದೇಹವನ್ನು 'ನಾನು' ಎನ್ನುತ್ತೇವೆ. ಇನ್ನೊಮ್ಮೆ ಅಂತಃಕರಣ (ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳೆಂದು ಇದನ್ನು ವರ್ಗೀಕರಿಸುತ್ತೇವೆ). ಹೀಗಾಗಿ ತತ್ತ್ವಪದವೆಂದರೆ ದೇಹ, ಅಂತಃಕರಣಗಳ ಒಳಗಿರುವ ಇದಕ್ಕೆ ಸಾಕ್ಷಿಯಾದ ನಿತ್ಯ, ಶುದ್ಧ,

೧. ೧೯ನೇ ಶತಮಾನದ ಹರಿದಾಸ ಸಾಹಿತ್ಯ – ಮುನ್ನುಡಿ.

ಮುಕ್ತ, ನಿರ್ಮಲ, ಕೂಟಸ್ಥ, ಚೈತನ್ಯ, ಸಾಕ್ಷಿ ಎಂದು ಹಲವು ಬಗೆಗಳಿಂದ ಕರೆಸಿಕೊಳ್ಳುವ ಆತ್ಮ, ಬ್ರಹ್ಮವನ್ನು ಬೋಧಿಸುವ ರಚನೆಗಳು, ಪದ್ಯಗಳು, ಕೀರ್ತನೆಗಳು, ಏಕತಾರಿಯ ಶೃತಿಯಲ್ಲಿ ಸಾಧಕರು, ಸಾಮಾನ್ಯರು, ಜ್ಞಾನಿಗಳು ಹೇಳಿಕೊಳ್ಳುತ್ತಿದ್ದ ರಚನೆಗಳು."[೧] ತತ್ವಪದಕಾರರನ್ನು ಅಧ್ಯಯನದ ದೃಷ್ಟಿಯಿಂದ ಪ್ರಾಚೀನರು ಮತ್ತು ನವೀನರು ಎಂದು ವಿಭಾಗ ಮಾಡಿಕೊಳ್ಳುತ್ತೇವೆ.

ಪ್ರಾಚೀನ

ತತ್ವಕಾವ್ಯ ಕ್ರಿ.ಶ. ಸು. ೧೧ನೆಯ ಶತಮಾನದಿಂದ ಪ್ರಾರಂಭಿಸಿ ಸುಮಾರು ೧೬ನೆಯ ಶತಮಾನದವರೆಗೂ ಪ್ರಾಚೀನ ಎಂದು ಗುರುತಿಸಿಕೊಳ್ಳುತ್ತದೆ. ವಿಭಿನ್ನ ಗುಣಲಕ್ಷಣಗಳ ಮೂಲಕ ಬೆಳೆದು ಬಂದ ತತ್ವಕಾವ್ಯ ಚರಿತ್ರೆಯು ೧೨ನೆಯ ಶತಮಾನದಲ್ಲಿ ನಿರ್ದಿಷ್ಟ ನಡಿಗೆಯನ್ನು ಇಟ್ಟಿತು. ೧೨ನೆಯ ಶತಮಾನದ ವಿಶಿಷ್ಟ ಅಭಿವ್ಯಕ್ತಿ ಮಾಧ್ಯಮವಾದ ವಚನ ಸಾಹಿತ್ಯದ ಮೂಲಕ ವಚನಕಾರರು ತಮ್ಮ ಅಂತರಂಗದ ಕದ ತೆರೆದು, ಸಮಾಜದ ಕೊಳಕನ್ನು ತೊಳೆಯುತ್ತ (ಮನದ ಮಲಿನವನ್ನು) ಆಧ್ಯಾತ್ಮ ಮಾರ್ಗದಲ್ಲಿ ನಡೆದು ಆದರ್ಶಪ್ರಾಯರಾದರು. ಈ ವಚನ ಧರ್ಮವೇ ವಿಭಿನ್ನ ಶೈಲಿ, ಸರ್ವೋದಯ, ಸಮಾನತೆ, ಸಹಕಾರ ತತ್ವಗಳನ್ನು ಸಾರಿದ, ಸರ್ವತ್ರಿಕ, ಸಾರ್ವಕಾಲಿಕ ಮೌಲ್ಯಗಳನ್ನು ಜಗತ್ತಿಗೆ ಕಾಣಿಕೆಯಾಗಿ ನೀಡಿದ ವಿಭಿನ್ನ ಸಂಸ್ಕೃತಿ, ಸದೃಢ ಸಮಾಜ ನಿರ್ಮಾಣಕ್ಕೆ ನಿರ್ವಹಣೆಗೆ ದುಡಿದಂತಹ ವಚನ ಚಳುವಳಿಯ ಕೊಡುಗೆ ಅಪಾರವಾದದ್ದು.

'ಶರಣಧರ್ಮ'ವೆಂಬ ಹೊಸ, ವಿಭಿನ್ನ ಶೈಲಿಯ ಧರ್ಮದ ಹುಟ್ಟಿಗೆ ಕಾರಣರಾದರು ವಚನಕಾರರು. ಇವರ ನಂತರ ದಾಸ ಶ್ರೇಷ್ಠರೂ ಬಂದು ತತ್ವಕಾವ್ಯ ಚರಿತ್ರೆಯನ್ನು ಉತ್ಕೃಷ್ಟ ಸ್ಥಿತಿಗೆ ಕೊಂಡೊಯ್ಯುತ್ತಾರೆ. ವಚನಕಾರರಲ್ಲಿ ಪ್ರಮುಖರಾಗಿ ಜೇಡ ದಾಸಿಮಯ್ಯ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಮುಕ್ತಾಯಕ್ಕ, ಅಮುಗೆ ರಾಯಮ್ಮ, ಕಾಳವ್ವೆ, ಸಿದ್ಧರಾಮ ಹೀಗೆ ಹಲವಾರು ಮಂದಿ ಬರುತ್ತಾರೆ. ಜಾತಿ, ವರ್ಗ, ವರ್ಣಗಳ ತಾರತಮ್ಯವಿಲ್ಲದೆ, ನಾನು, ನನ್ನದೆಂಬ ಪಕ್ಷಪಾತವಿಲ್ಲದೆ ಒಂದೆಡೆ ಕಲೆತವರು ವಚನಕಾರರು, ನಾವೆಲ್ಲ ಒಂದೆ ಎಂಬ ದಿವ್ಯ ಮಂತ್ರವ ಪಠಿಸುತ್ತಾರೆ. ಇವನಾರವ ಎಂದೆನಿಸದಿರಯ್ಯ. ಇವನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ ಎಂದು ಬಸವಣ್ಣನವರು ಉಪದೇಶಿಸುತ್ತಾರೆ. ಜೀವನ ಪರ್ಯಂತ ಸ್ವಾರ್ಥವನ್ನು ತೊರೆದು ಅಂಧಕಾರದಲ್ಲಿ ಕೊಳಲುತ್ತಿದ್ದ ಸಮಾಜವನ್ನು ಬೆಳಕಿನೆಡೆಗೆ ಕರೆದೊಯ್ಯುವ ಸತ್ಯ ಶುದ್ಧಕಾಯಕದಲ್ಲಿ ಅಹರ್ನಿಶಿ ದುಡಿದವರು ಶರಣರು.

ಜಾತಿನಿಂದನೆ ಮಾಡುತ್ತ ತಿರುಗುವ ಮೇಲ್ಜಾತಿಯವರನ್ನು ಅಮುಗೆ ರಾಯಮ್ಮ

"ಅರಿವು ಆಚಾರ ಸಮ್ಯಜ್ಞಾನವರಿಯದೆ

೧. ಶಿಶುನಾಳ ಶರೀಫರ ನೂರಾರು ತತ್ತ್ವಪದಗಳು – ಅ.ರಾ.ಸೇ. ನಿವೇದನೆ.

ನಾಮವ ಹೊತ್ತುಕೊಂಡು ತಿರುಗುವ ಗಾವಿಲರ

ಮುಖವ ನೋಡಲಾಗದು ಅಮುಗೇಶ್ವರ" ಎಂದು ಕಟುವಾಗಿ ನಿಂದಿಸುತ್ತಾಳೆ.

"ಶೀಲವಂತನಾದಡೆ ಜಾತಿಯ ಬಿಡಬೇಕು

ಶಿವಜ್ಞಾನಿಯಾದೆಡೆ ಸಮಯವ ಬಿಡಬೇಕು" ಎಂದು ಹೇಳುವ ಅಮುಗೆ ರಾಯಮ್ಮ ಜಾತಿಯ ಗೀಳನ್ನು ತೊರೆಯುವಂತೆ ಉಪದೇಶಿಸುತ್ತಾಳೆ.

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬಂತಹ ಕಟ್ಟುಪಡುಗಳಿದ್ದ ಸಮಾಜದಲ್ಲಿ ಸ್ತ್ರೀಯ ಮಹತ್ವ ಎಂತಹುದು ಎಂಬುದನ್ನು ಶರಣರು ತೋರಿಸುತ್ತಾರೆ. ಸಂಚಿಹೊನ್ನಮ್ಮಳು ಪೆಣ್ಣು

"ಪೆಣ್ಣೆಂದೇಕೆ ಬೀಳುಗಳೆವಿರಿ?

ಕಣ್ಣು ಕಾಣದ ಗಾವಿಲರು" ಎಂದು ಕಟುನುಡಿಗಳ ಮೂಲಕ ಪುರುಷರನ್ನು ಎಚ್ಚರಿಸುತ್ತಾಳೆ. ಸ್ತ್ರೀಯರನ್ನು ನಿಕೃಷ್ಟವಾಗಿ ಕಾಣುವ ಸಮಾಜವನ್ನು ನಿಂದಿಸುತ್ತ, ಉಪದೇಶಿಸುವ ಅಲ್ಲಮ್ಮ ಪ್ರಭುಗಳು ಪ್ರಪಂಚ ಕ್ರಿಯಾಶೀಲವಾಗಿರಬೇಕಾದರೆ ಹೊನ್ನು, ಹೆಣ್ಣು, ಮಣ್ಣುಗಳು ಅವಶ್ಯಕ. ಅವುಗಳು ಕಾರ್ಯ ನಿರತವಾಗಿದ್ದರೆ ಮಾತ್ರ ಚಲನೆ ಸಾಧ್ಯ ಎನ್ನುತ್ತ

ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ

ಎನ್ನುತ್ತ, ಮನುಷ್ಯನ ತಣಿಸಲಾಗದ ಬಯಕೆಗಳೆ ಅವನ ಅವನತಿಗೆ ದಾರಿ ಅಲ್ಲಿ ಸ್ತ್ರೀಯದ್ದು, ಹೊನ್ನು, ಮಣ್ಣಿನದೂ ಪಾತ್ರವಿಲ್ಲ ಆತ ಮೊದಲು ಆಸೆಗಳನ್ನು ಜಯಿಸಬೇಕೆಂಬ ಉಪದೇಶವನ್ನು ಮಾಡುತ್ತಾರೆ. ಸಿದ್ದರಾಮನು "ಪರಧನ ಪರಸ್ತ್ರೀಯ ವಿಸರ್ಜಿಸಿ ಪೂಜಿಸು ಪರಶಿವನ" ಎನ್ನುತ್ತಾನೆ. ರಾಮನಾಥನು "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎನ್ನುತ್ತಾನೆ. ಆ ಮೂಲಕ ಸ್ತ್ರೀ–ಪುರುಷರ ಸಮಾನತೆಯನ್ನು ಪ್ರೋತ್ಸಾಹಿಸುತ್ತಾನೆ. ಹೀಗೆ ಶರಣರು ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದುತ್ತ, ತತ್ವಕಾವ್ಯ ಚರಿತ್ರೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ವಚನಕಾರರ ನಂತರದ ಸ್ಥಾನದಲ್ಲಿ ದಾಸ ಶ್ರೇಷ್ಠರು ಸಮಾಜವನ್ನು ತಿದ್ದುತ್ತಾ ಸಂದೇಶಗಳನ್ನು ನೀಡಿದರು. ದಾಸರ ಭಕ್ತಿ ಪ್ರಸಾರ ಕಾರ್ಯದಿಂದ ನಾಡಿನಲ್ಲಿ ಆಗಿರಬಹುದಾದ ನೈತಿಕ ಮತ್ತು ಧಾರ್ಮಿಕ ಜಾಗೃತಿಯು ಮಾನವೀಯವಾದದ್ದು. ಅಂದಿನ ಅವ್ಯವಸ್ಥಿತ, ರಾಜಕೀಯ ಸ್ಥಿತಿಯಲ್ಲಿ ಹಾಗೂ ಪರಸಂಸ್ಕೃತಿಯ ಪ್ರಭಾವವದಿಂದ ಸಮಾಜಿಕ ವ್ಯವಸ್ಥೆಯೂ ಸಡಿಲಗೊಳ್ಳುತ್ತಿದ್ದ ಕಾಲದಲ್ಲಿ ದಾಸರು ಮತ್ತು ಇತರ ಮಹಾನುಭಾವರ ಬೋಧನೆಯಿಂದ

ಜನರಲ್ಲಿ ತಮ್ಮ ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಹೊಸ ಶ್ರದ್ಧೆ ಮತ್ತು ಜೀವನದಲ್ಲಿ ಹೊಸ ಭರವಸೆಗಳು ಮೂಡಿದವು.

ಇವರೂ ಸಹ ಸಮಾಜದ ಏಳಿಗೆಗಾಗಿ ದುಡಿಯುತ್ತ ತಮ್ಮ ಬರವಣಿಗೆಗಳಲ್ಲಿ ಸ್ವಾನುಭವದ ವಿಚಾರಗಳನ್ನು ಅಭಿವ್ಯಕ್ತಿಸಿದರು. ವಿಜಯದಾಸದರು, ಕನಕದಾಸರು, ಪುರಂದರ ದಾಸರು, ಮೋಹನದಾಸರು, ತಿಮ್ಮಣ್ಣದಾಸರು ಗೋಪಾಲದಾಸರು, ಭೀಮದಾಸರು ಮೊದಲಾದವರು ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತ ಸುಸ್ಥಿರ ಸಮಾಜ ನಿರ್ಮಾಣಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿದರು. ಶ್ರೀಪಾದ ರಾಜರಿಂದ ಪ್ರಾರಂಭವಾಗಿ ವ್ಯಾಸರಾಜ ಮತ್ತು ವಾದಿರಾಜರಿಂದ ಸತ್ವಯುತವಾಗಿ ಬೆಳೆದ ಹರಿದಾಸ ಸಾಹಿತ್ಯ ಪುರಂದರ ದಾಸರು ಮತ್ತು ಕನಕದಾಸರಿಂದ ಉನ್ನತಿಯನ್ನು ಕಂಡಿತು.

ವಿಜಯದಾಸರು ತಮ್ಮ ಕೀರ್ತನೆಗಳಲ್ಲಿ ಉಪದೇಶ, ತತ್ವ ವಿವೇಚನೆ, ವಿರಕ್ತಿ, ಭಕ್ತಿ ಹರಿಕೀರ್ತನೆ, ಪರಿವಾರ ದೇವತೆಗಳ ತಾರತಮ್ಯ ಸ್ತೋತ್ರ ಮೊದಲಾದ ತತ್ವ ವಿಚಾರಗಳನ್ನು ಬೋಧಿಸುತ್ತಾರೆ. ಪುರಂದರರು ಪೊಳ್ಳು ಆದರ್ಶಗಳನ್ನು ಗಾಳಿಗೆ ತೂರಿ ಮನುಷ್ಯ ತನ್ನ ಬದುಕನ್ನು ಸಾರ್ಥಕ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಸಾಗುವಂತೆ ಕರೆ ನೀಡುತ್ತಾರೆ. ಜಾತಿ, ಮತ, ಮೇಲು-ಕೀಳಿನ ತಾರತಮ್ಯವನ್ನು ಕಟುವಾಗಿ ಟೀಕಿಸುತ್ತ ಸಮಾಜವನ್ನು ತಿದ್ದುವಲ್ಲಿ ಯಶಸ್ವೀ ಪ್ರಯತ್ನ ಮಾಡಿದರು. ಕನಕರು ಇಡೀ ಮಾನವ ಕುಲಕ್ಕೇ ಮಾರಕ ಪ್ರಾಯವಾದ ಜಾತಿಯ ಬಗೆಗೆ ಸಮಾಜ ತಳೆದಿದ್ದ ಅಂಧತ್ವವನ್ನು ತೊಡೆದು ಹಾಕಲು ಹೋರಾಡಿದರು.

ಗೋಪಾಲದಾಸರು ಭಕ್ತಿ ಮತ್ತು ತತ್ವ ಪ್ರತಿಪಾದನೆಗೆ ವಿಶೇಷ ಒತ್ತುಕೊಟ್ಟರು. ಆತ್ಮ ವಿಮರ್ಶೆ ಮಾಡಿಕೊಳ್ಳುತ್ತ ದೇವರ ಸಾಕ್ಷಾತ್ಕಾರಕ್ಕೆ ಪಾತ್ರರಾದರು. "ಅನಂತ ಅಪರಾಧ ಎನ್ನಲ್ಲುಂಟೋ ದೇವ" ಎನ್ನುತ್ತಾರೆ ಮೋಹನದಾಸ ಅವರ ಕೃತಿಗಳಲ್ಲಿ ಹರಿಸರ್ವೋತ್ತಮತ್ವ, ತಾರತಮ್ಯ, ಪಂಚಭೇದಗಳನ್ನು ಕಾಣಬಹುದು. ತಿಮ್ಮಣ್ಣದಾಸರು ಸಮಾಜೋದ್ಧಾರದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಜಗನ್ನಾಥದಾಸರದು "ಕನ್ನಡದ ಭಕ್ತಿ ಸಾಹಿತ್ಯದಲ್ಲಿ ಅಚ್ಚಳಿಯದ ಮಹಾಶಕ್ತಿ" ಎಂದರೆ ಉತ್ಪ್ರೇಕ್ಷೆಯಾಗದು. ದಾಸಶ್ರೇಷ್ಠರು ನಿಷ್ಠೆ, ಪ್ರಾಮಾಣಿಕತೆಯ ದುಡಿಮೆ ಮಾಡುತ್ತ, ಆತ್ಮಶೋಧನೆ ಮಾಡಿಕೊಳ್ಳುತ್ತ, ಸಮಾಜದಲ್ಲಿ ಮನೆಮಾಡಿದ್ದಂತಹ ಅನಿಷ್ಟ ಪದ್ಧತಿಗಳಾದ ಅಸಮಾನತೆ, ಜಾತಿಭೇದ, ಲಿಂಗಭೇಧ, ಮೇಲು-ಕೀಳಿನ ತಾರತಮ್ಯಗಳನ್ನು ಬಲವಾಗಿ ವಿರೋಧಿಸುವ ಮೂಲಕ ಜನರಲ್ಲಿ ಜಾಗೃತ ನುಡಿಗಳನ್ನು ಬಿತ್ತಿದರು.

ನಿಜಗುಣ ಶಿವಯೋಗಿಗಳೂ ಸಹ ತತ್ವಕಾವ್ಯ ಚರಿತ್ರೆಯ ಬೆಳವಣಿಗೆಗೆ, ಅದರ ನಿರಂತರತೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹಲವಾರು ಕೃತಿರತ್ನಗಳನ್ನು ಬರೆಯುತ್ತ ಅಂದಿನ ಸಮಾಜದಲ್ಲಿ ಮನೆ ಮಾಡಿದ್ದ ದ್ವೇಷ, ವೈಶಮ್ಯ, ಅಂಧತ್ವವನ್ನು ಹೋಗಲಾಡಿಸುವ ಪ್ರಯತ್ನ ಮಾಡಿ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಸಮಾಜವನ್ನು ತಿದ್ದುವ ಕಾರ್ಯದಲ್ಲಿ ಸರ್ವಜ್ಞನ ಕೊಡುಗೆಯು ಮಹತ್ತರವಾದದ್ದು. ಜನರಲ್ಲಿದ್ದ ವ್ಯಾಮೋಹವನ್ನು ನೀಗುವ ನಿಟ್ಟಿನಲ್ಲಿ, ಜನರಲ್ಲಿ ಆತ್ಮ ವಿಶ್ವಾಸವನ್ನು ಬೆಳೆಸಿಕೊಳ್ಳುವಂತೆ ಮತ್ತು ಅವರು ಆತ್ಮ ವಿಮರ್ಶೆ ಮಾಡಿಕೊಳ್ಳುವಂತಹ ಉತ್ತಮವಾದ ಉಪದೇಶಗಳನ್ನು ಮಾಡುತ್ತಾ ಬಂದ. ಅದಕ್ಕೆ ಆತನನ್ನು ಕುರಿತು-

"ಸರ್ವಜ್ಞನೆಂಬುವನು ಗರ್ವದಿಂದಾದವನೆ
ಸರ್ವರೊಳಗೊಂದೊಂದು ನುಡಿಕಲಿತು
ವಿದ್ಯೆಯಾ ಪರ್ವತವೆ ತಾನಾದ ಸರ್ವಜ್ಞ"

ಶಿಶುನಾಳ ಶರೀಫರು ಶಿಶುನಾಳಧೀಶ ಎಂಬ ಅಂಕಿತವನ್ನು ಹೊತ್ತು ತಮ್ಮ ರಚನೆಗಳ ಮೂಲಕ ಜನಮಾನಸದಲ್ಲಿ ಶಾಶ್ವತವಾಗಿ ನೆಲೆನಿಂತಿದ್ದಾರೆ. ಇವರ ತತ್ತ್ವಪದಗಳಲ್ಲಿ ಸಾಮಾನ್ಯವಾಗಿ ಗುರು, ಇಷ್ಟದೇವತಾ ಸ್ತುತಿಗಳು, ಆತ್ಮಾನುಭವದ ಅಭಿವ್ಯಕ್ತಿ, ಆತ್ಮ ವಿಮರ್ಶೆ, ವೈರಾಗ್ಯ ಮೊದಲಾದವುಗಳನ್ನು ಕಾಣಬಹುದು. ಆಡಂಭರದ ಭಕ್ತಿಯನ್ನು ವಿರೋಧಿಸುವ ಷರೀಪರು ಅಂತಹ ಡಾಂಭಿಕನ್ನು ಕಟುವಾಗಿ ವಿಡಂಭಿಸುತ್ತಾರೆ. ಪ್ರಾಣಿ, ಪಕ್ಷಿಗಳ ಪ್ರಕೃತಿಯ ವಿವಿಧ ವಿಚಾರಗಳನ್ನು ಸಂಕೇತವಾಗಿರಿಸಿ ದೃಷ್ಟಾಂತಗಳನ್ನು ಕೊಡುತ್ತ ಸಮಾಜವನ್ನು ಎಚ್ಚರವಾಗಿರಿಸುತ್ತಾರೆ. 'ಹಾವು ತುಳಿದೇನೇ ಮಾನಿನಿ ಹಾವು ತುಳಿದೇನೆ', 'ಬಿದ್ದಯಬ್ಬೇ ಮುದುಕಿ ಬಿದ್ದಿಯಬ್ಬೆ', 'ಅಳಬೇಡ ತಂಗಿ ಅಳಬೇಡ' ಎಂಬ ಮುಂತಾದ ಕಾವ್ಯಧಾರೆಗಳ ಮೂಲಕ ಮನುಷ್ಯನ ನೀತಿ ನಡಾವಳಿಗಳ ಬಗೆ ಹೇಗಿರಬೇಕು ಎಂಬ ಉಪದೇಶವನ್ನು ನೀಡುತ್ತಾರೆ.

ಆಳರಸರಾದಿಯಾಗಿ ಸಮಾಜದಲ್ಲಿ ಪ್ರತಿಷ್ಠಿತರೆನಿಸಿಕೊಂಡವರನ್ನೂ ಸೇರಿದಂತೆ ಮೇಲಿನ ಸ್ತರದಲ್ಲಿದ್ದವರಿಂದ ಜನ ಸಾಮಾನ್ಯರ ಬದುಕು ಹದಗೆಟ್ಟಿದ್ದ ಸಂದರ್ಭದಲ್ಲಿ ತತ್ವಪದಕಾರರು ತಮ್ಮ ಆತ್ಮಿಕ ಮಾತುಗಳಿಂದ, ಪ್ರಿಯವಾದ ನುಡಿಗಳಿಂದ ಜನರ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡಲು ಶ್ರಮಿಸಿದರು. ಈ ಕವಿಗಳಿಗೆ ಜನರ ಆಸೆ ಆಕಾಂಕ್ಷೆ, ಅನಿಸಿಕೆ, ಅವರ ಕೊರತೆ, ಬೇಕು-ಬೇಡ, ಸುಖ-ದುಃಖ ಎಲ್ಲವೂ ಗೊತ್ತು. ಏನೇ ಇರಲಿ ಎದೆಗುಂದದೆ ಧೈರ್ಯವಾಗಿ ಬದುಕಲು ಇವರು ಕಲಿಸಿದರು. ಜೀವನ ನಶ್ವರ ಎಲ್ಲವೂ ಮಾಯೆ, ಸಂಸಾರ ಒಳ್ಳೆಯದಲ್ಲ ಎಂಬಂತಹ ಜೀವನಕ್ಕೆ ವಿಮುಖವಾದ ವಿಚಾರಗಳನ್ನು ಅಳಿಸಿದರು. ಜೀವನ ಸುಂದರವಾದದ್ದು ಎಂಬುದನ್ನು ತಿಳಿಸಿಕೊಟ್ಟರು.

ಕಾಯಕದ ಮಹತ್ವವನ್ನು ಸಾರಿದರು. ಪ್ರಾಮಾಣಿಕತೆ, ಇನ್ನೊಬ್ಬರ ದುಃಖದಲ್ಲಿ ಭಾಗವಹಿಸುವಿಕೆ, ಸಾಮಾನ್ಯ ವ್ಯವಹಾರ ಜ್ಞಾನ, ವೇಳೆಯ ಮಹತ್ವ ಮೊದಲಾದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಗುಣಗಳನ್ನು ಜನರಿಗೆ ಕಲಿಸಿದರು. ಕೈಲಾಸ, ಸ್ವರ್ಗ, ನರಕ ಮೊದಲಾದ ಅಪ್ರಬುದ್ಧ ವಿಚಾರಗಳನ್ನು ಅಳಿಸಿ ಇವೆಲ್ಲವೂ ನಮ್ಮ ಜೀವನದಲ್ಲೇ ಇವೆ ಎಂಬುದನ್ನು ತಿಳಿಸಿದರು. 'ಸಕಲ ಜೀವನದ ಲೇಸೇ' ಅವರ ಧರ್ಮವಾಗಿತ್ತು.

ಆಧುನಿಕ

೧೭, ೧೮, ೧೯ನೆಯ ಶತಮಾನಗಳು ಕನ್ನಡ ಸಾಹಿತ್ಯದಲ್ಲಿ ತತ್ವಪದ ಸಾಹಿತ್ಯದ ಮರುಹುಟ್ಟಿಗೆ ಪ್ರೋತ್ಸಾಹ ನೀಡಿದರು. ಇಂದಿನ ಜಾಗತೀಕರಣದ, ಮಾಹಿತಿ ತಂತ್ರಜ್ಞಾನ ಇವುಗಳ ಕಾರಣದಿಂದ ಸ್ಥಳೀಯ, ದೇಸೀ ಬದುಕಿನ ವಿಧಾನಗಳು, ಹಣ ಮತ್ತು ವ್ಯಾಪಕ ರಾಜಕೀಯ ಶಕ್ತಿಯ ಬೆಂಬಲವಿಲ್ಲದೆ ಭಾಷೆಗಳು ನಶಿಸಿಹೋಗುವ ಅಪಾಯ ಎದುರಾಗಿದೆ. ಹೀಗಿರುವಾಗ ತಮ್ಮ ತಮ್ಮ ಭೌಗೋಳಿಕ ಪ್ರದೇಶಗಳಲ್ಲಿ ಬೇರುಬಿಟ್ಟ ಜನಸಮುದಾಯ ಬೆಳೆಸಿಕೊಂಡಿದ್ದ ಆಧುನಿಕ ಶಿಕ್ಷಿತರಿಗೆ ಅಪರಿಚಿತವಾಗಿದ್ದ ಜ್ಞಾನ ಮೂಲಗಳು ಮತ್ತು ಜ್ಞಾನವ್ಯವಸ್ಥೆಗಳ ಬಗ್ಗೆ ಕುತೂಹಲ ಬೆಳೆಯುತ್ತಿದೆ. ಇಂತಹ ತಿಳುವಳಿಕೆಯನ್ನು ಪಡೆಯಲು ತತ್ವಪದಗಳಂತಹ ರಚನೆಗಳು ಪ್ರಮುಖ ಆಕರಗಳು ಕನ್ನಡದ ಬದುಕು ಆಧುನಿಕತೆಗೆ ಮೈದೆರೆಯುತ್ತಿದ್ದಾಗ ಉಂಟಾದ ವಾಸ್ತವಿಕ ಬದಲಾವಣೆಗಳು ಹೊಸ ರೂಪಕ ಸಾಮಾಗ್ರಿಯನ್ನು ತತ್ವಪದಕಾರರಿಗೆ ಒದಗಿಸಿದವು. ತತ್ವ ಪದಗಳು ಆಧುನಿಕತೆಗೆ ಸ್ಪಂದಿಸುವ ತಂತ್ರಗಳು ಆಗಿವೆ. ಪಶ್ಚಿಮದ ಸಂಸ್ಕೃತಿಯ ದಾಳಿಗೆ ಸಿಕ್ಕು ತತ್ತರಿಸುತ್ತಿರುವ ಇಂದಿನ ನಮಗೆ, ಅದನ್ನು ಪರಿಣಾಮಕಾರಿಯಾಗಿ ಎದುರಿಸುವ, ಅದರೊಂದಿಗೆ ಅರ್ಥಪೂರ್ಣವಾದ ಒಪ್ಪಂದ ಮಾಡಿಕೊಳ್ಳುವ ತಂತ್ರೋಪಾಯಗಳೂ ಇಲ್ಲಿ ಕಾಣುತ್ತವೆ.

ತತ್ವಪದಕಾರರು ಇತ್ತೀಚೆಗೆ ನಿರ್ಲಕ್ಷ್ಯಕ್ಕೊಳಗಾಗುತ್ತಿರುವುದನ್ನು ಕಾಣುತ್ತೇವೆ. ಇಂದಿನ ಪ್ರಸ್ತುತಕ್ಕೆ ಅವರ ಅಗತ್ಯತೆ ಇದ್ದರೂ ಸಹ ಅವರನ್ನು ನಿರ್ಲಕ್ಷಿಸುತ್ತಿರುವುದು ವಿಷಾದನೀಯ. ಜಾಗತೀಕರಣದ ಬಲೆಯಲ್ಲಿ ಬಿದ್ದು ಪಾಶ್ಚಾತ್ಯ ಅನುಕರಣಶೀಲತೆಯನ್ನು ರೂಢಿಸಿಕೊಂಡಿರುವ ಜನಕ್ಕೆ ಹಿಂದಿನವರ ತತ್ವಾದರ್ಶಗಳ ಬಗೆಗೆ ಯಾವುದೇ ಕಾಳಜಿ ಕಾಣುತ್ತಿಲ್ಲ. ಅಂತರ್ಜಾಲ, ದೂರದರ್ಶನ, ಗಣಕಯಂತ್ರಗಳ ಮುಂದೆ ಕೂತು ನಮ್ಮದಲ್ಲದ, ಅನ್ಯಸಂಸ್ಕೃತಿಯ ಸಂಗೀತ ನೃತ್ಯಗಳನ್ನು ಕೇಳುತ್ತ, ನೋಡುತ್ತ ಸುಖ ಪಡುವ ಯುವ ಪೀಳಿಗೆಗೆ ಮಾನವೀಯ ಮೌಲ್ಯಗಳನ್ನು ಬೋಧಿಸುವ ಇಂತಹ ತತ್ವಾದರ್ಶಗಳಲ್ಲಿ ಆಸಕ್ತಿ ಇಲ್ಲ. ಅಬ್ಬರದ ಧ್ವನಿಯಲ್ಲಿ, ತಾಳ ಲಯಗಳಿಲ್ಲದ ಸಂಗೀತವನ್ನು ಆಸ್ವಾದಿಸುವ ಜನಕ್ಕೆ ಇವು ಒಗ್ಗುತ್ತಿಲ್ಲ. "ಜ್ವರವಿಡಿದ ಬಾಯಿಗೆ ನೊರೆಹಾಲು ರುಚಿಸದಂತಾಗಿದೆ ಪರಿಸ್ಥಿತಿ.

ಆಧುನಿಕ ತತ್ವಪದಕಾರರ ಸಾಲಿನಲ್ಲಿ ಮೈಲಾರದ ಬಸವಲಿಂಗ, ಚೆನ್ನಪ್ಪ ಕವಿ, ಚೇಲಾಳೇಶ, ಚಿದಾನಂದಾವಧೂತ, ನಾಗಭೂಷಣ, ಗನಯೋಗಿ, ಕಡಕೋಳ ಮಡಿವಾಳಪ್ಪ ಬುಕ್ಕಪ್ಪಯ್ಯ, ಎ. ಪ್ರಭುದೇವ, ರಾಮರಾಮಹೋರ್ತಿ, ಬಳಗಾನೂರು ಮರಿಸ್ವಾಮಿ, ನಂಜುಂಡ ಶಿವಯೋಗಿ ಮೊದಲಾದವರು ಬರುತ್ತಾರೆ. ಸೂಗೂರು ಚೆನ್ನವೀರಗೌಡ ಎಂಬ ತತ್ವಪದಕಾರರು ಸುಳ್ಳಲ್ಲ ಈ ಮಾತು ಬಲ್ಲವರು ನೋಡಿ

ಆರು ಕಾಲಿನ ಪಕ್ಷಿ ಮೂರೂರು ನುಂಗಿತು
ಕಾರುಣಿಕದ ಕಪ್ಪೆ ಸರ್ಪನನು ನುಂಗಿತು

ಎಂದು ಹೇಳಿ ಅಸಹಜವಾದದ್ದೂ ಸಹ ಕಾಲನ ಪ್ರಭಾವಕ್ಕೊಳಗಾದಾಗ ಹೇಗೆ ಮಣಿದು ಹೋಗುತ್ತದೆ ಎಂಬುದನ್ನು ವಿವರಿಸುತ್ತಾರೆ. ಗುರುಪುರುದ ಮಲ್ಲಯ್ಯ ಮತ್ತೊಬ್ಬ ತತ್ವಪದಕಾರರು–

ಶರಣರಿಟ್ಟೆಗಳನು, ಶರಣರಾಪತ್ತುವನು,
ಶರಣರಿಗೆ ಮುನಿವ ಕಡುಪಾತಕರನು
ಒರಸುವುದು, ಕಡಿದು ಕತ್ತರಿಸುವುದು, ಉ:ಪೆಂದು
ಉರುಹುವುದು ನೋಡಿ ಶ್ರೀ ಪಂಚಾಕ್ಷರಿ

ಎಂದು ಹಾಡುತ್ತ ಶರಣರ ಮಹತ್ವವನ್ನು ಎತ್ತಿಹಿಡಿಯುತ್ತಾರೆ. ಶರಣರ ನಿಷ್ಠೆ ಅವರನ್ನು ಕಡೆವರೆಗೂ ಕಾಯುತ್ತದೆ. ದೈವ ಸಾಕ್ಷಾತ್ಕಾರ ಅವರ ಮೇಲೆ ಎಂದಿಗೂ ಒದಗಿ ಬರುತ್ತದೆ ಎನ್ನುತ್ತಾರೆ.

ಕುಕಡೊಳ್ಳಿ ಚೆನ್ನಮಲ್ಲಯ್ಯ ಲೌಕಿಕ ಬದುಕಿನ ನಶ್ವರತೆಯನ್ನು ಅರಿಯದೆ ಜನ ಸ್ವಾರ್ಥ ಪರರಾಗಿ ಜೀವನವನ್ನು ವ್ಯರ್ಥಮಾಡಿಕೊಳ್ಳದಂತೆ ದೈವ ಸಾಕ್ಷಾತ್ಕಾರಕ್ಕಾಗಿ ದುಡಿಯುವಂತೆ ಉಪದೇಶಿಸುತ್ತಾನೆ.

"ಬಿದ್ದು ಈ ಭವದೊಳು ಉರಾಳಾಡೋ ಜನರನ್ನು
ಉದ್ದಾರ ಮಾಡುತ ಬರುತಲಿದೆ" ಅಜ್ಞಾನ ಅಂಧಕಾರಗಳಿಂದ ತೊಳಲಾಡುತ್ತಿರುವ ಜನರನ್ನು ಉದ್ದರಿಸಲು ಚಿನ್ಮಯನಾದ ಭಗವಂತನ ಉಪದೇಶಾಮೃತ ಬುದ್ಧಿಜೀವಿಗಳ ಮೂಲಕ ಹರಿದು ಬರುತ್ತಿದೆ ಪರಿಪಾಲಿಸಿ ಎಂಬ ಉಪದೇಶ ಮಾಡುತ್ತಾರೆ.

ದೇವರು ಧರ್ಮ ಎಂದು ವ್ರತ, ನೇಮ ಉಪವಾಸ ಮಾಡುತ್ತ, ದೈವ ಭಕ್ತನ ವೇಷತೊಟ್ಟು, ಮನಸ್ಸಿನಲ್ಲಿ ಅಶ್ಲೀಲ ಭಾವವೇಗಳನ್ನು ತುಂಬಿಕೊಂಡಿದ್ದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ. ಮಾಡುವ ಕೆಲಸಗಳಲ್ಲೇ ದೇವರ ಆರಾಧನೆ ಮಾಡುವುದು ಧರ್ಮ ಎನ್ನುತ್ತಾರೆ.

ಅಧ್ಯಾಯ-೪

ಕಾವ್ಯದ ವಿಶ್ಲೇಷಣೆ

ಮಂಕುತಿಮ್ಮನ ಕಗ್ಗದ ಸಂಕ್ಷಿಪ್ತ ಪರಿಚಯ

ನುಡಿದಂತೆಯೇ ನಡೆದು ತೋರಿದ. 'ಕಷ್ಟಕರವಾದದ್ದೇ ಶ್ರೇಯಸ್ಕರ' ಎಂದು ನುಡಿದ ಡಿ.ವಿ.ಜಿ.ರವರು ಮಂಕುತಿಮ್ಮನ ಕಗ್ಗದಂತಹ ಮೇರು ಕೃತಿಯನ್ನು ನೀಡಿ ಮನೆ ಮಾತಾದರು. ಜನರ ಸಾರ್ವಜನಿಕ ಬದುಕು ಹಸನಾಗಬೇಕೆಂಬ ಹಂಬಲವನ್ನು ಹೊತ್ತ ಡಿವಿಜಿ ಕಗ್ಗದ ಮೂಲಕ ಆ ಮಾತನ್ನು ಸಾಕಾರಗೊಳಿಸಿದರು.

ಅದರಲ್ಲೂ ತಮ್ಮ ಲೋಕಾನುಭವದ ರಸಗಟ್ಟಿಯನ್ನು ಈ ಮಂಕುತಿಮ್ಮನ ಕಗ್ಗದ ಮೂಲಕ ಕಟ್ಟಿಕೊಟ್ಟರು. ಈ ಕೃತಿ ಬದುಕಿನ ಸಮಗ್ರ ಚಿತ್ರಣವನ್ನು ಒಳಗೊಂಡಿದೆ. "ನಹಿ ಜ್ಞಾನೇನ ಸದೃಶಂ" ಎಂಬುದನ್ನು ಕಗ್ಗ ಸಮರ್ಥಿಸುತ್ತದೆ. ಜ್ಞಾನ ಮನುಷ್ಯನ ಬದುಕನ್ನು ಪಕ್ವಗೊಳಿಸುತ್ತದೆ. ಪುಸ್ತಕ ಜ್ಞಾನಕ್ಕಿಂತ ಲೋಕಜ್ಞಾನ ಬದುಕನ್ನು ಕಟ್ಟಲು ಸಮರ್ಥವಾದ ಉಪಕರಣ ಎಂಬುದಾಗಿ ಮನದಟ್ಟು ಮಾಡಿಸುತ್ತದೆ.

ಮಂಕುತಿಮ್ಮನ ಕಗ್ಗವು ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳ ಕಾವ್ಯ ಸಾಹಿತ್ಯವಾಗಿದ್ದು, ಎಲ್ಲ ಶತಮಾನಗಳ ಮಾನವ ಜನಾಂಗಗಳಿಗೂ ವಿಚಾರ ಪ್ರಚೋದಕವೆನಿಸಿ, ಅವಶ್ಯ ಚಿಂತನ ಮಂಥನವನ್ನು ಒದಗಿಸುತ್ತದೆ. ಈ ಕಗ್ಗದಲ್ಲಿನ ಪದ್ಯಗಳು ಸರ್ವಜ್ಞನ ವಚನಗಳಂತೆ, ದಾಸರ ವಾಣಿಗಳಂತೆ ಮನಸ್ಸು ಕುಗ್ಗಿದಾಗ ಸಾಂತ್ವನ ನೀಡಿ ಭವ್ಯ ಬಾಳನ್ನು ನಡೆಸಬೇಕೆನ್ನುವವರಿಗೆಲ್ಲ ಮಾರ್ಗದರ್ಶನ ಮಾಡುತ್ತವೆ.

ಕಗ್ಗದ ಮೌಲ್ಯಗಳು ಎಂದೆಂದಿಗೂ ಪ್ರಸ್ತುತವಾದುದು. ಜನ ಸಾಮಾನ್ಯರ ಮೆಚ್ಚುಗೆಯ ಕೃತಿಯಾಗಿರುವ ಕಗ್ಗವು ಜನರ ನೀತಿ-ನಡಾವಳಿಗಳಿಗೆ ಉತ್ತಮ ತಳಹದಿಯನ್ನು ಕೊಡುವ ಕೃತಿಯಾಗಿದೆ. ಮಂಕು ತಿಮ್ಮನ ಕಗ್ಗ ಜನಮುಖಿಯಾದದ್ದು. ಜನರ ಜ್ಞಾನ, ತಾರ್ಕಿಕ ಮನೋಭಾವನೆಗಳಿಗೆ ಒತ್ತುಕೊಟ್ಟು ಜನರನ್ನು ಉದ್ಧಾರದ ಹಾದಿಯಲ್ಲಿ, ಮುನ್ನಡೆಸುವ ಟೀಕೆ-ಟಿಪ್ಪಣಿಗಳನ್ನು ಸಹಿಸಿಕೊಂಡು ಕ್ರಿಯೆಯ ಮೂಲಕ ಉತ್ತರಕೊಡುವ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಂತೆ ಉಪದೇಶಿಸುತ್ತದೆ. ಕಗ್ಗ ಕೃತಿ ನೀತಿ ನಿರೂಪಕ, ಜೀವನದರ್ಶಕ ಕೃತಿ. ಡಂಭಾಚಾರದಿಂದ ಅಬ್ಬರದ ಅಲೆಗಳ ಮೂಲಕ ಜನರನ್ನು ಆಕರ್ಷಿಸುವ, ಎಚ್ಚರಿಸುವ ಬದಲು ಸಾಂತ್ವನದ ಸೂಳ್ನುಡಿಗಳ ಮೂಲಕ ಉಪದೇಶಗಳಾಗಿವೆ. ಕಗ್ಗವು ಲೋಕಕಲ್ಯಾಣದ ಹಿತಕಾರ್ಯಕ್ಕಾಗಿ ದುಡಿದ ಮೌಲಿಕ ಕೃತಿ.

೧೯೭೪ರಲ್ಲಿ ಮೊದಲ ಬಾರಿಗೆ ಪ್ರಕಟಗೊಂಡು, ೧೯೯೩ರಲ್ಲಿ ಹದಿನಾಲ್ಕನೆಯ ಮುದ್ರಣವನ್ನು ಕಂಡಿತು. ಕೃತಿಯುದ್ದಕ್ಕೂ(ಕಗ್ಗ) ಜೀವನ ಸೌಂದರ್ಯ, ಜೀವನ ಸಂಸ್ಕಾರ, ಜೀವನ ಸಮೃದ್ಧಿಗಳ ಬಗೆಗೆ ಅರಿವು ಮೂಡಿಸುತ್ತಾರೆ. ಜೀವನವೇ ಒಂದು ಕಲೆ ಅದನ್ನು

ಗೌರವಿಸು ಎನ್ನುತ್ತಾರೆ. ಜೀವನಕ್ಕೆ ವಿಶೇಷವಾದ ಅರ್ಥವನ್ನು ಕೊಡುತ್ತಾರೆ.

ಗೌರವಿಸು ಜೀವನವ ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು॥

ಮನುಷ್ಯನಲ್ಲಿ ಬದುಕಿನ ಶ್ರೇಷ್ಠತೆಯ ಬಗೆಗೆ ಅರಿವು ಮೂಡಿಸುತ್ತಾರೆ. ಆತ್ಮ ವಿಶ್ವಾಸವನ್ನು ತುಂಬುತ್ತಾ, ಜೀವನ ಪರಮಾತ್ಮ ಕೊಟ್ಟ ಮಹದೈಶ್ವರ್ಯ ಅದನ್ನು ಶ್ರೀಷ್ಟರೀತಿಯಲ್ಲಿ ನಡೆಸು ಎನ್ನುತ್ತಾರೆ.

ಉಪ್ಪಿಷ್ಟು ಹುಳಿಯಿಷ್ಟು ಕಾರ ಸಿಹಿಯು
ಅಷ್ಟಿಷ್ಟು ಒಪ್ಪಿದೊಡದು ಭೋಜ್ಯವೊ.....

ಎನ್ನುವ ಡಿ.ವಿ.ಜಿ. ತಿನ್ನುವ ಊಟ ಸಮತುಲಿತವಾಗಿರಬೇಕೆಂದರೆ ಅದಕ್ಕೆ ಹುಳಿ, ಉಪ್ಪು, ಖಾರಗಳು ಎಷ್ಟು ಅಗತ್ಯವೊ ಹಾಗೆ ಜೀವನ ಪರಿಪಕ್ವಗೊಳ್ಳಬೇಕೆಂದರೆ ಸುಖ, ದುಃಖ, ಒಳಿತು ಕೆಡುಕುಗಳ ಅನುಭವ ಅತಿ ಮುಖ್ಯವೆಂದು ಹೇಳುತ್ತ ಜೀವನದ ಮಹತ್ವವನ್ನು ಸಾರುತ್ತಾರೆ.

ಹೀಗೆ ಮನುಷ್ಯನ ಬದುಕಿಗೆ ಅಗತ್ಯವಾದ ಸಾರ ಸರ್ವಸ್ವವನ್ನು ಹೊತ್ತು ನಡೆದಿರುವ ಕಗ್ಗ ಜಗತ್ತನ್ನೇ ಅಜ್ಞಾನದಿಂದ ಬೆಳಕಿನೆಡೆಗೆ ಕರೆದೊಯ್ಯುವ ಸಮರ್ಥ ಕೃತಿಯಾಗಿದೆ.

ಮಂಕು ತಿಮ್ಮನ ಕಗ್ಗದಲ್ಲಿ ಸಾಮಾಜಿಕ ಮೌಲ್ಯಗಳ ಪ್ರತಿಪಾದನೆ

"ಇರುವ ಕಣ್ಣಿರುವ ಬೆಳಕಿನೊಳಾದನಿತ ಪರಿಕಿಸಿದೊಡದುಲೇಸು" ಎಂದು ಹೇಳುವ ಡಿವಿಜಿ, ಜನರಿಗೆ ಇದ್ದುದರಲ್ಲೇ ಸುಖಿಸುವಂತೆ ಕರೆಕೊಡುತ್ತಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕೆಂಬ ಉಪದೇಶ ಮಾಡುತ್ತಾರೆ. ಹಾಸಿಗೆ ಇದ್ದಷ್ಟು ಕಾಲು ಚಾಚುವ ಬದಲು ಹಾಸಿಗೆಯನ್ನೇ ದೊಡ್ಡದು ಮಾಡಿಕೊಂಡು ನೆಮ್ಮದಿಯಿಲ್ಲದೆ ಅಲೆದಾಡುತ್ತಿರುವ ಜನರನ್ನು ನೋಡಿ ಮೂದಲಿಸುತ್ತಾರೆ.

ಮನುಷ್ಯ, ಪ್ರಕೃತಿ ಸೃಷ್ಟಿಯಲ್ಲೇ ವಿಭಿನ್ನವಾದ ಸ್ಥಾನವನ್ನು ಹೊಂದಿದ್ದಾನೆ. ಈತ ಬುದ್ಧಿಜೀವಿ ಎನಿಸಿಕೊಂಡಿದ್ದು, ವಿಶೇಷಗುಣಗಳ ಅಗತ್ಯತೆ ಇವನಿಗಿದೆ. ಸಮಾಜದಲ್ಲಿ ಶಾಂತಿ ಕದಡದಂತೆ, ಜಾತೀಯತೆಯನ್ನು ಮಾಡದೆ, ಒಬ್ಬರು ಮತ್ತೊಬ್ಬರ ನೋವಿಗೆ ಸ್ಪಂದಿಸುತ್ತ, ಉದಾರ, ಮುಕ್ತ ಮನಸ್ಸಿನಿಂದ ಒಬ್ಬರನ್ನೊಬ್ಬರು ಅರಿತು, ಬೆರೆತು, ಪರಸ್ಪರ ಪ್ರೀತಿ, ಗೌರವಗಳಿಂದ ಬದುಕುವುದೇ ಉತ್ತಮ ಸಮಾಜದ ಲಕ್ಷಣ ಆಡಂಬರದ ಬದುಕಿಗೆ ಹಾತೊರೆಯದೆ, ಇಲ್ಲದ್ದಕ್ಕೆ ಕೈ ಚಾಚದೆ ಇರುವುದರಲ್ಲೇ ಸುಖಿಸುತ್ತ ಸುತ್ತಲಿನ ವಾತಾವರಣದಲ್ಲಿ ಶಾಂತಿ ನೆಲೆಸಲು ಅವಕಾಶ ಮಾಡಿಕೊಡಬೇಕು ಎಂದು ಕಗ್ಗದ ಮೂಲಕ ಉಪದೇಶಿಸುತ್ತಾರೆ.

ಭಯ, ಸಂಶಯ, ತವಕ, ತಲ್ಲಣಗಳ ಕಂದರವಾಗಿರುವ ಜನರ ಮನಸ್ಸು, ಶುದ್ಧೀಕರಣ ಹೊಂದುವಂತೆ ಪರಿವರ್ತಿಸಲು ಡಿ.ವಿ.ಜಿ. ತಮ್ಮ ಕಗ್ಗದುದ್ದಕ್ಕೂ ಉಪದೇಶಿಸುತ್ತಾರೆ. ದ್ವೇಷ, ಅಸೂಯೆಗಳನ್ನು ಬಿಟ್ಟು ಸಂಸ್ಕೃತಿ ಸಂಪನ್ನರಾಗಿ, ಪ್ರೀತಿ, ಸಹನೆ, ತ್ಯಾಗ, ವಿಶ್ವಾಸ, ನಂಬಿಕೆಗಳಿಂದ ಬದುಕು ನಡೆಸಬೇಕೆಂಬ ಸಂದೇಶವನ್ನು ನೀಡುತ್ತಾರೆ. ಮತ್ತೊಬ್ಬರ ಅಭಿವೃದ್ಧಿಯನ್ನು ಕಂಡು ದ್ವೇಷಿಸುವ ಬದಲು ಸಂತೋಷಪಡಬೇಕು, ಇಲ್ಲದಿದ್ದರೆ ಅವರ ವ್ಯಕ್ತಿತ್ವಕ್ಕೆ ಅದು ಸಂಚಕಾರ. ಮುಗಿಯುವುದು ಕಾಳ್ಗಿಚ್ಚು ವನ ಬೂದಿಯಾದಂದು

ಹಗೆತನವುಮಂತು ಬಿಡು–ಮಂಕುತಿಮ್ಮ

ತಮ್ಮ ಈ ಮುಕ್ತರದ ಮೂಲಕ ಜನರ ಮನಸ್ಸಿನಲ್ಲಿ ಮನೆಮಾಡಿರುವ ದ್ವೇಷಾಸೂಯೆಗಳ ಗಾಢ ಪರಿಣಾಮವನ್ನು, ಅದರಿಂದಾಗುವ ಅನಾಹುತವನ್ನು ಬಹಳ ಮನೋಜ್ಞವಾಗಿ ವಿವರಿಸಿದ್ದಾರೆ. ಯಾವ ವ್ಯಕ್ತಿ ಮನಸ್ಸಿನಲ್ಲಿ ಹಗೆತನವನ್ನು ತುಂಬಿಕೊಂಡಿರುತ್ತಾನೋ ಆತ ಎಂದೂ ಸುಖಿಯಾಗಿರಲಾರ. ಬದುಕಿನ ಕೊನೆ ಕ್ಷಣದವರೆಗೂ ನೆಮ್ಮದಿ ಇಲ್ಲದೆ ತೊಳಲಾಟದ ಬದುಕನ್ನು ಬಾಳಬೇಕಾಗುತ್ತದೆ. ಆತನೊಳಗಿನ ಅಸೂಯೆ ಆತನ ಸಂಪೂರ್ಣ ವ್ಯಕ್ತಿತ್ವವನ್ನೇ ನುಂಗಿ ಹಾಕುತ್ತದೆ. ಹೇಗೆ ಮರಗಳು ಮಥಿಸಿ ಹೊತ್ತಿಕೊಂಡ ಕಿಚ್ಚು ಕಾಡನ್ನು ಸರ್ವನಾಶಮಾಡುವುದೇ ಹಾಗೆ. ಆದ್ದರಿಂದ ಮನುಷ್ಯ ಮೊದಲು ದ್ವೇಷಾಸೂಯೆಗಳನ್ನು ಬಿಡುವಂತೆ ಕರೆಕೊಡುತ್ತಾರೆ ಡಿ.ವಿ.ಜಿ.

ಸಾರು ನೀಂ ಯಾತ್ರಿಕರಿಗೆಲ್ಲ ಕೆಳೆಯಾಗಿರುತೆ।
ಮೇರು ಸಂಸ್ಕೃತಿಯೇ ಬಲ ಮಂಕುತಿಮ್ಮ॥

ಸಾಧಿಸಬೇಕೆಂಬ ಛಲ ಒಂದಿದ್ದರೆ ಸಾಧಕ ಏನೆಲ್ಲಾ ಕ್ಷೇತ್ರಗಳಲ್ಲಿ ಮುಂದುವರೆದು ಗುರಿಯನು ಮುಟ್ಟಬಹುದು. ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಾಧನೆ ಮಾಡಬಹುದು. ಶಿಕ್ಷಣ ಹೊಂದಿದವನು ಶಿಕ್ಷಕನೋ, ವಿಜ್ಞಾನಿಯೋ, ವೈದ್ಯರನೋ ಅಭಿಯಂತರನೋ ಹಾಗೂ ಉತ್ತಮ ಕಲಾಕೌಶಲವುಳ್ಳ ಶಿಲ್ಪಿಯೊ ಕಲಾಕಾರನೋ ಆಗಬಹುದು. ಹೀಗೆ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ನೂರೊಂದು ಮಾರ್ಗದಲ್ಲಿ ಮುಂದುವರೆಯಬಹುದು. ಹಾಗೆಯೆ ಸಾಧನೆಯ ಹಾದಿಯಲ್ಲಿ ನಾವು ಸಾಗುವಾಗ ಇತರರನ್ನೂ ನಮ್ಮೊಟ್ಟಿಗೆ ಕರೆದೊಯ್ಯಬೇಕು.

ಮೇಲುಕೀಳಿನ ತಾರತಮ್ಯವಿಲ್ಲದೆ ತಮಗನಿಸಿದ ವಿಭಿನ್ನ ಮಾರ್ಗದಲ್ಲಿ ಸಾಧನೆಯ ಮೆಟ್ಟಿಲುಗಳನ್ನು ಏರಬಹುದು. ಉದಾ : ಬಾಲ್ಯದಲ್ಲಿ ಪೇಪರ್ ಹಾಕಿ ಜೀವನ ಸಾಗಿಸುತ್ತಿದ್ದ ಅದ್ಭುತ ಕಲಾಂ ಎಂಬ ಪುಟ್ಟ ಬಾಲಕ ೨೧ನೆಯ ಶತಮಾನ ಕಂಡ ಒಬ್ಬ ವಿಜ್ಞಾನಿಯಾಗಿ ಅಮೃತ ಸಾಧನೆಗೈದ ಮಹಾನ್ ನಾಯಕನಾದ 'ಸಿರಿವಂತ ಕುಟುಂಬದಲ್ಲಿ ಹುಟ್ಟಿಯೇ ಗುರಿಯೊಂದನ್ನು ಇಟ್ಟುಕೊಂಡು ಬದುಕಿನ ಕಡೆಯವರೆಗೂ ಹಾಗೇ ಬದುಕಿ ದೇಶದ

ಮೊದಲ ಮಹಿಳಾ ಪ್ರಧಾನಿ ಎನಿಸಿಕೊಂಡರು ಇಂದಿರಾಗಾಂಧಿ. ಇವರಿಬ್ಬರ ಬದುಕಿನ ಶೈಲಿ ಬೇರೆಯಾದರೂ ಸಾಧಿಸುವ ಛಲ ಒಂದೇ ಆಗಿತ್ತು. ಆದ್ದರಿಂದ ಡಿವಿಜಿ ಬದುಕಿನ ಹಾದಿಯಲ್ಲಿ ನಿನ್ನೊಡದಿರುವ ಇತರರನ್ನು ಪ್ರೀತಿ, ಸಹಕಾರಗಳಿಂದ ಕಾಣು ಎಂದು ಹೇಳುತ್ತಾರೆ. ಕವಿಯೊಬ್ಬರು.

"ಬಾಳಿನದಾರಿಯ ಪ್ರೀತಿಯೇ ಸಾಲುಮರ

ಅರೆಘಳಿಗೆ ನೆರಳಿನಲಿ ಕುಳಿತು ಸಾಗುವ" ಎನ್ನುತ್ತಾರೆ. ನಿಜ ನಾವು ಪ್ರೀತಿಯ ನೆರಳಲ್ಲಿ ವಿಹರಿಸಲೇ ಬೇಕು.

ನಮ್ಮ ದೇಹ, ಜೀವಗಳು ಅಳಿದರೂ ನಮ್ಮ ನೆನಪಷ್ಟೇ ಪ್ರಪಂಚದಲ್ಲಿ ಅಮೃತಂಗಮಯವಾಗಿ ಉಳಿವುದು, ಆದ್ದರಿಂದ ಹಿರಿಯರು ಉಪದೇಶಿಸಿರುವ ಉದಾತ್ತ ಸಂಸ್ಕೃತಿಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳೋಣ ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡೋಣ ಎಂಬ ಆಶಯವನ್ನು ಡಿವಿಜಿ ನೀಡಿದ್ದಾರೆ.

ಕವಳಿಸುವುದೆಲ್ಲವನು ಮರೆವು; ಬಾಳೊಳ್ ಅದೊಂದು।
ಶಿವಕೃಪೆಯ ಲಕ್ಷಣವೋ ಮಂಕುತಿಮ್ಮ ॥

ಮರೆವು ಇಲ್ಲದಿದ್ದರೆ ಮನುಷ್ಯನ ಬದುಕು ಅಲ್ಲೋಲ ಕಲ್ಲೋಲವಾಗಿ ಬಿಡುತ್ತಿತ್ತು. ಮನುಷ್ಯ ನೆಮ್ಮದಿಯಾಗಿ ಬದುಕಬೇಕಾದರೆ ಆತನಿಗೆ ಘಟಿಸಿದ ಘಟನೆಗಳ ನೆನಪು ಎಷ್ಟು ಮುಖ್ಯವೋ ಅಂತೆಯೇ ಮರೆವೂ ಮುಖ್ಯ. ಸೂರ್ಯ ಹೀಗೆ ನಿತ್ಯವೂ ಹೊಸ ಕಳೆಯನ್ನು ಪ್ರಕೃತಿಯಲ್ಲಿ ಸುರಿಸುತ್ತಾ ಬರುತ್ತಾನೋ ಹಾಗೆಯೇ ಮನುಷ್ಯನೂ ಸಹ ಹಳೆಯ ಕಹಿಮರೆತು. ನಿತ್ಯ ಹೊಸ ತನವನ್ನು ನೂತತೆಯನ್ನು ಹೊಂದಿ ವ್ಯವಹರಿಸಬೇಕು. ಕಹಿ ನೆನಪುಗಳನ್ನು ಮರೆತು, ಒಳಿತನ್ನು ಮೈಗೂಡಿಸಿಕೊಳ್ಳಬೇಕು ಕಾಲ ಕಳೆದಂತೆ ಎಲ್ಲವೂ ಸಹಜ ಕ್ರಿಯೆಯಾಗಿ ನಡೆಯುತ್ತದೆ. ದೈವ ಕೃಪೆಯೇ ಇವೆಲ್ಲಕ್ಕೂ ಪ್ರೇರಕ ಎನ್ನುತ್ತಾರೆ. ಡಿ.ವಿ.ಜಿ. ಎಂತಹ ಕಹಿ ಅನುಭವವಿದ್ದರೂ ಅದನ್ನು ಮರೆಯಲೇ ಬೇಕು. ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ. ಇರುವ ಮುಂದಿನ ವೇಳೆಯನ್ನು ಬಳಸಿಕೊಂಡು ಉತ್ತಮ ಕೆಲಸವನ್ನು ಮಾಡೋಣ.

ಹೊಂದಿಸುವನಾರೋ, ನಿನ್ನಾಳಲ್ಲ, ಬೇರಿಹನು।
ಇಂದಿಗಿಂದಿನ ಬದುಕು – ಮಂಕುತಿಮ್ಮ ॥

ಮುನುಷ್ಯನೇ ಅಷ್ಟು ಭೋಗಾಸಕ್ತ, ಇಷ್ಟು ದೊರೆತರೆ ಮತ್ತಷ್ಟು, ಮತ್ತಷ್ಟು ಸಿಕ್ಕರೆ ಮಗದಷ್ಟು ಅವನ ಬಯಕೆಗಳಿಗೆ ಕೊನೆಯೇ ಇಲ್ಲ. ಅವನ ಆಸೆಯ ಬುತ್ತಿ ತುಂಬುವುದೇ ಇಲ್ಲ. ಆತನಿಗೆ ವರ್ತಮಾನದ ಬಗೆಗೆ ಆಸಕ್ತಿ ಇರುವುದಿಲ್ಲ. ಭವಿಷ್ಯದ ಅಂದರೆ ನಾಳಿನದೇನೊ? ನಾಳೆ ಹೇಗೆ ಕಳೆವುದು? ಹೀಗೆ ಗಳಿಸುವುದು? ಹೀಗೆ ಚಿಂತೆ. ಅದಕ್ಕಾಗಿಯೇ ಆತ ನಡೆವ

ದಾರಿ ಸನ್ಮಾರ್ಗವೋ ದುರ್ಮಾರ್ಗವೋ ಗಣನೆಗೇ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತನಿಸ್ವಾರ್ಥ ಬದುಕಿನ ಮೌಲ್ಯವನ್ನು ಎತ್ತಿಹಿಡಿಯುತ್ತಾರೆ. ಸನ್ಮಾರ್ಗವನ್ನು ತೋರುತ್ತಾರೆ. ಬದುಕಿನ ಪೂರ್ಣತೆಗೆ ಒಂದು ದೃಢವಾದ, ಖಚಿತವಾದ ನಿರ್ಧಾರ ಮತ್ತು ಅಚಲ ಶ್ರದ್ಧೆ ಅನಿವಾರ್ಯ ಎನ್ನುತ್ತಾರೆ ಮಾನ್ಯ ಡಿ.ವಿ.ಜಿ. ಮುಂದೆ ಹೇಗಿರುತ್ತದೆಯೋ ಎಂಬುದನ್ನು ಬಿಟ್ಟು ಇಂದು ಹೇಗಿರಬೇಕೆನ್ನುವುದನ್ನು ಕಲಿಯುವಂತೆ ತಿಳಿಸುತ್ತಾರೆ. ಇದು ನಿಜಕ್ಕೂ ವೇದ್ಯವಾದದ್ದು. ದೊಡ್ಡ ದೊಡ್ಡ ರಾಜಕಾರಣಿಗಳು ಭವಿಷ್ಯದ ಆಲೋಚನೆಯಲ್ಲಿ ತೊಡಗಿ ಮಿತಿ ಇಲ್ಲದ ಸಂಪತ್ತನ್ನು ಕೊಳ್ಳೆ ಹೊಡೆದು ಕಡೆಗೆ ಕಾರಣಾಂತರಗಳಿಂದ ಸೆರೆಮನೆ ಸೇರಿ ಪಶ್ಚಾತ್ತಾಪದ ಮಂತ್ರ ಜಪಿಸುತ್ತಿರುವುದನ್ನು ನಾವು ಪ್ರಸ್ತುತ ಕಾಣುತ್ತೇವೆ. ಮತ್ತೂ ಮುಂದುವರೆದು.

ಎಷ್ಟು ನೀನುಂಡರೇಂ? ಪುಷ್ಟಿ ಮೈಗಾವುದು।
ಹೊಟ್ಟೆ ಜೀರ್ಣಿಸುವಷ್ಟೆ; ಮಿಕ್ಕುದೆಲ್ಲ ಕಸ॥

ಮನುಷ್ಯನಿಗೆ ಅತಿಯಾಸೆ ಬೇಡವೆಂಬುದಾಗಿ ತಿಳಿಸುತ್ತಾರೆ. ರಾಜಕಾರಣಿಗಳ ಕುತ್ಸಿತ ಬುದ್ಧಿಯನ್ನು ಮೂದಲಿಸಿ ತಿದ್ದಲು ಪ್ರಯತ್ನಿಸಿದ್ದಾರೆ. "ಯಾತ್ರಿಕರು ನಾವು, ದಿವ್ಯ ಕ್ಷೇತ್ರವೀ ಲೋಕ" ಎನ್ನುವ ಡಿ.ವಿ.ಜಿ. ಈ ಜಗತ್ತಿಗೆ ನಾವು ಯಾತ್ರಿಕರಾಗಿ ಉತ್ತಮ ಉದ್ದೇಶ ಉಳ್ಳವರಾಗಿ ಬಂದಿದ್ದೇವೆ. ಈ ಜಗತ್ತು ಮಹಿಮೆಯುಳ್ಳ ಪುಣ್ಯ ಕ್ಷೇತ್ರ ಇಲ್ಲಿ ನಾವು ನಮ್ಮ ಪಾಪಕ್ಷಯಿಸುವ ಪುಣ್ಯ ಕಾರ್ಯಗಳನ್ನಷ್ಟೇ ಮಾಡಬೇಕು. ಪರಸ್ಪರ ಸಹಕಾರ, ಸಹಬಾಳ್ವೆಯ ಬದುಕನ್ನು ನಡೆಸಿ ಸತ್ಪಾತ್ರರಾಗಿ ಹೋಗಬೇಕು ಎಂಬ ನೈಜ ಸತ್ಯವನ್ನು ಮನದಟ್ಟು ಮಾಡಿದ್ದಾರೆ. ಸರಳ ಜೀವನವೇ ಮೌಲ್ಯಯುತವಾದದ್ದೆಂಬುದನ್ನು ತಿಳಿಸುತ್ತಾರೆ.

ಗುಡಿಯೊಳಗೆ ಕೊಡುವ ಹೂ ದೈವ ಭಕ್ತಗೆ ಚೆಂದ।
ಬಿಡಿಗಾಸು ಹೂವಳಿಗೆ – ಮಂಕುತಿಮ್ಮ॥

ಕವಿಯೊಬ್ಬರು ಹೇಳುವಂತೆ "ಅವರವರ ದೃಷ್ಟಿಯಲ್ಲಿ ಸೃಷ್ಟಿಯೂ ಬೇರೆ ಕವಿಯ ಕಣ್ಣಿಗೆ ಚಂದ್ರ ಹೆಂಡತಿಯ ಮೋರೆ........." ಎಂಬ ಮಾತು ಸತ್ಯಸ್ಯ ಸತ್ಯ. ನೋಡುವ ವಸ್ತು, ವಿಚಾರಗಳು ಒಂದೇ ಆದರೂ ಅದನ್ನು ನೋಡುವವರ ದೃಷ್ಟಿಯು ವಿಭಿನ್ನವಾಗಿರುತ್ತದೆ. ಗಿಡದಲ್ಲಿರುವ ಹೂ ಪ್ರಕೃತಿ ಪ್ರಿಯರಿಗೆ ಮನ ಮೋಹಕವಾಗಿ ಕಾಣುತ್ತದೆ. ಅದೇ ಹೂವನ್ನು ಪತ್ನಿಯ ಮುಡಿಯಲ್ಲಿ ಕಂಡ ಪತಿ ಹರ್ಷಿಸುತ್ತಾನೆ. ಅದರ ಸೋಬಗನ್ನು ಸವಿಯುತ್ತಾನೆ. ಅದೇ ಹೂವನ್ನು ಭಕ್ತನಾದವ ತನ್ನ ಆರಾಧ್ಯ ದೈವಕ್ಕೆ ಸಮರ್ಪಿಸಿದಾಗ ಆತ ಅದರ ಸವಿಯನ್ನು ಮನಸಾರೆ ಉಣ್ಣುತ್ತಾನೆ. ಇಷ್ಟೆಲ್ಲಾ ಸಂತೋಷವನ್ನು ಕೊಡುವ ಹೂವು ಬಿಡಿಸಿ ಮಾರುವ ಹೂಗಾರ್ತಿಗೆ ಜೀವನ ನಿರ್ವಹಣೆಗೆ ಆಧಾರವಾದ ದುಡ್ಡಿನ ಮೂಲ. ಹಾಗಾಗಿ ನಾವು ದರ್ಶಿಸುವ ಯಾವುದೇ ವಸ್ತು ವಿಚಾರಗಳನ್ನು ಲಘುವಾಗಿ ನೋಡದೆ ಅದರೊಳಗಿನ ಸತ್ಯಕ್ಕೆ, ಮೌಲ್ಯಕ್ಕೆ ಬೆಲೆ ಕೊಡಬೇಕು ಎಂಬ ಸತ್ಯವನ್ನು ಗುಂಡಪ್ಪನವರು ತಿಳಿಸಿದ್ದಾರೆ.

ನಮ್ಮದೆಂಬುದು ಏನೂ ಇಲ್ಲ ಎನ್ನುವಾಗ ನಾವೂ ಇರುವುದರೊಳಗೆ ಒಂದಾಗಿದ್ದು ಬಿಡುಬೇಕು.

ತೃಣಕೆ ಹಸಿರೆಲ್ಲಿಯದು। ಬೇರಿನದೇ। ಮಣ್ಣಿನದೇ?
ದಿನಪನದೇ? ಚಂದ್ರನದೆ? ನೀರಿನದೆ? ನಿನದೆ॥

ಪರಸ್ಪರ, ಸಹಕಾರ, ಸಹಬಾಳ್ವೆಗಳಿಲ್ಲದೆ ಯಾವುದೂ ಪೂರ್ಣಗೊಳ್ಳುವುದಿಲ್ಲ. ಒಂದು ಕೆಲಸ ಯಶಸ್ವಿಯಾಗಬೇಕಾದರೆ ಅದರ ಹಿಂದೆ ಹಲವಾರು ಕಾಣದ ಕೈಗಳ ಶ್ರಮ ಅನಿವಾರ್ಯ. ಉದಾ: ಅನ್ನದ ಅಗುಳೊಂದನ್ನು ತೆಗೆದುಕೊಂಡರೆ ಅದು ಆ ಹಂತಕ್ಕೆ ತಲುಪುವವರೆಗೆ ಅದೆಷ್ಟೊ ಜನರ ಶ್ರಮ ಅಡಗಿರುತ್ತದೆ. ಇಲ್ಲೂ ಸಹ ನಾವು ಈ ಸೃಷ್ಟಿಯ ವಿಸ್ಮಯವನ್ನು ಗುರುತಿಸುವ ಮನಸ್ಸನ್ನು ಬೆಳೆಸಿಕೊಳ್ಳಬೇಕು. ಇಲ್ಲಿ ಡಿ.ವಿ.ಜಿ. ಸಸ್ಯದ ಹಸಿರು ಬಣ್ಣಕ್ಕೆ ಮೂಲ ಎಲ್ಲಿಯದೆಂದು ಹುಡುಕುವ ನಿಟ್ಟಿನಲ್ಲಿ ವಿಸ್ಮಿತರಾಗಿದ್ದಾರೆ. ಅದರ ಹಸಿರು ಬಣ್ಣಕ್ಕೆ ಸೂರ್ಯ, ಚಂದ್ರ, ನೀರು ಮತ್ತು ಸಸ್ಯದ ಬೇರು ಹಾಗೂ ಅದನ್ನು ಹಿಡಿದಿಟ್ಟಿರುವ ನೆಲ ಎಲ್ಲವೂ ಪೂರಕವಾಗಿದ್ದು, ಒಂದನ್ನೇ ಗುರ್ತಿಸಲಾಗದು. ಹಾಗಾಗಿ ಯಾವುವು ಎಂಬುದನ್ನು ನಿರ್ದಿಷ್ಟವಾಗಿ ಗುರ್ತಿಸಲು ಹೋಗಿಲ್ಲ. ಮನುಷ್ಯನೊಬ್ಬನ ಯಶಸ್ಸಿನ ಹಿಂದೆಯೂ ಹೀಗೆ ಹಲವಾರು ಕೈಗಳ ಸಹಾಯವಿರುವುದನ್ನು ಕಾಣಬಹುದು. "ಗುಣಕೆ ಕಾಣವೊಂದೆ? ಮಂಕುತಿಮ್ಮ" ಎಂದು ಪ್ರಶ್ನಿಸುತ್ತಾರೆ.

ಯಾರೋ ಜನ್ಮತಹ ಕೆಟ್ಟವರಲ್ಲ, ಕೆಲವೊಮ್ಮೆ ಸಮಾಜವೇ ಜನರನ್ನು, ದುರ್ಮಾರ್ಗಕ್ಕೆ ಇಳಿಸುತ್ತದೆ. ಜಗತ್ತನ್ನು ಅದೆಷ್ಟೋ ಮಹನೀಯರು ಆಳಿ ಹೋಗಿದ್ದಾರೆ. ಆದರೆ ಯಾರೂ ತಪ್ಪೆಸಗದೆ ಸತ್ಪಾತ್ರರಾಗಿಯೇ ಹೋದವರಲ್ಲ. ಆದರೆ ಕೆಲವರು ಮಾತ್ರ ಇಂತಹ ಅಪವಾದಗಳಲ್ಲಿ ಸಿಕ್ಕಿಕೊಳ್ಳುತ್ತಾರೆ.

ಜನಕಜೆಯ ದರುಶನದಿನಾಯ್ತು ರಾವಣಚಪಲ।
ಕನಕಮೃಗ ದರುಶನದೆ ಜಾನಕಿಯ ಚಪಲ॥

ಇಡೀ ರಾಮಾಯಣ ಕಾವ್ಯಕ್ಕೆ ಖಳನಾಯಕನಾಗಿ ರಾವಣನನ್ನು ಚಿತ್ರಿಸುತ್ತಾರೆ. ಅದರಂತೆ ಕೃತಿಯ ಆಸ್ವಾದಕರೂ ಸಹ ಆತನನ್ನೇ ನಿಂದಿಸುವುದಂಟು. ನಾಗಚಂದ್ರ ತನ್ನ ಕೃತಿಯಲ್ಲಿ "ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯುಂ ದಾಂಟದೆ" ಎನ್ನುತ್ತಾನೆ. ಇದು ನಿಜಕ್ಕೂ ಒಪ್ಪಬೇಕಾದ ಮಾತು. ಸಮುದ್ರವೇ ತನ್ನ ಮೇರೆಯನ್ನು ಮೀರಿ ಹೋಗುವಂತಿರುವಾಗ ಮನುಷ್ಯ ಸಹಜ ಗುಣ ಹೊಂದಿದ ರಾವಣ ತಪ್ಪು ಮಾಡಿದ್ದರಲ್ಲಿ ಘನ ಎಂದೇನೂ ಎನಿಸುವುದಿಲ್ಲ. ಚಿನ್ನದ ಜಿಂಕೆಯ ಆ ಒಂದು ನೋಟಕ್ಕೇ ಸೀತೆ ಮರಳಾದಳೆಂದರೆ, ಇನ್ನು ಅಪ್ರತಿಮ ಸುಂದರಿಯಾದ ಸೀತೆಯನ್ನು ಕಂಡು ರಾವಣನ ಮನಸ್ಸು ಚಂಚಲವಾಗದೆ ಇರದು. ಇಲ್ಲಿ ಇಬ್ಬರಲ್ಲೂ ಒಂದೇ ಬಗೆಯ ವ್ಯಾಮೋಹವನ್ನು ಕಾಣುತ್ತೇವೆ. ಜಿಂಕೆಯನ್ನು ಕೊಂದಾದರೂ ಸರಿ ಪಡೆಯಬೇಕೆಂಬ ಸೀತೆಯ ಬಯಕೆ,

ರಾವಣನು ಸೀತೆಯನ್ನು ಪಡೆವ ಬಯಕೆಗಿಂತ ದೊಡ್ಡದು. ಅದರೂ ಜನ ನಿಂದಿಸುವುದು ರಾವಣನನ್ನು ಮಾತ್ರ.

ಸ್ತ್ರೀ ಎಂಬ ಕಾರಣಕ್ಕೂ ರಾಮನ ಪತ್ನಿ ಎಂಬ ಕಾರಣಕ್ಕೂ ಸೀತೆಯನ್ನು ಉನ್ನತೀಕರಿಸಿದರು. ಮುಖ ನೋಡಿ ಮೊಳ ಹಾಕು ಎಂಬ ಸಮಾಜದ ಜನರ ತಾರತಮ್ಯವನ್ನು ಧಿಕ್ಕರಿಸಬೇಕಷ್ಟೆ. ಸೀತೆ ಜನರ ಮನ್ನಣೆಗೆ, ಕನಿಕರಕ್ಕೆ ಪಾತ್ರಳಾಗಿ ದೋಷ ಮುಕ್ತಳಾಗುತ್ತಾಳೆ. ಆದರೆ ರಾವಣ ಜನರ ನಿಂದನೆಗೆ ಗುರಿಯಾಗುತ್ತಾನೆ. ಇಂದೂ ಸಹ ಹಲವಾರು ಘಟನೆಗಳನ್ನು ವೃತ್ತ ಪತ್ರಿಕೆ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಕಾಣುತ್ತೇವೆ. ಹಲವಾರು ದೋಷಿಗಳು ಹೆಣ್ಣೆಂಬ ಕಾರಣಕ್ಕೊ, ಶ್ರೀಮಂತ, ರಾಜಕಾರಣಿ, ಅಧಿಕಾರಿಗಳ ವಂಶಸ್ಥರೆಂಬ ಕಾರಣಕ್ಕೊ ಅಪರಾಧ ಮಾಡಿಯೂ, ಅರಿಯದ ಮುಗ್ದರಂತೆ ರಾಜಾರೋಷವಾಗಿ ಹೊರಬರುತ್ತಾರೆ. ಅದಕ್ಕೆ ಡಿ.ವಿ.ಜಿ. ಹಳತು ಎಂಬ ಕಾರಣಕ್ಕೆ ತಲೆಬಾಗದೆ ನೀನು ಅದನ್ನು ವಿಮರ್ಶೆಯ ಒರೆಗಲ್ಲಿಗೆ ಇಟ್ಟು ಪರಾಮರ್ಶೆಯನ್ನು ಮಾಡು ಎಂದು ಕರೆಕೊಡುತ್ತಾರೆ. ನಿಷ್ಪಕ್ಷಪಾತವಾದ ಮೌಲ್ಯಮಾಪನ ಮಾಡಲು ತಿಳಿಸುತ್ತಾರೆ.

ಆತ್ಮ ಪ್ರಶಂಸೆ ಮಾಡಿಕೊಳ್ಳುತ್ತ, ಇಲ್ಲಸಲ್ಲದ ಒಳಿತುಗಳನ್ನು ಆರೋಪಿಸಿಕೊಂಡು ಬೀಗುವ, ಇತರರನ್ನು ಹಂಗಿಸುವ ಸಮಾಜಘಾತುಕರನ್ನು ಮೂದಲಿಸುವ ಡಿ.ವಿ.ಜಿ. ಅಂತಹ ಹೊಣೆಗೇಡಿಗಳು ಆತ್ಮ ವಿಮರ್ಶೆ ಮಾಡಿಕೊಳ್ಳುವಂತೆ ಎಚ್ಚರಿಸುತ್ತಾರೆ. ಪ್ರಕೃತಿ ಸೃಷ್ಟಿಯ ಮುಂದೆ ಪರಾವಲಂಬಿಯಾದ ಮನುಷ್ಯ ತೃಣ ಸಮಾನನು ಆತ ನಮ್ರನಾಗಿ ನಡೆದುಕೊಳ್ಳುವುದು ಒಳ್ಳೆಯದು ಎನ್ನುತ್ತಾರೆ.

ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ।
ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ॥

ಪ್ರಕೃತಿ ರಹಸ್ಯಮಯವಾದದ್ದು. ಇದು ನಮ್ಮ ಆಲೋಚನೆಗೂ ಮೀರಿದ್ದು, ಇಡೀ ಜಗತ್ತಿಗೇ ಜೀವ ಸ್ವರೂಪಿಯಾಗಿ ಉಸಿರನ್ನೀಯುತ್ತಿರುವ ಪ್ರಕೃತಿ ತನ್ನೊಳಗೆ ಏನೆಲ್ಲಾ ವಿಸ್ಮಯವನ್ನು ಹೊಂದಿದ್ದೂ ಸಹ ಎಂದೂ ಬೀಗುವುದಿಲ್ಲ. ತುಂಬಿದ ಕೊಡದಂತೆ ತನ್ನ ಕೆಲಸವನ್ನು ಚಾಚೂ ತಪ್ಪದೆ ನಿಷ್ಫಲಾಪೇಕ್ಷೆಯಿಂದ ಮಾಡುತ್ತಿದೆ. ಆದರೆ ಪ್ರಕೃತಿ ಶಕ್ತಿಯ ಮುಂದೆ ಶೂನ್ಯನಾದ ಮನುಷ್ಯ ಡೌಲಿನಿಂದ ಬೀಗುತ್ತಾನೆ.

ಜನರೇ ಕಟ್ಟಿದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಯಕನಾಗಿ ಕುಳಿತು ಅವರದೇ ತೆರಿಗೆ ಹಣ ತಿಂದು ಅದನ್ನೇ ಜನರ ಅಭಿವೃದ್ಧಿ ನೆಪದಲ್ಲಿ ವ್ಯಯಿಸಿ ತಾನೇ ಖರ್ಚು ಮಾಡುತ್ತಿದ್ದೇನೆಂದು ಬೀಗುತ್ತಾನೆ. ಸಮಾಜ ಸೇವಾಸಕ್ತ, ಸಮಜೋದ್ಧಾರಕ ಎಂಬ ಶಿರೋನಾಮೆಯನ್ನು ಹೊತ್ತ ವ್ಯಕ್ತಿಗಳು ವಿನಾಃಕಾರಣ ಚಳುವಳಿಗಳನ್ನು ಹುಟ್ಟುಹಾಕಿ ಹೆಸರಿನ ಆಸೆಗೆ ಮುಂದಾಳತ್ವ ಮೆರೆಯುತ್ತಾರೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬಂತೆ ಇಂತಹ

ಡಂಭಾಚಾರಿಗಳನ್ನು ಕುರಿತೇ ಬಸವಣ್ಣ

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ
ಎಂದು ವಿಡಂಬಿಸುತ್ತಾರೆ.

ಪ್ರಕೃತಿಯ ಮುಂದೆ ಸಾಧನಾ ಶೂನ್ಯರಾದ ಮನುಷ್ಯರ ಅಹಂಕಾರ ಅವರಿಗೆ ಶೋಭಿಸುವುದಿಲ್ಲ. ಹಾಗಾಗಿ ಪ್ರಕೃತಿಯ ನಿಯಮಕ್ಕೆ ತಲೆಬಾಗುವಂತೆ ತಿಳಿಸುತ್ತಾರೆ. ಸಮಜ ಸೇವೆ ಮಾಡುವವರು ಎಂದೂ ಹೆಸರಿಗೆ ಆಶಿವುದಿಲ್ಲ. ಇತ್ತೀಚೆಗೆ ತಮಿಳುನಾಡಿನಲ್ಲಿ ಜಯಲಲಿತ (ಮುಖ್ಯಮಂತ್ರಿ) ವಿದ್ಯಾರ್ಥಿಗಳಿಗಾಗಿ ಉಚಿತ ಲ್ಯಾಪ್‌ಟಾಪ್ ಕೊಟ್ಟುದುಂಟು ಅವುಗಳ ಮೇಲೆ ಆಕೆಯ ಚಿತ್ರವಿದ್ದುದೂ ಉಂಟು. ಇವೆಲ್ಲಾ ಅವರವರ ಪ್ರಚಾರಕ್ಕಾಗಿ ಅಷ್ಟೇ. ಹಾಗಾಗಿ ಡಿವಿಜಿ ಜನರನ್ನು ಸರಳತೆಯನ್ನು ಮೈಗೂಡಿಸಿಕೊಳ್ಳುವಂತೆ ಎಚ್ಚರಿಸುತ್ತ 'ಹೊಲಿ ನಿನ್ನ ತುಟಿಗಳನ್ನು ಮಂಕುತಿಮ್ಮ ಎನ್ನುತ್ತಾರೆ.

ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು ।
ಹೊಸಯುಕ್ತಿ ಹಳೆತತ್ವ ದೊಡಗೂಡೆ ಧರ್ಮ॥

ಅದ್ಭುತವಾದ ಆಲೋಚನೆಗಳನ್ನು ಮನದಾಳದಲ್ಲಿ ಬಿತ್ತುವ ಡಿ.ವಿ.ಜಿ.ರವರ ಒಂದೊಂದು ನುಡಿಯೂ ಅನುಭವ ಗ್ರಾಹ್ಯವಾದದ್ದು. ಹೊಸತೆಂಬ ಕಾರಣಕ್ಕೆ ಎಲ್ಲವೂ ಶ್ರೇಷ್ಠವೆಂದಾಗಲಿ, ಹಳೆತೆಂಬ ಕಾರಣಕ್ಕೆ ಎಲ್ಲವೂ ತಿರಸ್ಕಾರ ಯೋಗ್ಯವೆಂದಾಗಲಿ ಭಾವಿಸದೆ ಎಲ್ಲ ಕಡೆಯೂ ಒಳಿತನ್ನಷ್ಟೇ ಗುರುತಿಸಿ ಸ್ವೀಕರಿಸಬೇಕೆಂಬ ಇಂಗಿತವನ್ನು ಡಿ.ವಿ.ಜಿ. ವ್ಯಕ್ತ ಪಡಿಸುತ್ತಾರೆ. ಪ್ರಾಚೀನರ ವಿಚಾರ, ವಿಜ್ಞಾನ, ಯೋಜನೆಗಳು ಇಂದಿನ ಸಾಧನೆಗಳಿಗೆ ತಳಪಾಯವಿದ್ದಂತೆ. ಇವುಗಳೊಟ್ಟಿಗೆ ಇಂದಿನ ಆಧುನಿಕರ ಚಿಂತನೆಗಳನ್ನು ಬೆರೆಸಿದಾಗ ಇನ್ನೂ ಅದ್ಭುತವಾದ ಸಾಧನೆಗಳನ್ನು ಮಾಡಬಹುದು. ಇವು ಒಂದಕ್ಕೊಂದು ಪೂರಕ ಎನ್ನುತ್ತಾರೆ. ಹಳೆಯ ಅಜ್ಞಾನ ಅಂಧಕಾರಗಳನ್ನು ತಿದ್ದಿಕೊಂಡು ಹೊಸದನ್ನು ರೂಪಿಸಿಕೊಳ್ಳುವಂತೆ ಕರೆ ನೀಡುತ್ತಾರೆ.

ಪ್ರಾಚೀನರ ತತ್ವ ವಿಚಾರಗಳು ಋಷಿವಾಕ್ಯಗಳು ಇಡೀ ಜಗತ್ತನ್ನೇ ಬೆಳಕಿನೆಡೆಗೆ ಕೊಂಡೊಯ್ದವು. ವಿಜ್ಞಾನದೊಡನೆ ಬೆರೆತು ಪೂರಕ ವಾತಾವರಣವನ್ನು ಸೃಷ್ಟಿಸಿ ಅಮೂಲ್ಯವಾದವು. ಅಂದಿನ ಪುಷ್ಪಕ ವಿಮಾನ ಪರಿಕಲ್ಪನೆ ಇಂದಿನ ಅಂತರಿಕ್ಷಯಾನಕ್ಕೆ ಪೂರಕವಾದ ಮಾಹಿತಿಗಳನ್ನು ಒದಗಿಸುತ್ತದೆ. ಅಮರ ಸಿಂಹನ ಅಮರ ಕೋಶ ಕೃತಿ ತನ್ನೊಳಗೆ ಸಾಕಷ್ಟು ಮಾಹಿತಿಗಳನ್ನು ಒಳಗೊಂಡಿದೆ.

ತಲೆಪಾಗಿನೊಳಕೊಳಕ ಪಂಚೆನಿರಿಯೊಳಹರಕ।

ತಿಳಿಸುವೆಯ ರಜಕಗಲ್ಲದೆ ಲೋಗರಿಂಗೆ॥

ಮನುಷ್ಯ ಸಾಮಾಜಿಕವಾಗಿ ಒಂದು ಗೌರವ ಪೂರ್ಣ ಬದುಕನ್ನು ನಡೆಸಬೇಕಾದರೆ ಆತ್ಮಾಭಿಮಾನವನ್ನು ಕಾಪಾಡಿಕೊಂಡು ಹೋಗಬೇಕು. ಸಮಾಜದ ನಗೆ ಪಾಟಲಿಗೆ ಗುರಿಯಾಗಬಾರದು. ತನ್ನೊಳಗಿನ ಅಶಕ್ತತೆ, ಅಸಹಾಯಕತೆಗಳನ್ನು ಯಾರಿಗೂ ತಿಳಿಯಲು ಬಿಡಬಾರದು ಎಂದು ಹೇಳುತ್ತ ಸದೃಢ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತೆ ಕರೆ ನೀಡುತ್ತಾರೆ.

ತಿಳಿವಿನೊಳ್ಳೊತೆನಿಸಿದುದು ನಡೆಯೊಳೇತಕ್ಕರಿದು?
ಕುಳಿ ಮೇಡು ದೂರ ಮತಿಮನಸುಗಳ ನಡುವೆ॥

ಯಾವುದೇ ವಿಚಾರಗಳನ್ನು ನಾವು ತಿಳಿದುಕೊಂಡರಷ್ಟೇ ಸಾಲದು. ಅಲ್ಲದೆ ಆ ನಾವು ತಿಳಿದಿರುವ ವಿಚಾರಗಳನ್ನು ಬೇರೆಯವರಿಗೆ ಹೇಳುವುದಷ್ಟರಿಂದ ಪ್ರಯೋಜನವಿಲ್ಲ. ನಾವು ಮೊದಲು ಆ ವಿಚಾರಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಒಳ್ಳೆಯದು ಎನಿಸಿದುದನ್ನು ಶಿರಸಾವಹಿಸಿ ಅನುಕರಿಸಬೇಕು ಜೀವನ ಎಂಬುದು ಏರು-ಪೇರುಗಳಿಂದ ಕೂಡಿರುತ್ತದೆ. ಇಲ್ಲಿ ಡಿವಿಜಿ ನಮ್ಮ ಬುದ್ಧಿ ಮತ್ತು ಮನಸ್ಸುಗಳನ್ನು ದೀಪವನ್ನು ಹಚ್ಚುವ ಎಣ್ಣೆ ಬತ್ತಿಗಳಿಗೆ ಹೋಲಿಸುತ್ತಾರೆ.

"ಒಳಗಿನಾಯೆಣ್ಣೆ ಬತ್ತಿಗಳೆರಡುಮೊಡಬೆರೆಯೆ ಬೆಳಕು ಜೀವೋನ್ನತ್ತಿಗೆ" – ಮಂಕುತಿಮ್ಮ ಎನ್ನುತ್ತಾರೆ. ದೇಹದೊಳಗೆ ಗೌಪ್ಯವಾಗಿ ಅಡಗಿರುವ ಬುದ್ಧಿ ಮತ್ತು ಮನಸ್ಸುಗಳು ಒಗ್ಗೂಡಿ ಕಾರ್ಯವೊಂದರಲ್ಲಿ ಕಲೆತಾಗ ಅದರಲ್ಲಿ ಯಶಸ್ಸು ಸಿಗುತ್ತದೆ. ಬದುಕಿನ ಆಶೋತ್ತರಗಳು ಈಡೇರಿ ಬದುಕು ಸಾರ್ಥಕವಾಗುತ್ತದೆ.

ಎಷ್ಟೋ ತಂದೆ-ತಾಯಿಯರು ಇಂದು ಮಕ್ಕಳಲ್ಲಿ ಅಡಗಿರುವ ಜ್ಞಾನವನ್ನು ಗುರುತಿಸುವಲ್ಲಿ ವಿಫಲರಾಗಿರುವುದನ್ನು ಕಾಣಬಹುದು. ಅವರ ಬುದ್ಧಿಗೆ ನಿಲುಕಿದ್ದನ್ನು, ಮನಸ್ಸಿಗೆ ತೋಚಿದ್ದನ್ನು ಮಾಡಲು ಬಿಡಿದೆ ತಮ್ಮದೇ ನಿರ್ದೇಶನದಲ್ಲಿ ಮಕ್ಕಳನ್ನು ನಡೆಸಲು ಪ್ರಯತ್ನಿಸಿ ಸೋಲುತ್ತಿದ್ದಾರೆ.

ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ ।
ನಂಬಿಯುಂ ನಂಬದಿರುವಿಬ್ಬಂದಿ ನೀನು॥

ನಿಜಕ್ಕೂ ಮನುಷ್ಯನನ್ನು ದಡಕ್ಕೆ ಮುಟ್ಟಿಸುವಂತದು ನಂಬಿಕೆ. ಆತನಲ್ಲಿ ಆತ್ಮವಿಶ್ವಾಸ ಎಂಬುದು ನೆಲೆಗೊಳ್ಳಬೇಕಾದರೆ ನಂಬಿಕೆ ಎಂಬುದು ಮುಖ್ಯ ಯಾವುದೇ ಕೆಲಸಕ್ಕೆ ಕೈ ಹಾಕುವ ಮೊದಲು ಅದರಲ್ಲಿ ನಂಬಿಕೆ ಇಟ್ಟು ವಿಶ್ವಾಸವಿಟ್ಟು ನಮ್ಮನ್ನು ತೊಡಗಿಸಿಕೊಳ್ಳಬೇಕು. ಮನಸ್ಸಿಲ್ಲದ ಮನಸ್ಸಿನಿಂದ, ಅಪನಂಬಿಕೆಯಿಂದ ಕೈಹಾಕಿದರೆ ಅದು ಕೈಗೂಡದು. ಇಂದು ಇಂತಹ ಉದಾಹರಣೆಗಳನ್ನು ಹಲವಾರು ಕ್ಷೇತ್ರಗಳಲ್ಲಿ ಕಾಣುತ್ತೇವೆ.

ಕರುಬುವಂ ವಿಧಿ ಸೈಸನಾರೊಳಂ ದರ್ಪವನು।
ಶಿರವ ಬಾಗಿಹುದೆ ಸರಿ–ಮಂಕುತಿಮ್ಮ॥

ಅತಿಯಾದರೆ ಅಮೃತವೂ ವಿಷ ಎನ್ನುತ್ತಾರೆ. ಅಹಂಕಾರ ಶ್ರೇಯಸ್ಕರವಲ್ಲ ಎಂಬುದೇ ಈ ಮುಕ್ತಕದ ಇಂಗಿತ. ಸಾಮಾಜಿಕವಾಗಿ ಮನುಷ್ಯ ಒಂದು ಸಮಾನತೆಯನ್ನು ಸಾಧಿಸಬೇಕಾದರೆ ಆತನಿಗೆ ಅಹಂಕಾರವಿರಬಾರದು. "ಅಧಿಕಾರ, ಸಿರಿ, ಸಂಪತ್ತು, ಯಶಸ್ಸು, ಕೀರ್ತಿ, ಇವುಗಳನ್ನು ಪಡೆಯಲು ಬಹುಜನ ನಿರಂತರ ಪ್ರಯತ್ನಿಸುತ್ತಿರುತ್ತಾರೆ. ಅವು ಲಭಿಸುತ್ತಿದ್ದಂತೆ ಅದರಲ್ಲಿ ಅನೇಕರು ಅಹಂಕಾರದಿಂದ ಬೀಗುತ್ತಾರೆ. ರೀತಿ ನೀತಿಗಳನ್ನು, ಶಿಸ್ತು ಸಂಯಮಗಳನ್ನು ಗಾಳಿಗೆ ತೂರಿ ಮದೋನ್ಮತ್ತರಾಗಿ, ತಮ್ಮನ್ನು ಬಿಟ್ಟರಿಲ್ಲ ಎಂಬಂತೆ ನಡೆದುಕೊಳ್ಳುತ್ತಾರೆ. "ದರ್ಪಂಕಸ್ಯ–ನಪಾತಾಯ, ನೋನ್ನತೆ ಕಸ್ಯ ನಮ್ರತಾ" ಎಂಬ ಸುಭಾಷಿತದಂತೆ ಅಹಂಕಾರವು ಯಾರನ್ನು ತಾನೆ ಉರುಳಿಸದೆ ಬಿಟ್ಟಿದೆ ಹಾಗೆಯೇ ನಮ್ರತೆಯ ಯಾರನ್ನು ತಾನೆ ಮೇಲಕ್ಕೆ ಎತ್ತದೆ ಉಳಿಸಿದೆ ಎಂಬ ಪ್ರಶ್ನೆಯನ್ನು ನಮ್ಮ ಮುಂದಿಟ್ಟು, ಅಹಂಕಾರವು ಅಧಃಪತನಕ್ಕೆ ನಾಂದಿ ಎಂಬುದನ್ನು ಸಾರಿ ಹೇಳಿದೆ".[೧]

ದಿನನಿತ್ಯ ಸಂಭವಿಸುವ, ದುರಂತಗಳು, ದುಷ್ಕೃತ್ಯಗಳಿಗೆಲ್ಲ ಈ ಅಹಂಕಾರವೇ ಮೂಲ. ಇತರರಿಗೆ ತಾನು ತಗ್ಗಿ ನಡೆಯಬಾರದು ಅದು ತನ್ನ ಘನತೆಗೆ ತೊಡಕು ಎಂಬ ಇಂದಿನ ಜನರ ಮನೋಭಾವವೇ ಅವರ ನಾಶಕ್ಕೆ ಕಾರಣವಾಗಿದೆ. ಹಿರಿಯರನ್ನು ಗೌರವದಿಂದ ಕಾಣುವುದು ಮನುಷ್ಯ ಜೀವನದ ಒಂದು ಉತ್ತಮ ಮೌಲ್ಯ. ದೇಶ ದೇಶಗಳ ನಡುವೆಯೇ ಇಂದು ಇಂತಹ ಅಹಂಕಾರದ ಕಾರಣದಿಂದ ಅನಾಹುತಗಳು ಸಂಭವಿಸುತ್ತದೆ. ಅಹಂನಿರತ ರಾಷ್ಟ್ರಗಳ ಮೇಲೆ ಕಡಿವಾಣ ಹೇರಲಿಕ್ಕಾಗಿ ವಿಶ್ವಸಂಸ್ಥೆಯಂತಹ ಅಂತರಾಷ್ಟ್ರೀಯ ಸಂಸ್ಥೆಗಳೂ ಸಹ ತಮ್ಮ ಕೈಮೀರಿ ಪ್ರಯತ್ನಿಸುತ್ತಿವೆ.

ಉರಿಯುತಿರೆ ಹೊಟ್ಟೆ ಕಿಚ್ಚಾರಿಸಲು ನೀರೆಲ್ಲಿ?।
ನರಕವೆದೆಯಲಿ ನೆಲಸೆ ನಿದ್ದೆಗೆಡೆಯಲ್ಲಿ?॥

ಮನುಷ್ಯ ತನ್ನ ನೀಚ ಬುದ್ಧಿಗಳ ಪರಿಣಾಮದಿಂದಾಗಿ ಇತ್ತೀಚೆಗೆ ಮಾನಸಿಕ ಕ್ಷೋಭೆಗೊಳಗಾಗುತ್ತಿದ್ದಾನೆ. ತನ್ನನ್ನೇ ಸರಿಪಡಿಸಿಕೊಳ್ಳದೆ ಬಿಟ್ಟು ವಿನಾಕಾರಣ ಇತರರ ವೈಯಕ್ತಿಕ ವಿಚಾರಗಳಲ್ಲಿ ತಲೆತೂರಿಸಿ ಅಪಕೀರ್ತಿಗೆ ಪಾತ್ರನಾಗುತ್ತಿದ್ದಾನೆ. ಪ್ರಾಣಿಗಳಿಗೂ ಭಿನ್ನವಾದ ಈತ ತನ್ನ ಅಲೋಚನಾ ಶಕ್ತಿಯಿಂದಾಗಿ ಉತ್ತಮ ಸಾಧನೆಗಳನ್ನು ಮಾಡುತ್ತಿದ್ದಾನೆ. ಬಸವಣ್ಣನವರು ಒಂದೆಡೆ ಹೇಳುತ್ತಾ ಹೋಗುತ್ತಾರೆ.

"ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಅಳಿಯಲು ಬೇಡ"

೧. ಮಂ.ತಿ. ಕಗ್ಗ–ಜೀವನ ದೀವಿಗೆ ಎಸ್.ಶ್ರೀನಿವಾಸಶೆಟ್ಟಿ ಪು. ೪೬.

ಜಗತ್ತನ್ನು ಬೆಳಕಿನೆಡೆಗೆ ಕೊಂಡೋಯ್ದ ಇಂತಹ ಮಹಾನ್ ವ್ಯಕ್ತಿಗಳ ಮಾತುಗಳೇ ಜೀವನಕ್ಕೆ ಆದರ್ಶ. ಆದರೆ ಅವುಗಳನ್ನು ಪಾಲಿಸುವಲ್ಲಿ ಜನ ಬೇಜವಾಬ್ದಾರಿ ತೋರುತ್ತಿದ್ದಾರೆ. ತಾವೇ ಇತತರಿಗಿಂತ ದೊಡ್ಡವರು. ತಾವು ಮಾಡಿದ್ದೇ ಸರಿ, ಅದನ್ನೇ ಎಲ್ಲರೂ ಒಪ್ಪಬೇಕು ಎಂಬ ಛಲಕ್ಕೆ ಬಿದ್ದು ವಿನಾಶದಂಚಿಗೆ ಸಾಗಿದ್ದಾರೆ. 'ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ ನೆರಮನೆಯ ಸುಡದು ಎನ್ನುವಂತೆ ಸಹನೆ, ತಾಳ್ಮೆಗಳನ್ನು ನಾವು ಮೈಗೂಡಿಸಿಕೊಂಡಲ್ಲದೆ ಅಭಿವೃದ್ಧಿ ಅಸಾಧ್ಯ. ಅದಕ್ಕೆ ಡಿ.ವಿ.ಜಿ "ಕರುಬಿದನ ಹರಿ ಪೊರಗೆ – ಮಂಕುತಿಮ್ಮ" ಎನ್ನುತ್ತಾರೆ.

"ಅರೆಗಣ್ಣು ನಮದೆಂದು ಕೊರಕೊರಗಿ ಫಲವೇನು?" ಎಂದು ಪ್ರಶ್ನಿಸುವ ಡಿವಿಜಿ ಸೋಮಾರಿಗಳನ್ನು, ಆಲಸಿಗಳನು ಆತ್ಮ ವಿಶ್ವಾಸ ತುಂಬುತ್ತಾ ಎಚ್ಚರಿಸುತ್ತಾರೆ ಯಾವ ವ್ಯಕ್ತಿಯೂ ದಡ್ಡನಲ್ಲ ಎಲ್ಲರಿಗೂ ಒಂದಲ್ಲ ಒಂದು ಬಗೆಯಲ್ಲಿ ಪ್ರತಿಭೆ ಇರುತ್ತದೆ. ತಮ್ಮಲ್ಲಿರುವ ಬುದ್ಧಿವಂತಿಕೆಯನ್ನು ಉಪಯೋಗಿಸಿಕೊಳ್ಳುವಲ್ಲಿ ಅವರು ವಿಫಲರಾಗುತ್ತಿದ್ದಾರೆ. ಸಿಕ್ಕಂತಹ ಕೆಲಸವನ್ನು ಶ್ರದ್ಧೆವಹಿಸಿ ಮಾಡಿದರೆ ಖಂಡಿತ ಯಶಸ್ಸು ಸಿಗುತ್ತದೆ. ಇಲ್ಲದ ಸಬೂಬುಗಳನು ಕೊಡದೆ ಪರಿಸ್ಥಿತಿಗೆ ಹೊಂದಿಕೊಂಡು ಸಾಧನೆ ಮಾಡುವಂತೆ ಎಚ್ಚರಿಸುವ ಡಿವಿಜಿ ನಿನ್ನ ಸಾಮರ್ಥ್ಯವನ್ನು ನೀನು ನಿರೂಪಿಸು ಎನ್ನುತ್ತಾರೆ. ಎಲ್.ಎಸ್. ಪರೀಕ್ಷೆಯಲ್ಲೇ ಅನುತ್ತೀರ್ಣರಾದ ಡಿವಿಜಿ ಮುಂದೆ ಜ್ಞಾನಪೀಠದಂತಹ ಉತ್ಕೃಷ್ಟ ಪ್ರಶಸ್ತಿಯನ್ನು ಪಡೆಯಲು ಸಮರ್ಥವಾಗುವಂತಹ ಮಂಕುತಿಮ್ಮ ಕಗ್ಗ ಕೃತಿಯನ್ನೇ ಬರೆದು ಪ್ರಖ್ಯಾತರಾದರು.

ತಂದೆಯಾರ್ ಮಕ್ಕಳಾರ್ ನಾನೆಂಬುದೆದ್ದು ನಿಲೆ।
ಬಂದ ಮುರಿವುದು ಬಳಿಕ – ಮಂಕುತಿಮ್ಮ ॥

ಮನುಷ್ಯ ಎಷ್ಟೇ ಸದ್ಗುಣಿಯಾದರೂ ಆತನಲ್ಲಿ ಅಹಂಕಾರ ಒಮ್ಮೆ ಮೊಳೆದೋರಿದರೆ ಆತನ ಸರ್ವಸ್ವವೇ ನಾಶವಾಗಿ ಬಿಡುತ್ತದೆ. ಅಹಂಕಾರಿಯಾದ ಮನುಷ್ಯನಲ್ಲಿ ಅಸೂಯೆ, ಅಪ್ರಮಾಣಿಕತೆ, ಅಸಭ್ಯತೆ, ಅನೈತಿಕ ಚಲುವಟಿಕೆಗಳಂತಹ ದುರ್ಗುಣಗಳು ನೆಲಗೊಳ್ಳುತ್ತವೆ. ಮನುಷ್ಯರ ನಡುವಿನ ಸಂಬಂಧಗಳ ಕೊಂಡಿ ಕಳಚಿಕೊಳ್ಳುತ್ತದೆ. ಇಂದು ಯಾರೂ ಯಾರನ್ನು ನಂಬಲಾಗದಂತಹ ವಿಷಯ ಪರಿಸ್ಥಿತಿ ನಿರ್ಮಾಣವಾಗಿದೆ.

ಧನಮದ, ಅಧಿಕಾರ ಮದ ಮತ್ತು ಯೌವನ ಮದಗಳು ಮನುಷ್ಯನನ್ನು ದುಸ್ಥಿತಿಗೆ ತಳ್ಳುತ್ತವೆ. ಅಹಂಕಾರವೇ ಆತನ ಶತ್ರು. ಅಹಂಕಾರದಿಂದ ಬೀಗಿದ ಹಿರಣ್ಯಾಕ್ಷ ಮಗನೆಂಬ ಮಮಕಾರವನ್ನು ಮರೆತು ಪ್ರಹ್ಲಾದನನ್ನು ಕೊಲ್ಲಿಸುವ ಪ್ರಯತ್ನ ಮಾಡುತ್ತಾನೆ. ದಿನ ಬೆಳಗಾದರೆ ವೃತ್ತ ಪತ್ರಿಕೆಗಳು ಸಂಬಂಧಗಳನ್ನು ಗಮನಿಸದೆ ತಂದೆ ಮಕ್ಕಳನ್ನು, ಹೆಂಡತಿ ಗಂಡನನ್ನು ಕೊಲ್ಲುವ ಮತ್ತು ತಂದೆಯೇ ಮಗಳನ್ನು ಅಣ್ಣನೆ ತಂಗಿಯನ್ನು ಅತ್ಯಾಚಾರ ಮಾಡಿದಂತಹ ಹಲವಾರು ಘಟನೆಗಳನ್ನು ಕಾಣುತ್ತೇವೆ.

ಇಂತಹ ಘೋರ ಘಟನೆಗಳಿಗೆ ಪ್ರಮುಖ ಕಾರಣ ಮನುಷ್ಯನ ಅಹಂಕಾರ. ಅಹಂಕಾರ ತುಂಬಿದ ಮನುಷ್ಯನ ಪಥ ಬದಲಾಗುತ್ತಿದೆ. ಪ್ರೀತಿಯ ಓಕುಳಿ ಆಡಬೇಕಾದವನು ರಕ್ತದೋಕುಳಿಯನ್ನು ಆಡುತ್ತಾನೆ. ಅಹಂಕಾರದ ಸ್ವರೂಪ ಭೀಕರವಾದದ್ದು ಎನ್ನುತ್ತ ಡಿವಿಜಿ "ನಾನೆಂಬುದೆದ್ದುನಿಲೆ ಬಂದ ಮುರಿವುದು ಬಳಿಕ"–ಮಂಕುತಿಮ್ಮ ಎನ್ನುತ್ತ ಎಚ್ಚರಿಕೆಯನ್ನು ಕೊಡುತ್ತಾರೆ. ನಿಜಕ್ಕೂ ವಾಸ್ತವದ ಬದುಕಿಗೆ ಮೌಲ್ಯಯುತವಾದ ಇಂತಹ ಹಿರಿಯರ ನುಡಿಗಳು ಅವಶ್ಯಕ.

ಅಂಧನೇ ವಿರಕ್ತನ್, ಅಪ್ಸೆಯ ಕಾಣದನೆ ಯತಿ।
ಕಂಡು ಕೆರಳದನಾರೋ? – ಮಂಕುತಿಮ್ಮ ॥

ಪ್ರತಿಯೊಬ್ಬ ಮನುಷ್ಯನೂ ಪ್ರಕೃತಿಯ ನಿಯಮಕ್ಕೆ ಒಳಗಾದವನೆ, ಪ್ರಕೃತಿಯು ವಿಧಿಸಿದ ಎಲ್ಲ ಸಂಸ್ಕಾರಗಳಿಗೂ ಆತ ಒಳಗಾಗಿಯೇ ಬದುಕಬೇಕು. ಇಂದ್ರಿಯಗಳ ವ್ಯಾಮೋಹದಿಂದ ಮುಕ್ತನಾಗುತ್ತೇನೆಂದು ಬೀಗುತ್ತ, ಇಂದ್ರಿಯಗಳನ್ನು ತಾನು ಗೆದಿದ್ದೇನೆ ಎಂದು ಹೇಳುವವರು ಮೂರ್ಖರು. ಯಾರು ತನ್ನ ಇಂದ್ರಿಯಗಳನ್ನು ಗೆದ್ದೆ ಎನ್ನುವನೋ ಆತ ಕುರುಡನಾಗಿರಬೇಕು ಅಥವಾ ಆತನಿಗೆ ಪ್ರಕೃತಿಯ ಸೊಬಗನ್ನು ಸವಿಯುವ ಆಸಕ್ತಿ ಇಲ್ಲದೆ ವಿರಕ್ತನಾಗಿರಬೇಕು. ಹಾಗೂ ಮೋಹಕ ರೂಪದ ಅಪ್ಸರ ಸ್ತ್ರೀಯನ್ನು ಕಾಣದ ಋಷಿಯಾದವನಿಗೆ ಮಾತ್ರ ಈ ಬಗೆಯ ಇಂದ್ರಿಯಗಳ ವ್ಯಾಮೋಹವನ್ನು ಗೆಲ್ಲಲು ಸಾಧ್ಯ ಎನ್ನುತ್ತಾರೆ. ಇದೇ ವಿಚಾರವಾಗಿ ಸರ್ವಜ್ಞನು

"ಅಡವಿಯನು ಹೊಗಬಹುದು, ಮಡದಿಯನು ಬಿಡಬಹುದು,
ಬಿಡದೆ ಧ್ಯಾನದೊಳಿರಬಹುದು.
ವಾಸನೆಯ ಕೊಡಹಲಳವಲ್ಲ ಸರ್ವಜ್ಞ"

ಎಂಬುದಾಗಿ ಹೇಳುತ್ತಾನೆ. ವ್ಯಕ್ತಿಯೊಬ್ಬ ಹೇಗೆ ತನ್ನ ವೃತ್ತಿಯನ್ನು ಮರೆಯಲಾರನೋ ಹಾಗೆ ದಿನನಿತ್ಯದ ಆತನ ಹವ್ಯಾಸಗಳನ್ನು ಆತ ಮರೆಯಲಾರ. ಆತನ ಏಕಾಗ್ರತೆ ಎಂಬುದು ಅದೇ ದಿಕ್ಕನ್ನು ಹಿಂಬಾಲಿಸಿ ಹೋಗುತ್ತದೆ ಎಂಬುದು ಇಲ್ಲಿನ ಸಾರ. ಅದಕ್ಕೇ ಹೇಳುವುದು ಹುಟ್ಟುಗುಣ ಸುಟ್ಟರೂ ಹೋಗದು ಎಂದು ಮನುಷ್ಯನ ಸಹಜ ಗುಣದಿಂದ ಯಾರೂ ಮುಕ್ತರಲ್ಲ ಎಂಬುದು ಇಲ್ಲಿನ ಉಪದೇಶ.

ಮಕ್ಕಳ ಭವಿಷ್ಯಕ್ಕೆ ಕಕ್ಕುಲತೆ ಪಡಬೇಡ।
ಪಕ್ಕಾಗುವುದು ಭಾಗ್ಯವೆಂತೆಂತೊ ಜಗದಿ॥

ಮಕ್ಕಳ ಭವಿಷ್ಯದ ಬಗೆಗೆ ಅತಿಯಾದ ಕಾಳಜಿ ವಹಿಸುವ ತಂದೆ–ತಾಯಿಯರನ್ನು ಉದ್ದೇಶಿಸಿ ಡಿ.ವಿ.ಜಿ. ಉಪದೇಶಿಸುತ್ತಾರೆ. ಎಲ್ಲ ತಾಯಿ–ತಂದೆಯರೂ ಬಯಸುವುದು

ತಮ್ಮ ಮಕ್ಕಳ ಭವಿಷ್ಯ ಭವ್ಯವಾಗಿರಲೆಂದು. ಮಕ್ಕಳ ನೆಮ್ಮದಿಯ ಬದುಕಿನ ಕನಸನ್ನು ಕಾಣುತ್ತಾರೆ. ತಮ್ಮಿಂದಾಗುವ ಸಾಧನೆಗಳನ್ನು ಮಕ್ಕಳ ಕೈಯ್ಯಲ್ಲಿ ಮಾಡಿಸಿ ಸುಖಿಸುವ ಹೆಬ್ಬಯಕೆ ಹೊಂದಿರುತ್ತಾರೆ.

ಮಕ್ಕಳ ಮೇಲೆ ಕಾಳಜಿ ತೋರುವ ನೆಪದಲ್ಲಿ ಅವರ ಮೇಲೆ ಅತಿಯಾದ ಒತ್ತಡವನ್ನೇ ತರುತ್ತಾರೆ ಎನಿಸುತ್ತದೆ. ಮಗು ಬೆಳಗಿನಿಂದ ಸಂಜೆವರೆಗೂ ಅವರ ಎದುರೇ ಇರಬೇಕು (ಶಾಲಾ ವೇಳೆ ಬಿಟ್ಟು) ಯಾರೊಟ್ಟಿಗೂ ಹೆಚ್ಚು ಬೆರೆಯದೆ, ಕಲಿಕೆಯ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ನಿರ್ಬಂಧ ಹಾಕಿರುತ್ತಾರೆ. ಶಿಕ್ಷಣ ಇಂದು ಬಂಡವಾಳದ ಕ್ಷೇತ್ರವಾಗಿದೆ. "ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲೆಸಿದಂತೆ" ಮಗು ಹುಟ್ಟುವ ಮೊದಲೇ ಶಾಲೆಯನ್ನು ನಿರ್ಧರಿಸಿ ಅರ್ಜಿಯನ್ನು ಪಡೆದು ಬಿಟ್ಟಿರುತ್ತಾರೆ.

ಮಗುವಿಗೇ ಆಸಕ್ತಿ ಇಲ್ಲದಾಗ ಪೋಷಕರು ಏನೇ ಮಾಡಿದರೂ ಅದರಿಂದ ಪ್ರಯೋಜನ ಶೂನ್ಯ. ಹಾಗಾಗಿ ಮಕ್ಕಳಿಗೆ ಅತಿಯಾಗಿ ಒತ್ತಡ ಹಾಕಬೇಡಿ ಎಂಬ ಎಚ್ಚರಿಕೆ ನೀಡುತ್ತಾರೆ. ಮಕ್ಕಳ ಮೇಲೆ ಅತಿಯಾದ ವ್ಯಾಮೋಹ ಇಟ್ಟುಕೊಂಡರೆ ಮಕ್ಕಳು ಸ್ವಯಂ ಪ್ರಕಾಶವಿಲ್ಲದ ಸೂರ್ಯನ ಬೆಳಕಿನಿಂದ ಮಾತ್ರ ಪ್ರಕಾಶಿಸುವ ಗ್ರಹಗಳಂತೆ ಆಗಿ ಬಿಡುತ್ತಾರೆ. ಸ್ವಂತಿಕೆ ಬೆಳೆಯಲು ಬಿಡಬೇಕು.

ಹೊಟ್ಟೆಯಲಿ ಹಸಿವು, ಮನದಲಿ ಮಮತೆ–ಈ ಯೆರಡು।
ಗುಟ್ಟು ಕೀಲುಗಳಿಹುವು ಸೃಷ್ಟಿಯಂತ್ರದಲಿ ॥

"ಹಸಿವಿಲ್ಲದುಣ ಬೇಡ ಹಸಿದು ಮತ್ತಿರಬೇಡ" ಎನ್ನುತ್ತ ಸರ್ವಜ್ಞನೂ ಕೂಡ ಆಹಾರದ ಮಹತ್ವವನ್ನು ಮತ್ತು ಹಸಿವಿನ ಭೀಕರತೆಯನ್ನು ತಿಳಿಸಿದ್ದಾನೆ. ಹಸಿವಿನ ಬಾಧೆ ಮತ್ತು ತಾನು ತನ್ನದು ಎಂಬ ಮಮಕಾರಗಳು ಮನುಷ್ಯನನ್ನು ಕೆಲವು ಸಂದರ್ಭಗಳಲ್ಲಿ ಏನನ್ನೆಲ್ಲಾ ಮಾಡಿಸಿ ಬಿಡುತ್ತವೆ. "ಇವೆರಡು ರಹಸ್ಯವಾದ ಕೀಲಿಗಳು ಪ್ರಾಣಿಪಕ್ಷಿಗಳಾದಿಯಾಗಿ ಜಗತ್ತಿನ ಎಲ್ಲಾ ಜೀವಕೋಟಿಗಳೂ ಕ್ರಿಯಾಶೀಲವಾಗಿರುವಂತೆ, ಸಾಹಸಗಳಿಗೆ ಮನಮಾಡುವಂತೆ ಮಾಡಿವೆ. ಜಗತ್ತಿನ ಎಲ್ಲಾ ಮಹತ್‌ಕಾರ್ಯಗಳಿಗೆ, ಸಾಹಸಗಳಿಗೆ, ನೋವು–ನಲಿವುಗಳಿಗೆ, ಏಳು–ಬೀಳುಗಳಿಗೆ ಇವು ಪ್ರೇರಕಗಳಾಗಿವೆ ಎಂದು ತಿಮ್ಮಗುರು ನಂಬಿದ್ದಾರೆ. ಮಾನವನಂತೂ ತನ್ನ ಹೊಟ್ಟೆಯ ಹಸಿವನ್ನು ತಣಿಸುವುದಕ್ಕಾಗಿ ಮತ್ತು ಹೃದಯದ ಮಮತೆಯ ಸಲುವಾಗಿ ವೈವಿಧ್ಯಮಯ ಸಾಹಸಗಳಿಗೆ ಕೈಯಿಕ್ಕುತ್ತಾನೆ. ಕೆಲವೊಮ್ಮೆ ಗೆಲ್ಲುತ್ತಾನೆ ಕೆಲವೊಮ್ಮೆ ಸೋಲುತ್ತಾನೆ. ಅದಕ್ಕೆ ಡಿವಿಜಿ ರವರು ಈ ಎರಡು ಗುಟ್ಟಿನ ಕೀಲಿಗಳು ನಿನ್ನನ್ನು ಪ್ರೇರೇಪಿಸಿ ಸಾಹಸಕ್ಕೆ ಮುಂದೊಡ್ಡಬಹುದು. ನಿನ್ನನ್ನು ನಜ್ಜುಗುಜ್ಜಾಗಿಸಬಹುದು, ಸೊಟ್ಟಗಾಗಿಸಬಹುದು ಎಂಬ ಮುನ್ನೆಚ್ಚರಿಕೆಯನ್ನು ಈ ಮೇಲಿನ ಮುಕ್ತಕದ ಮೂಲಕ ನೀಡಿದ್ದಾರೆ."[೧] (ಪು. ೯೨)

[illegible]

ನಾವು ಪ್ರಸ್ತುತ ಕಾಣುತ್ತಿರುವ ಆತ್ಮಾಹುತಿ ದಾಳಿ, ನಕ್ಸಲೈಟ್ಸ್, ಭಯೋತ್ಪಾದಕತೆ ಮೊದಲಾದ ಕುಕೃತ್ಯಗಳೆಲ್ಲವೂ ಯಾವುದೋ ಆಮಿಷಕ್ಕೆ ಬಲಿಯಾದ, ಯಾರ ಮೇಲಿನ ಮಮಕಾರಕ್ಕೋ ಗುರಿಯಾದ ವ್ಯಕ್ತಿಯ ದುರಂತ ಅಂತ್ಯ. ಮಮತೆಯ ಸುಳಿಯಲ್ಲಿ ಸಿಕ್ಕ ವ್ಯಕ್ತಿ ಎಂತಹದೇ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಸಿದ್ಧನಾಗಿರುತ್ತಾರೆ. ದೇಶಾಭಿಮಾನಿ ಸೈನಿಕರು ತಾಯ್ನಾಡಿನ ರಕ್ಷಣೆಗಾಗಿ ಪ್ರಾಣತೆತ್ತು ಹೋರಾಡುವ ಪರಿ ದೊಡ್ಡದು. ಹಸಿವು, ಮಮತೆಗಳನ್ನು ಪೂರೈಸಿಕೊಳ್ಳುವುದು ಅನಿವಾರ್ಯ ಆದರೆ ಆ ದಾರಿ ಸಮಂಜಸವಾಗಿರಬೇಕೆಂಬುದೇ ತಿಮ್ಮ ಗುರುವಿನ ಕಿವಿಮಾತು.

ವೇಳೆಗಡು ಮರೆತಾತುರದಿನ್ ಅಡುಗೆ ಪಕ್ಕಹುದೇ?।
ತಾಳುಮೆಯೆ ಪರಿಪಾಕ–ಮಂಕುತಿಮ್ಮ॥

ತಾಳ್ಮೆಯ ಮಹತ್ವವನ್ನು ಡಿವಿಜಿ ಮನದಷ್ಟು ಮಾಡಿಸುತ್ತಾರೆ. ಮನುಷ್ಯನಲ್ಲಿ ತಾಳ್ಮೆಯು ಪಕ್ವತೆಯನ್ನು ವೃದ್ಧಿಸುತ್ತದೆ. "ತಾಳುವಿಕೆಗಿಂತ ತಪವು ಇಲ್ಲ, ಕೇಳಬಲ್ಲವರಿಗೆ ಹೇಳುವೆನು ಸೊಲ್ಲ" ಎನ್ನುತ್ತಾರೆ ದಾಸರು. 'ತಾಳಿದವನು ಬಾಳಿಯಾನು' ಎಂಬ ನುಡಿ ಮಾತೇ ಇದೆ. ಯಾವುದೇ ಕ್ರಿಯೆ ಪ್ರತಿಕ್ರಿಯೆಗಳು ಜರುಗಬೇಕಾದರೆ ಅದಕ್ಕೆ ನಿರ್ದಿಷ್ಟ ಸಮಯದ ಅವಶ್ಯಕತೆ ಇರುತ್ತದೆ. ಸಮಯದ ಅವಕಾಶವನ್ನು ಕೊಡುದೆ ಆತುರದಿಂದ ಕೆಲಸ ಮಾಡಿದರೆ ಅದು ಅನಾಹುತಕ್ಕೆ ಕಾರಣವಾಗುವುದ ಖಂಡಿತ. ನಿಂತ ವ್ಯಕ್ತಿ ದಿಢೀರನೆ ಮಲಗಲು ಹೇಗೆ ಸಾಧ್ಯವಿಲ್ಲವೋ, ಕುಳಿತು ನಂತರ ಹಾಗೆ ಬಿತ್ತಿದ ಬೀಜ ಮೊಳಕೆಯೊಡೆಯಲು, ಅಡುಗೆ ಅಚ್ಚುಕಟ್ಟಾಗಿ ಮುಗಿಯಲು ಅಲ್ಲಿ ನಿರ್ದಿಷ್ಟ ಸಮಯದ ಅವಶ್ಯಕತೆ ಇರುತ್ತವೆ. ಹಾಗೂ ನಿರ್ದಿಷ್ಟ ಕ್ರಮಗಳೂ ಇರುತ್ತವೆ. ಹಾಗಾಗಿ ಎಂತಹುದೇ ಉದ್ವಿಗ್ನ ಸ್ಥಿತಿಯಲ್ಲೂ ತಾಳ್ಮೆಗೆ ಮಹತ್ವ ನೀಡಬೇಕು.

ಪ್ರಾಚೀನ ಹೊರತು ಸ್ವತಂತ್ರ ನೀಂ, ಸಾಂತವದು।
ಚಾಚು ಮುಂದಕೆ ಮನವ – ಮಂಕುತಿಮ್ಮ॥

ಬದುಕೆಂಬ ಪಾಠಶಾಲೆಯಲ್ಲಿ ಸಿಹಿ–ಕಹಿ ಅನುಭವಗಳು ಸಾವಿರಾರು. ಈ ಪೈಕಿ ನಮಗಾದಂತಹ ಕಹಿ ಅನುಭವಗಳನ್ನು ಮರೆತು, ಭವಿಷ್ಯದ ಸುಗಮ ಜೀವನಕ್ಕೆ ಕಾಲಿಡಬೇಕು. ನಮ್ಮ ಕಣ್ಣುಗಳು ಹೇಗೆ ಮುಂದಿನದನ್ನು ಮಾತ್ರ ಗ್ರಹಿಸುತ್ತವೆಯೋ ಹಿಂದಿನದನ್ನು ಗ್ರಹಿಸುವಲ್ಲಿ ವಿಫಲವಾಗುತ್ತವೆಯೋ ಹಾಗೆ ನಾವೂ ಸಹ ಕೇವಲ ಮುಂದಿನ ಭವಿಷ್ಯವನ್ನು ಅರಸುತ್ತ, ಇಂದಿನ ವರ್ತಮಾನವನ್ನು ಸಾರ್ಥಕ್ಯಗೊಳಿಸಿಕೊಳ್ಳುತ್ತ ಹಿಂದಿನ ಭೂತವನ್ನು ಮರೆತು ಬಿಡಬೇಕು. ಮನುಷ್ಯನ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಮರೆವಿನ ಪಾತ್ರವೂ ಸಹ ಒಂದು. "ತರಚುಗಾಯನ ಕೆರೆದು ಹುಣ್ಣನಾಗಿಪುದು ಕಪಿ ಕೊರತೆಯೊಂದನು ನೀನು ನೆನೆ ನೆನೆದು ಕೆರಳಿ" ಎನ್ನುತ್ತ ಮನುಷ್ಯ ತಾನು ಗೊಂದಲಗಳಿಗೆ ಒಳಗಾಗದೆ ನಿಷ್ಕಲ್ಮಶ

ಮನಸ್ಸಿನಿಂದ ಬದುಕನ್ನು ದೂಡಬೇಕು ಎನ್ನುತ್ತ ಚಾಚು ಮುಂದಕೆ ಮನವ-ಮಂಕುತಿಮ್ಮ ಎನ್ನುತ್ತಾರೆ ಡಿವಿಜಿ.

ಸೋತ ದುರ್ಬಲಿಗೆ ಸಲ್ಲುವುದು ನಮ್ಮನು ಕಂಪೆ।
ನೀತಿ ನಿಂದೆಯೊಳಿರದು - ಮಂಕುತಿಮ್ಮ॥

ದುರ್ಬೀನು ಹಾಕಿ ಹುಡಿಕಿದರೂ ಸಹ ತಪ್ಪೇ ಮಾಡಿಲ್ಲದ ವ್ಯಕ್ತಿ ನಮಗೆ ಸಿಗುವುದಿಲ್ಲ. ಮಹಾನ್ ವ್ಯಕ್ತಿಗಳೂ ಸಹ ಒಮ್ಮೆಯಾದರೂ ತಪ್ಪು ಮಾಡಿ ತಿದ್ದಿಕೊಂಡವರೆ. ಮೂಲತಃ ಯಾರೂ ದೋಷಿಗಳಲ್ಲ, ಪರಿಸ್ಥಿತಿಗಳಿಗೆ ಕಟ್ಟಬಿದ್ದು ಅವರು ತಪ್ಪು ದಾರಿ ಹಿಡಿಯುತ್ತಾರೆ. ಸಮಾಜವೇ ಅವರನ್ನು ಅಂತಹ ಹೀನ ಸ್ಥಿತಿಗೆ ತಳ್ಳಿರುತ್ತದೆ. ಕ್ಷಮೆಯ ಮೂಲಕ ತಪ್ಪತಸ್ಥರನ್ನು ಮಣಿಸಬೇಕು.

ಸಮಾಜಘಾತುಕ ಎಂಬ ಹಣೆಪಟ್ಟಿ ಹೊತ್ತ ಹಲವರು ಜನರನ್ನು ಸಮಾಜ ಇನ್ನೂ ಕ್ರೌರ್ಯಕ್ಕೆ ತಳ್ಳಿ ಸಂತೋಷ ಪಡುತ್ತದೆ. ಇಂತಹ ವಿಕಟನಗೆ ಮನುಷ್ಯನ ವ್ಯಕ್ತಿತ್ವಕ್ಕೆ ಮಾರಕ ಎನ್ನುತ್ತಾರೆ ಡಿವಿಜಿ. "ಪಾಪಿಗೂ ಉದ್ದಾರ ಸಾಧ್ಯ" ಎನ್ನುತ್ತಾರೆ ಕುವೆಂಪು. ಬಲಹೀನರಿಗೆ ಅಸಹಾಯಕರಿಗೆ, ಸೋಲುಂಡವರಿಗೆ ನಾವು ಅನುಕಂಪವನ್ನು ತೋರಿ ಸಹಾಯಹಸ್ತವನ್ನು ಚಾಚಬೇಕು. ಇತರರನ್ನು ನಿಂದಿಸುವುದಾಗಲಿ, ಅವರ ತಪ್ಪುಗಳನ್ನು ಎತ್ತಿ ಹಿಡಿದು ಹಿಯಾಳೀಸುವುದಾಗಲಿ ಮಾಡದೆ ನಮ್ಮ ತಪ್ಪುಗಳ ಬಗೆಗೂ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು.

ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ।
ಹಿತವಿರಲಿ ವಚನದಲಿ, ಋತವ ಬಿಡದಿರಲಿ॥

ವಚನಕಾರರು ಹೇಳುತ್ತಾರೆ, "ನುಡಿದರೆ ಮುತ್ತಿನ ಹಾರದಂತಿರಬೇಕು" ಎಂದು ನಮ್ಮ ಮಾತಿನ ರೀತಿ ನಮ್ಮ ಬದುಕನ್ನು ರೂಪಿಸುತ್ತದೆ. ನಾವು ಆಡುವ ಮಾತು ಒಳ್ಳೆಯದಿದ್ದರೆ ಅದಕ್ಕೆ ಹೊರಗಿನ ಪ್ರತಿಕ್ರಿಯೆ ಸಹ ಒಳ್ಳೆಯದೇ ಆಗಿರುತ್ತದೆ. ನಮ್ಮ ಮಾತು ಇತರರನ್ನು ಹಿಯಾಳಿಸುವ, ಹೀಗಳೆವ ತೆರನಾಗಿರಬಾರದು. ನಮ್ಮ ಮಾತು ಮತ್ತು ನಮ್ಮ ನಡಾವಳಿಗಳಿಗೆ ಸಂಭಂಧವಿರಬೇಕು. ನಾವು ಸಹನಾಮಯಿಗಳಾಗಿ ಬದಕುಬೇಕು. ಎಲ್ಲೂ ಉತ್ಪ್ರೇಕ್ಷೆಯ ಮಾತುಗಳನ್ನು ಆಡುವ ಮೂಲಕ ಪರರ ನಿಂದೆಗೆ ಗುರಿಯಾಗಬಾರದು ಅದಕ್ಕೇ ಸರ್ವಜ್ಞ

ಮಾತಿನಿಂ ನಗೆನುಡಿಯು, ಮಾತಿನಿಂ ಹಗೆಕೊಲೆಯು,
ಮಾತಿನಿಂ ಸರ್ವಸಂಪದವು ಲೋಕಕ್ಕೆ
ಮಾತೇ ಮಾಣಿಕ್ಯವು ಸರ್ವಜ್ಞ,

ಎಂಬ ಉತ್ತಮವಾದ ಮೌಲ್ಯಯುತ ಮಾತುಗಳನ್ನು ಹೇಳುತ್ತಾನೆ. ನಾವಾಡುವ ಮಾತು ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸುತ್ತದೆ. ಮಾತೇ ನಮ್ಮ ಯೋಗ್ಯತೆಯನ್ನು

ನಿರ್ಣಯಿಸಿ ಬಿಡುತ್ತದೆ. ಅದಕ್ಕೇ ಡಿವಿಜಿರವರು ಮಾತು ಹಿತಮಿತವಾಗಿರಬೇಕು 'ಅತಿಬೇಡವೆಲ್ಲಿಯುಂ'-ಮಂಕುತಿಮ್ಮ ಎನ್ನುತ್ತಾರೆ.

ಕಂಡಿಹಿರ ನರಹೃದಯದಾಳ ಸುಳಿ ಬಿರುಬುಗಳ,
ದಂಡವದನುಳಿದ ನುಡಿ-ಮಂಕುತಿಮ್ಮ"

ಪ್ರಸ್ತುತ ಜನ ತಾವು ಮಾಡಿದ ಸಣ್ಣದೊಂದು ಕೆಲಸವನ್ನು ನೆನದು ತಾವು ಅಪಾರವಾದದ್ದು ಏನನ್ನೋ ಸಾಧಿಸಿದುದಾಗಿ ಬೀಗುತ್ತಾರೆ. ಅವರೆಷ್ಟೇ ಪಂಡಿತರು, ಶಾಸ್ತ್ರಿಗಳು ಆಗಿರಬಹುದು. ಅವರ ಬಗೆಗೆಅವರಿಗೇ ಹೆಮ್ಮೆಯು ಎನಿಸಿರಬಹುದು. ಆದರೆ ಮಾನವನ ಬದುಕಿಗೆ ಸ್ಪಂದಿಸದ ಅವರ ಆ ತರ್ಕ, ಪಾಂಡಿತ್ಯ ಎಲ್ಲವೂ ಸಮಾಜದ ಮುಂದೆ ಶೂನ್ಯ. ಮನುಷ್ಯನ ಅಂತರಂಗವನ್ನು ಹೊಕ್ಕು ಓದಬೇಕು. ಅವರೊಳಗಿನ ಭಾವ ಬಂಧನಗಳನ್ನು ನಾವು ಅರಿಯಬೇಕು. ಇನ್ನೊಬ್ಬರ ನೋವಿಗೆ ಸ್ಪಂದಿಸಬೇಕು ಎಂಬುದೇ ಡಿವಿಜಿರವರ ಆಂಬೋಣ ಶಾಸ್ತ್ರಗಳನ್ನು ಓದಿದ ಮಾತ್ರಕ್ಕೆ ಜ್ಞಾನಿಗಳಾಗುವುದಿಲ್ಲ. ಮತ್ತೊಬ್ಬರ ಮನಸ್ಸಿನೊಡನೆ ಒಡನಾಟವನ್ನು ಹೊಂದಿ ಗೆದ್ದಾಗ ಮಾತ್ರ ನಮಗೆ ಪೂರ್ಣಜ್ಞಾನ ಲಭಿಸುತ್ತವೆ.

ನರಕ ತಪ್ಪಿತು ಧರ್ಮಜಂಗೆ ದಿಟ ಆದೊಡೇಂ?।
ನರಕ ದರ್ಶನ ತಪ್ಪದಾಯಿತಲ?॥

ಬುದ್ಧಿ ಯಾವತ್ತು ನಮ್ಮ ಕೈಯಲ್ಲಿರಬೇಕು. ಯಾವುದೇ ಕೆಲಸವನ್ನು ಮಾಡುವ ಮೊದಲು ಆ ಬಗೆಗೆ ಆಳವಾಗಿ ಆಲೋಚಿಸಬೇಕು. ನಾವು ಎಚ್ಚರಿಕೆಯಿಂದ ಸನ್ಮಾರ್ಗವನ್ನೇ ಹಿಡಿದು ನಡೆದರೂ ಕೆಲವೊಮ್ಮೆ ಇಕ್ಕಟ್ಟಿಗೆ ಸಿಲುಕಿ ಪೇಚಾಡಬೇಕಾದ ಸಂದರ್ಭಗಳು ಆಕಸ್ಮಿಕವಾಗಿ ಒದಗಿಬರುತ್ತವೆ.

ಇತರರ ಸಂಪರ್ಕ, ಸಹವಾಸಗಳಿಂದ ಪ್ರೇರಿತರಾದ ನಾವು ಕೆಲವೊಮ್ಮೆ ದುರಂತ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಇತ್ತೀಚೆಗಂತೂ ತಾಂತ್ರಿಕ ಉಪಕರಣಗಳ ಹಾವಳಿ ಹೆಚ್ಚಾಗಿ ಇಲ್ಲ ಸಲ್ಲದ ಆರೋಪಗಳು ಸಜ್ಜನರ ಮೇಲೂ ವಿಧಿಸಲ್ಪಡುತ್ತವೆ. "ಕೋತಿ ತಾನು ಹಣ್ಣುತಿಂದು ಮೇಕೆ ಬಾಯಿಗೆ ವರೆಸಿದಂತೆ" ಜನ ಸಹ ತಾವು ಮಾಡಿದ ಘೋರ ತಪ್ಪುಗಳನ್ನು ಮುಗ್ಧ ನಾಗರೀಕರ ಮೇಲೆ ಹಾಕಿ ಕಣ್ಮುಚ್ಚಿ ಕುಳಿತು ಬಿಡುತ್ತಾರೆ. ಇಂತಹ ಆಷಾಢಭೂತಿತನದವರನ್ನು ಕುರಿತು "ಚಿರಋಣದ ಲೆಕ್ಕವದು-ಮಂಕುತಿಮ್ಮ" ಎನ್ನುತ್ತ ತಮ್ಮ ಕಾರಣಾಂತರವಾಗಿ ಕುಕೃತ್ಯ ಮಾಡಿಸಿದವರೂ ಸಹ ಶಿಕ್ಷೆಗೆ ಅರ್ಹರು ಎನ್ನುತ್ತಾರೆ. ತಮ್ಮ ಹೊರೆಯನ್ನು ತಾವೇ ಹೊರಬೇಕು ಎನ್ನುತ್ತಾರೆ. ಇತರರಿಗೆ ದ್ರೋಹಮಾಡದೆ ಬದುಕುವಂತೆ ಉಪದೇಶಿಸುತ್ತಾರೆ.

ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ।
ವರಯೋಗಮಾರ್ಗವಿದು-ಮಂಕುತಿಮ್ಮ॥

ವ್ಯಕ್ತಿಯಾದವನು ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ನಡತೆ ಎಂದರೆ ಹೀಗಿರಬೇಕು. "ಉಂಡುಪವಾಸಿ ಬಳಸಿ ಬ್ರಹ್ಮಚಾರಿ" ಎಂದು ಭರತ ಚಕ್ರವರ್ತಿಯ ವಿಚಾರದಲ್ಲಿ ಹೇಳುತ್ತಾರೆ. ಹೌದು ಹೊರಲೋಕದ ವ್ಯವಹಾರಗಳಲ್ಲಿ, ವಿಷಯಾಸಕ್ತಿಗಳಲ್ಲಿ ತೊಡಗಿಯೂ ಇರಬೇಕು. ಆದರೆ ಒಳ ಮನಸ್ಸಿನಲ್ಲಿ ಅದರ ಬಗೆಗೆ ಉದಾಸೀನತೆಯನ್ನು ಹೊಂದಿರಬೇಕು. ಹೊರ ನೋಟಕ್ಕೆ ಭವದ ಸಂಸಾರ, ಸಂಸ್ಕೃತಿಯ ಬಗೆಗೆ ಮಿಡಿಯಬೇಕು. ಆಂತರ್ಯದಲ್ಲಿ ಅದರ ಬಗೆಗೆ ಎಚ್ಚರಿಕೆ ಹೊಂದಿರಬೇಕು. ಚುನಾವಣೆಗೆ ನಿಂತ ಅಭ್ಯರ್ಥಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಕೊಡುವ ಭರವಸೆಗಳೇ ಒಂದಾದರೆ, ಗೆದ್ದ ನಂತರ ಅವರು ಜನರಿಗೆ ನೀಡುವ ಸೇವೆಯ ವೈಖರಿಯೇ ಬೇರೆ. ನಾವು ಹೇಳುವುದು ಒಂದು ಮಾಡುವುದು ಮತ್ತೊಂದಾಗಬಾರದು. ಲೋಕ ಕಲ್ಯಾಣಾರ್ಥವಾಗಿ ಲೌಕಿಕ ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂಬುದಾಗಿ ಹೇಳುವ ಡಿವಿಜಿ ಜ್ಞಾನಿಯಾದವನು ಸನ್ಮಾರ್ಗದಲ್ಲಿ ನಡೆಯಬೇಕೆನ್ನುತ್ತಾರೆ.

ಕ್ಷಣದಿಂದನುಕ್ಷಣಕೆ, ದಿನದಿಂದ ಮರುದಿನಕೆ।
ಅನಿತನಿತರೊಳೆ ಬದುಕತಾಯುವನು ಕಳೆವಾ॥

ಮನುಷ್ಯ ಏನು ಇಂದು ಊಸರವಳ್ಳಿಯಂತೆ ಬಣ್ಣ ಬದಲಿಸುತ್ತಿರುವನೋ ಅಂತಹ ಗುಣವನ್ನು ಡಿವಿಜಿರವರು ಮೂದಲಿಸುತ್ತ ಸಾರ್ಥಕ ಬದುಕಿಗೆ ಸಾಧನೆ ಅಗತ್ಯ ಎನ್ನುತ್ತಾರೆ. ಜನ ಇಂದು ಕೇವಲ ಗಳಿಕೆಯೆಡೆಗೇ ತುಡಿಯುತ್ತಿದ್ದಾರೆ. ಒಂದೆಡೆ ಕಲೆತ ಜನ ಪರಸ್ಪರ ಸ್ವಾರ್ಥದ ಉದ್ದೇಶಕ್ಕಾಗಿ ಸ್ಪಂದಿಸುತ್ತಾರೆ. ತಮ್ಮ ಕೆಲಸ ಮುಗಿದರೆ ಸಾಕು. ಆ ಜನರು ಬೇಡ, ಆ ಜಗತ್ತೂ ಅವರಿಗೆ ಬೇಡವಾಗಿರುತ್ತದೆ. ತಾವೇನೋ ತಮ್ಮ ಪಾಡೇನೋ, ಸಹಾಯ ಮಾಡಿದವರಿಗೆ ಒಂದು ಕೃತಜ್ಞತೆಯನ್ನು ಸಲ್ಲಿಸುವುದಿಲ್ಲ.

ಇಂತಹ ಸಂಪತ್ತಿನ ಗಳಿಕೆಯ ಹುಚ್ಚು ಹತ್ತಿಸಿಕೊಂಡ ಜನರನ್ನು ಎಚ್ಚರಿಸುತ್ತಾ ನಾಯಿಗಿರುವಷ್ಟಾದರೂ ಸಭ್ಯತೆಯನ್ನು ನಿರುಮ್ಮಳತೆಯನ್ನು, ಕೃತಜ್ಞತೆಯನ್ನು ಬೆಳೆಸಿಕೊಳ್ಳಿ ಎನ್ನುತ್ತಾರೆ. ಹೇಗೆ ನಾಯಿ ಒಡೆಯನಿಗೆ ನಿಯತ್ತಿನ ಸೇವೆ ಮಾಡುತ್ತ ಪಾಲಿಗೆ ಸಿಕ್ಕಷ್ಟನ್ನು ತಿಂದು ಜೀವಿಸುವುದೇ ಹಾಗೆ ಸ್ವಾರ್ಥವನ್ನು ತೊರೆದು ಪರಿಸ್ಥಿತಿಗೆ ಹೊಂದಿಕೊಂಡು ಬದುಕಿ ಎನ್ನುತ್ತಾರೆ.

ಅವರೆಷ್ಟು ಧನವಂತರ್, ಇವರೆಷ್ಟು ಬಲವಂತರ್।
ಅವರೆಷ್ಟು ಯಶವಂತರ್ ಎನುವ ಕರುಬಿನಲಿ॥

ಸಮಾಜದಲ್ಲಿ ವ್ಯಕ್ತಿ ಮತ್ತೊಬ್ಬನ ಏಳಿಗೆಯನ್ನು ಕಂಡು ಅಸೂಯೆಯಿಂದ ಕರುಬುತ್ತಿದ್ದಾನೆ. ತನಗಿಂತ ಮತ್ತೊಬ್ಬ ಎಲ್ಲಿ ಭಿನ್ನನಾಗುತ್ತಾನೋ, ಉತ್ತಮ ಹಂತವನ್ನು ತಲುಪುತ್ತಾನೆಯೋ ಎಂಬ ಭಯ, ತವಕ ಅವನನ್ನು ಆವರಿಸಿದೆ. ಪಕ್ಕದ ವ್ಯಕ್ತಿ ಬಿ.ಎಂ.

ಡಬ್ಲ್ಯೂ ಕಾರನ್ನು ಖರೀದಿಸಿದನೆಂದರೆ ತಾನೂ ಕಾರನ್ನು ಖರೀದಿಸಬೇಕು. ಆತನಿಗೂ ಮುಂದಾಗಿ ಯೋಗ್ಯ ಬಂಗಲೆ ಖರೀದಿಸಬೇಕು. ಆಗ ಮಾತ್ರ ತಾನು ಆತನಿಗೆ ಸರಿಸಾಟಿ ಎನ್ನುವ ಪೇಚಿಗೆ ಬಿದ್ದು ಅಕ್ರಮ ಕೆಲಸಗಳಲ್ಲಾದರೂ ತೊಡಗಿಕೊಳ್ಳುತ್ತಾನೆ.

ಇವರ ಆಸೆಗಳಿಗೆ ಕೊನೆಯೇ ಇಲ್ಲ. ತಮ್ಮ ತಟ್ಟೆಯಲ್ಲಿರುವ ಆಹಾರವನ್ನು ತಿನ್ನದೆ ಪರರ ತಟ್ಟೆಯಲ್ಲಿ ಬಿದ್ದಿರುವ ನೊಣ ತೆಗೆಯುವಂತೆ ನಿರ್ದೇಶನ ಮಾಡುತ್ತ ತಮ್ಮ ಆಹಾರವನ್ನು ಸ್ವಾದ ರಹಿತಗೊಳಿಸಿಕೊಳ್ಳುತ್ತಿದ್ದಾರೆ. ಐಷಾರಾಮಿ ಬದುಕಿಗೆ ಹಾತೊರೆದು ನೈತಿಕತೆಯನ್ನು ತೊರೆದು ತಮ್ಮ ಬದುಕನ್ನು ತಾವೇ ಹಾಳುಮಾಡಿಕೊಳ್ಳುತ್ತಿದ್ದಾರೆ. ಇವೆಲ್ಲ ನಿಯಮಬಾಹಿರ ಎನ್ನುವ ಡಿವಿಜಿ 'ಶಿವನಿಗೆ ಕೃತಜ್ಞತೆಯೇ?' ಮಂಕುತಿಮ್ಮ ಎಂದು ಪ್ರಶ್ನಿಸುತ್ತಿದ್ದಾರೆ. ನಾವು ಇತರರ ಅಭಿವೃದ್ಧಿಯನ್ನು ಕಂಡು ತಣಿದರೆ, ಅವರ ಅಭಿವೃದ್ಧಿಗಾಗಿ ಶ್ರಮಿಸಿದರೆ ಶಿವನೊಲವು (ಸಮಾಜದ ಪ್ರೀತಿ) ನಮಗೆ ಲಭಿಸುತ್ತದೆ ಎನ್ನುತ್ತಾರೆ.

ತಂಗಳುಣಿಸಾದೊಡಂ ಸಾಕೆನುವನುಪವಾಸಿ।
ಸಿಂಗಾರ ಸಂಗಾತಿ ಬೇಕುಂಡವನಿಗೆ॥
ಬಂಗಾರ ಪದವಿ ಪತ್ರಿಷ್ಠೆ ಬೇಕಾಬಳಿಕ।
ಹಿಂಗದಾಯೆದೆ ಚಿಲುಮೆ–ಮಂಕುತಿಮ್ಮ॥

ಮನುಷ್ಯನ ಬಯಕೆಗಳು ಅಪರಿಮಿತ ಒಂದನ್ನು ಈಡೇರಿಸಿದರೆ ಮತ್ತೊಂದು ಉದ್ಭವಿಸುತ್ತದೆ. ರಕ್ತ ಬೀಜಾಸುರರಂತೆ ಬಯಕೆಗಳು ಹಿಂಗದೆ ಮತ್ತೆ ಉಲ್ಬಣಿಸುತ್ತವೆ. ಅಂಬಿಗರ ಚೌಡಯ್ಯ ಹೇಳುವಂತೆ

"ಬಡತನಕೆ ಉಂಬುವ ಚಿಂತೆ; ಉಂಡರೆ ಉಡುವ ಚಿಂತೆ
ಉಟ್ಟರೆ ಇಡುವ ಚಿಂತೆ ; ಇಟ್ಟರೆ ಮಡದಿಯ ಚಿಂತೆ......"

ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಮನುಷ್ಯ ತನ್ನ ಜೀವನದ ಅವಸ್ಥೆಗಳನ್ನು ಮುಗಿಸಿದರೂ ಆತನಿಗೆ ಬಯಕೆಗಳು ಮಾತ್ರ ಹಿಂಗುವುದಿಲ್ಲ. ತಿನ್ನುವ ಸಾಮರ್ಥ್ಯವಿಲ್ಲದಿದ್ದರೂ ಸಂಪತ್ತನ್ನು ಗಳಿಸಿಡುವ ದುರಾಸೆ ಮಾತ್ರ ಅತಿಯಾಗಿರುತ್ತದೆ. ಆದ್ದರಿಂದಲೇ ಡಿವಿಜಿ 'ಹಿಂಗದಾಯೆದೆ ಚಿಲುಮೆ–ಮಂಕುತಿಮ್ಮ' ಎನ್ನುತ್ತಾರೆ. ಬಯಕೆಗಳ ಮೇಲೆ ಹಿಡಿತವಿರಲಿ ಎಂದು ಬೋಧಿಸುತ್ತಾರೆ.

ಹೈಮವತಿ ಶಿವೆ ತಾನೆ ಕಾಳಿ ಚಂಡಿಕೆಯಂತೆ
ಪ್ರೇಮ ಘೋರಗಳೊಂದೆ – ಮಂಕುತಿಮ್ಮ॥

ನಾವು ಎಷ್ಟೇ ಪ್ರಯತ್ನಪಟ್ಟರೂ ನಮಗೆ ಒಳಿತೊಂದೇ ಪ್ರತ್ಯೇಕವಾಗಿ ಸಿಗದು, ಅಂತೆಯೇ ಕೆಡುಕುಗಳೂ ಸಹ ಪ್ರತ್ಯೇಕವಾಗಿ ಇರುವುದಿಲ್ಲ. ಇವೆರಡೂ ಸಹ ನಮ್ಮ ನೀತಿ–

ನಡಾವಳಿಗಳಿಗೆ ಪ್ರತಿಯಾಗಿ ದೊರೆಯುವಂತಹ ಫಲಗಳು. ಇವೆರಡೂ ಸಹ ಪ್ರಕೃತಿ ಸಹಜವಾಗಿಯೇ ಮನುಷ್ಯನಲ್ಲಿ ಮನೆಮಾಡಿರುತ್ತವೆ. ಹೇಗೆ ಮುಳ್ಳಾದರೂ ಹಲಸಿನ ಹಣ್ಣನ್ನು ಬಿಡಿಸಿದಾಗ ಒಳಗೆ ಸವಿಯಾದ ಹಣ್ಣು ಸಿಗುವುದೋ ಹಾಗೆ ಕ್ರೂರತನವುಳ್ಳ ವ್ಯಕ್ತಿಗಳಲ್ಲೂ ಸೌಮ್ಯ ಗುಣಗಳನ್ನು ಕಾಣಬಹುದು. ಇಂದಿನ ಪರಿಸ್ಥಿತಿಗೆ ಇಂತಹ ದ್ವಂದ್ವಗುಣಗಳ ವ್ಯಕ್ತಿತ್ವವೂ ಇರಬೇಕು. ವ್ಯಕ್ತಿಯು ತನ್ನ ಸೌಮ್ಯತೆಯ ಜೊತೆಗೆ ಕಠಿಣತೆಯನು ಮೈಗೂಡಿಸಿಕೊಂಡಾಗ ಆತನಿಗೆ ಉತ್ತಮವಾದ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಬಗ್ಗುತ್ತಾ ಹೋದಂತೆ ಬಗ್ಗಿಸುತ್ತಲೇ ಹೋಗುವ ಜನ ಇರುವಾಗ ಎದೆಗೊಟ್ಟು ನಡೆವ ಮನಸ್ಸು ನಮ್ಮದಾಗಬೇಕು. ಹೇಗೆ ಶಾಂತಿಗೆ ಹೆಸರಾದ ಶಿವೆಯಲ್ಲಿ ವಿಧ್ವಂಸಕ ಗುಣಗಳೂ ಉಂಟೋ ಹಾಗೆ ಒಳಿತಿನೊಟ್ಟಿಗೆ ಕೆಡಕೂ ಸಹ ಇರಬೇಕು ಎಂಬುದೇ ಡಿವಿಜಿ ಮಾತು.

ನೀರನೆರೆ ತನ್ನೆದುರಿನಣೆಕಟ್ಟ ನೊದೆಯುವುದು।
ಊರನದು ಕೊಚ್ಚುವುದು ಬದಿಯ ಕಟ್ಟದಿರೆ॥

ತಳಪಾಯವಿಲ್ಲದೆ ಕಟ್ಟಡಕಟ್ಟಲಾಗದು. ಹಾಕಿದ ತಳಪಾಯ ಭದ್ರವಾಗಿಲ್ಲದಿದ್ದಾಗಲೂ ಕಟ್ಟಡವನ್ನು ಭದ್ರವಾಗಿರಿಸಲಾಗದು. ಯಾವುದೇ ಕೆಲಸವಾದರೂ ನಮಗೆ ಅದರಲ್ಲಿ ಏಕಾಗ್ರತೆ ಮುಖ್ಯ.

"ಕೆರೆ ಕಿತ್ತರೆ ಬಯಲು ಮೇಲೆ ಹರಿದೀತು" ಎನ್ನುತ್ತಾರೆ. ಮಳೆಯ ರಭಸವನ್ನು ತಡೆಯಲಾರದ ತುಂಬಿದ ಕೆರೆಯ ಕಟ್ಟೆ ಹರಿದರೆ ಅದರಿಂದ ವಿನಾಶವೇ ಸಂಭವಿಸುತ್ತದೆ. ಹಾಗೆಯೆ ನೀತಿ–ನಿಯಮಗಳನ್ನು, ಸಮಾಜದ ಕಟ್ಟುಪಾಡುಗಳನ್ನು ಮೀರಿದ ಮನುಷ್ಯನೂ ಸಹ ಮಾನವ ಕುಲಕ್ಕೆ ಮಾರಕನು. ಸಂಸ್ಕಾರವಿಲ್ಲದ ಇಂದಿನ ಯುವ ಪೀಳಿಗೆ ತಾವಾಗಿಯೇ ದುರಂತವನ್ನು ಆಹ್ವಾನಿಸುತ್ತಿದ್ದಾರೆ. ಅನೈತಿಕ ಕೆಲಸಗಳಲ್ಲಿ ತೊಡಗಿ ಭವ್ಯ ಭವಿಷ್ಯಕ್ಕೆ ಕೊಡಲಿ ಪೆಟ್ಟು ಇಡುತ್ತಿದ್ದಾರೆ. ತಮ್ಮ ಸಾಮರ್ಥ್ಯದ ಮೇಲೆ ಅಭಿಮಾನಕ್ಕಿಂತ ದುರಭಿಮಾನವೇ ಹೆಚ್ಚು. ಆ ನಿಟ್ಟಿನಲ್ಲಿ ಅನಾಹುತಗಳಿಗೇ ಬಲಿಯಾಗುತ್ತಿದ್ದಾರೆ. ಹಾಗಾಗಿ ಹಿತಿಮಿತಿಯರಿತು ಬಾಳುವುದೇ ಉತ್ತಮ.

ನೀರು ತುಂಬಿದ ಕೆರೆಯ ಕಟ್ಟೆ ಭದ್ರವಾಗಿಲ್ಲವಾದರೆ ಹೇಗೆ ಆ ಕಟ್ಟೆಯು ಅದರೊಳಗಿನ ಅಲೆಗಳ ರಭಸಕ್ಕೆ ಮುರಿದು ನೀರು ಸೋರಿ ಜೊತೆಗೆ ಪಕ್ಕದ ಆಸ್ತಿ ಪಾಸ್ತಿಯನ್ನು ಹಾಳು ಮಾಡುತ್ತದೆಯೋ ಹಾಗೆ ಹುಟ್ಟಿದ ಮಗುವಿಗೆ ಉತ್ತಮ ಸಂಸ್ಕಾರ ಕೊಡದೆ ಬೆಳೆಸಿದರೆ ಆತ ಸಮಾಜಘಾತುಕನಾಗುತ್ತಾನೆ. ಐಶಾರಾಮಿ ಬದುಕಿಗೆ ಹೊಂದಿಕೊಂಡು, ಅನುಕರಣೆಯ ಬದುಕನ್ನು ಮೈಗೂಡಿಸಿಕೊಂಡಿರುವ ಎಷ್ಟೋ ಮಂದಿ ತಂದೆ ತಾಯಿಯರು ತಮ್ಮ ಮಕ್ಕಳನ್ನು ಗಮನಿಸಿದೆ ಕೇಳಿದಷ್ಟು ಹಣಕೊಟ್ಟು ದುರಂತಕ್ಕೆ ತಳ್ಳುತ್ತಿರುವುದನ್ನು ಕಾಣುತ್ತೇವೆ.

ಮರುಕ ತುಂಬಿದ ಕಣ್ಣನೋಟದೊಳಗಿದ್ದೀತು।

ಬಿರುನುಡಿಯೊಳಿರದೊಂದು ಕೂರಲಗು ಸಖನೆ।

ನೂರು ಮಾತುಗಳಿಗಿಂತ ಭಾವನಾತ್ಮಕವಾದ ಒಂದು ನೋಟ ಮೇಲು ಎನ್ನುತ್ತಾರೆ. ನಾವಾಡುವ ಬಿರುನುಡಿಗಳು ಬೇರೆಯವರನ್ನು ಘಾಸಿಗೊಳಿಸಿ ಆತಂಕದ ಪರಿಸ್ಥಿತಿ ನಿರ್ವಾಣವಾಗಿಸಬಹುದು. ಆದರೆ, ಅದೇ ಭಾವನೆಗಳನ್ನು ನಾವು ಕಣ್ಣಿನಲ್ಲೇ ಅಭಿವ್ಯಕ್ತಿಗೊಳಿಸಿದರೆ ಅದರ ಪರಿಣಾಮವೇ ಬೇರೆಯಾಗಿರುತ್ತದೆ. ನಾವಾಡುವ ಮಾತಿಗಿಂತ ದೈನ್ಯತೆ ಬೆರೆಸಿದ ಕಣ್ಣಿನ ನೋಟ ಇತರರನ್ನು ನಮ್ಮಡೆಗೆ ಕರಗಿಸುತ್ತದೆ. ಎಷ್ಟೇ ದೊಡ್ಡ ವ್ಯಕ್ತಿಗಳಾದರೂ ಕೆಲವೊಮ್ಮೆ ಭಾವನಾತ್ಮಕವಾದ ಸಂಬಂಧ ಭಾವನಾತ್ಮಕ ಸನ್ನಿವೇಶಗಳಿಗೆ ಮಣಿದೇ ತೀರುತ್ತಾರೆ. ಡಿವಿಜಿರವರ ಈ ಮುಕ್ತಕ ಅನಿವಾರ್ಯ ಸಂಸ್ಕಾರವನ್ನು ಕಲಿಸುತ್ತದೆ.

ಸಮಾಜ ಘಾತುಕ ಚಟುವಟಿಕೆಯಲ್ಲಿ ತೊಡಗಿ ಸಿಕ್ಕಿದವನನ್ನು ಪೋಲಿಸರು ಹಿಡಿದು ಶಿಕ್ಷಿಸುತ್ತಾರೆ. ನಂತರ ಆತನ ಸೆರೆಮನೆವಾಸ ಅದು ಮುಗಿದ ನಂತರ ಮತ್ತೆ ಆತ ಅದೇ ಚಾಳಿಯನ್ನು ಮುಂದುವರೆಸುತ್ತಾನೆ. ಅಂತಹ ವ್ಯಕ್ತಿಯನ್ನು ಕುರಿತು ಆತನಿಗೆ ತಪ್ಪಿನ ಅರಿವಾಗುವಂತೆ ನಿರ್ದೇಶಿಸಿ ಭಾವನಾತ್ಮಕವಾಗಿ ಉಪದೇಶಿಸಿದರೆ ಆತ ಸುಧಾರಣೆ ಹೊಂದಿ ಸಮಾಜದ ಅಭಿವೃದ್ಧಿಗೆ ಪೂರಕನಾಗುತ್ತಾನೆ. ತಂದೆ-ತಾಯಿಯರೂ ಹಾಗೆ ತಮ್ಮ ಮಕ್ಕಳನ್ನು ಒತ್ತಡದ ಪರಿಸ್ಥಿತಿಯಲ್ಲಿ ಸಿಕ್ಕಿಸಿ, ಆತನನ್ನು ಹೊಡೆದು ಬೈದು ದಾರಿಗೆ ತರಲು ವಿಫಲರಾಗಿ ಕೊರಗುವ ಬದಲು ಅವರನ್ನು ಪ್ರೀತಿಯಿಂದ ಉಪಚರಿಸಿ ಭಾವನಾತ್ಮಕವಾಗಿ ಉಪದೇಶಿಸಿದರೆ ಖಂಡಿತ ಅವರು ಯಶಸ್ವಿಯಾಗುತ್ತಾರೆ. ಡಿ.ವಿ.ಜಿ. ಕರುಣೆಯಿಂ ಕರಗೀತೋ – ಮಂಕುತಿಮ್ಮ ಎನ್ನುತ್ತ ಜನರಲ್ಲಿ ಸುಧಾರಣೆಯನ್ನು ಬಯಸುತ್ತಾರೆ. ಅಂತಹ ಅಂಗುಲಿ ಮಾಲನಂತಹ ಕ್ರೂರಿಯೇ ಮಾತಿಗೆ ಬದಲಾಗಿ ಹೋದ ಎಂಬುದಿಲ್ಲಿ ಮನನೀಯ.

ರಾವಣನ ದಶಶಿರವದೇಂ? ನರನು ಶತಶಿರನು॥
ಸಾವಿರಾಸ್ಯಗಳನೊಂದರೊಳಣಗಿಸಿಹನು॥

ಮನುಷ್ಯ ದೇವದಾನವರನ್ನು ಮೀರಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದಾನೆ. ಎಲ್ಲವನ್ನೂ ಗಳಿಸಬೇಕೆಂಬ ಆತುರದಲ್ಲಿ ಸಮಯಸಾಧಕನಾಗುತ್ತಿದ್ದಾನೆ. ಡಿವಿಜಿ ಹೇಳುವ ರಾವಣನ ದಶ ಶಿರಗಳು ಆತನ ಭೌತಿಕ ಪ್ರಕೃತಿಗೆ ಸಂಬಂಧಿಸಿದುವು. ಅದೇ ಅವರು ಹೇಳುವ ನರನು ಹೊಂದಿರುವ ಸಾವಿರ ಮುಖಗಳು ಆತನ ಮಾನಸಿಕ ವ್ಯಾಪಾರಕ್ಕೆ ಸಂಬಂಧಿಸಿದುವು. ಸ್ವಾರ್ಥಕ್ಕಾಗಿ ಕ್ಷಣಕ್ಕೊಂದು ಮಾತಾಡುವ, ಚುನಾವಣೆಗೊಂದು ಪಕ್ಷ ಬದಲಿಸುವ ಇಂದಿನ ನಮ್ಮ ರಾಜಕಾರಣಿಗಳನ್ನು ಡಿವಿಜಿರವರು ಇಲ್ಲಿ ಬೊಟ್ಟು ಮಾಡಿ ತೋರಿಸಿದಂತಿದೆ. ಜೀವನ ಪರ್ಯಂತ ಸಮಾನ ಮನಸ್ಕರಾಗಿ ಒಂದಾಗಿರುತ್ತೇವೆಂದು ಪ್ರಮಾಣ ಮಾಡುತ್ತ ಸಪ್ತಪದಿ ತುಳಿದು, ವಿವಾಹಿತರಾಗುವ ಎಷ್ಟೋ ಮಂದಿ ದಂಪತಿಗಳು ಇಂದು ದಾಂಪತ್ಯದ ಮಹತ್ವವನ್ನೇ ಅರಿಯದೆ ಅಮೂಲ್ಯ ದಾಂಪತ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ.

ವರದಕ್ಷಿಣೆಗಾಗಿ ಎಷ್ಟೋ ಹೆಣ್ಣು ಮಕ್ಕಳನ್ನು ಕೊಲ್ಲುತ್ತಾರೆ. ಎಷ್ಟೋ ಹೆಣ್ಣು ಮಕ್ಕಳು ಹಣದ ಆಮಿಷಕ್ಕೋ ಅಥವಾ ಪ್ರೀತಿ-ಪ್ರೇಮದ ಬಲೆಗೆ ಬಿದ್ದೋ ಪತಿಯನ್ನೇ ಕೊಲ್ಲಿಸುವ ವಿಕಾರ ಮನಸ್ಥಿತಿಯನ್ನು ತಾಳುವುದನ್ನು ಕಾಣುತ್ತೇವೆ. ತಾಯಿಯೇ ಮಕ್ಕಳನ್ನು, ಮಕ್ಕಳೆ ತಂದೆ-ತಾಯಿಯರನ್ನು ಕೊಂದು, ತಂದೆಯೇ ಮಗಳ ಮೇಲೆ ಅತ್ಯಾಚಾರವೆಸಗಿ ವಿಕಟ ಹಾಸ್ಯ ಬೀರುವುದನ್ನು ನಿತ್ಯ ನಾವು ಪತ್ರಿಕೆ, ಮಾಧ್ಯಮಗಳಲ್ಲಿ ಕಾಣುತ್ತೇವೆ. ಅದಕ್ಕೇ ಡಿವಿಜಿರವರು ಮನುಷ್ಯನ ಜೀವನ ವಿಸ್ಮಯಕರವಾದದ್ದೆನ್ನುತ್ತಾರೆ. ಮೊದಲು ಮನುಷ್ಯನ ಆಂತರ್ಯವನ್ನು ಅರಿಯಬೇಕು. ಅದಕ್ಕಿಂತ ಮಿಗಿಲಾದ ಜ್ಞಾನ ಮತ್ತೊಂದಿಲ್ಲ.

ಬೆರಳುಗಳ ನೋಡವುಗಳೊಂದರಂತೊಂದಿಲ್ಲ।
ಕರಧರ್ಮಕುಚಿತವಾ ಹೆಚ್ಚು ಕಡಮೆಗಳು॥

ಸೃಷ್ಟಿಯ ನಿಯಮವೇ ವಿಸ್ಮಯಕರವಾದದ್ದು. ಎಲ್ಲವೂ ಒಂದೇ ತೆರನಾದುದಾಗಿಲ್ಲ. ಭಗವಂತನ ಆ ಅಸಮತೊಲಿತ ಸೃಷ್ಟಿಯೇ ಪ್ರಕೃತಿಯನ್ನು ಸಮತೋಲನವಾಗಿ ಕಾಯ್ದುಕೊಂಡು ಹೋಗುತ್ತಿದೆ. ಮನುಷ್ಯನ ಬದುಕೂ ಅಷ್ಟೇ. ಬದುಕಿನಲ್ಲಿ ಏರುಪೇರುಗಳಿದ್ದರೆ ಮಾತ್ರ ಸಮತೋಲನ ಹೊಂದಾಣಿಕೆ, ಸ್ವಾವಲಂಬನೆ ಸಾಧ್ಯ ಯಾರೂ, ಯಾವುದೂ ಪ್ರಕೃತಿಯಲ್ಲಿ ತನಗೆ ತಾನೇ ಪೂರಕವಾಗಿಲ್ಲ. ಒಂದು ಇನ್ನೊಂದರ ಮೇಲೆ ಅವಲಂಬಿತ.

ಒಂದು ವಿಚಾರಕ್ಕೆ ಬೆಲೆ ಬರಬೇಕೆಂದರೆ ಮತ್ತೊಂದರ ಬೆಲೆ ಕ್ಷಯಿಸಲೇ ಬೇಕು. ಪ್ರಕೃತಿಯಾಗಲಿ ಅಥವಾ ಮನುಷ್ಯರಾಗಲಿ ಭಿನ್ನತೆ ಇದ್ದಾಗಲೆ ಅದಕ್ಕೆ ಬೆಲೆ, ಪೂರ್ಣತೆ ಸಾಧ್ಯ. ಹೇಗೆ ನಮ್ಮ ಕೈ ಬೆರಳುಗಳು ಏರು-ಪೇರು ಅಂತರದ ನಡುವೆ ಪೂರಕವಾಗಿವೆಯೋ ಹಾಗೆ ನಾವೂ ಸಹ ಬದುಕಿನ ಪೂರ್ಣತೆಗೆ ಹಾತೊರೆಯಬೇಕು.

ಸಂಸಾರದಲ್ಲೇ ಆಗಲಿ ಪೂರ್ಣತೆ, ಸ್ವಾವಲಂಬಿತನ ಬೆಳೆಯಬೇಕಾದರೆ ಅಲ್ಲಿ ವಿವಿಧತೆ ಇರಬೇಕು. ಆಗ ಮಾತ್ರ ಏಕತೆ ಬೆಳೆಯಲು ಸಾಧ್ಯ. ಒಬ್ಬೊಬ್ಬರೂ ಒಂದೊಂದು ವೃತ್ತಿಯಲ್ಲಿ ತೊಡಗಿಕೊಂಡಾಗ ಇಡೀ ಸಂಸಾರಕ್ಕೆ ಹೊರಗಿನವರ ಗೋಜಲು ಇರುವುದಿಲ್ಲ. ಅಲ್ಲಿ ಇನ್ನೂ ಮುಖ್ಯವಾಗಿ ಹೊಂದಾಣಿಕೆ ಎಂಬುದು ಅಗತ್ಯ. ದೇಶದ ಅಭಿವೃದ್ಧಿಗೆ ಹೇಗೆ ವಿವಿಧ ವೃತ್ತಿಯುಲ್ಲಿರುವ ಶಿಕ್ಷಕ, ವೈದ್ಯ, ರೈತ, ವಿಜ್ಞಾನಿ ಮೊದಲಾದವರು ಹೆಗಲೆಣೆಯಾಗಿದ್ದಾರೋ ಹಾಗೆ.

ಕಾರಿರುಳೊಳಾಗಸದಿ ತಾರೆ ನೂರಿದ್ದೇನು?।
ದಾರಿಗನ ಕಣ್ಗೆ ಬೇಕೊಂದು ಮನೆಬೆಳಕು॥

ಮಾನವ ಸಂಘಜೀವಿ ಎಂಬುದು ತಿಳಿದಿರುವ ವಿಚಾರ. ಆತ ಎಷ್ಟೇ ಐಶ್ವರವಂತನಾದರೂ ಅವನಿಗೆ ಮತ್ತೊಂದು ಜೀವದ ಆಸರೆ ಬೇಕೇ ಬೇಕು. ಯಾವ ಜೀವಿಯೂ ತನಗೆ ತಾನೇ ಪೂರಕವಲ್ಲ. ಸಂಕಟದಲ್ಲಿ ಸಿಕ್ಕಿದ ಜೀವಕ್ಕೆ ಸಂತೈಸುವ ಮತ್ತೊಂದು

ಜೀವದ ಅಗತ್ಯತೆಯನ್ನು ಈ ಮುಕ್ತಕದಲ್ಲಿ ಡಿವಿಜಿ ವಿವರಿಸುತ್ತಾರೆ.

ಆಕಾಶದಲ್ಲಿ ನಕ್ಷತ್ರಗಳು ಮಿಂಚುತ್ತಿದ್ದರೂ ಕರಾಳ ರಾತ್ರಿಯಲ್ಲಿ ಆತನಿಗೆ ದಾರಿ ಬೆಳಕಾಗಿ ಒಂದು ದೀಪದ ಬೆಳಕು ಹೇಗೆ ಅನಿವಾರ್ಯವೋ ಅಷ್ಟೇ ಪ್ರಮುಖವಾದದ್ದು ಮನುಷ್ಯನಿಗೆ ಸಂಗಾತಿಯ ಅಗತ್ಯತೆ. ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲೇ ಸಂಬಂಧಿಗಳ ಬೆಲೆ ತಿಳಿಯುವುದು. ಉದಾಃ ಭಾಷೆ ತಿಳಿಯದ ಜಾಗಕ್ಕೆ ಹೋದವನಿಗೆ ತಾನು ಇಕ್ಕಟ್ಟಿನಲ್ಲಿ ಸಿಕ್ಕ ಸಂದರ್ಭದಲ್ಲಿ ತನ್ನದೇ ಭಾಷೆಯ ವ್ಯಕ್ತಿಯನ್ನು ಕಂಡಾಗ ಆಗುವ ಖುಷಿ ಮತ್ತೊಂದಿಲ್ಲ. ನಾಗರೀಕನಾದ ಮನುಷ್ಯ ಮಾನವ ಪ್ರೀತಿಗಾಗಿ ಸ್ನೇಹಕ್ಕಾಗಿ ಸದಾ ಕೈಚಾಚುತ್ತಾನೆ.

ನೀತಿ ಪ್ರತಿಪಾದನೆ

ವಿಚಾರಶೀಲ ಮನುಷ್ಯ ತನ್ನ ಅನುಭವಗಳ ಮೂಲಕ ಪಾರಮಾರ್ಥಿಕ ವಿಚಾರಗಳನ್ನು ಅರಿಯಬಲ್ಲ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಅನೈತಿಕ, ಅವ್ಯೆಚಾರಿಕ ಕ್ರಿಯೆಗಳನ್ನು ನಿವಾರಿಸುವಲ್ಲಿ ಸಮಾಜ ಸುಧಾರಕರು, ಮಹಾನ್ ವ್ಯಕ್ತಿಗಳೂ ಎನಿಸಿರುವ ಬುದ್ಧ, ಗಾಂಧೀಜಿ, ಬಸವಣ್ಣ, ಸರ್ವಜ್ಞ, ದಾಸರು, ವೇಮನ, ತಿರುವಳ್ಳುವರ್‌ರಂತಹ ಬುದ್ಧಿಜೀವಿಗಳ ಆದರ್ಶದ ನುಡಿಗಳು ಅನಿವಾರ್ಯ. ಮಂಕುತಿಮ್ಮನ ಕಗ್ಗ ಕೃತಿ ನೈತಿಕ ಮೌಲ್ಯಗಳನ್ನು ಸಾರುತ್ತ ಸಮಾಜದ ಜನರಲ್ಲಿ ಅರಿವನ್ನು ಮೂಡಿಸುವಲ್ಲಿ ಯಶಸ್ಸನ್ನು ಕಂಡಿದೆ.

ನಿನ್ನ ಹೆಣವನು ನೀನೆ ಹೊತ್ತು ಸಾಗಿಸಬೇಕೋ।
ಅಣ್ಣ ಬಾ ತಮ್ಮ ಬಾ ಎಂದಳುವುದೇಕೋ।

ಆತ್ಮವು ರೂಪ, ರಾಗ, ದ್ವೇಷರಹಿತವಾದದ್ದು. ದೇಹವಾಂತ ಮೇಲೆಯೇ ಅದಕ್ಕೆ ನಿರ್ದಿಷ್ಟ ನಾಮ ನಿರ್ದೇಶನ ಮಾಡುವುದು. ಆ ಆತ್ಮ ತನ್ನದೇ ಆದ ಬಯಕೆಗಳ ಈಡೇರಿಕೆಗಾಗಿ ಕೃತ್ಯಗಳಲ್ಲಿ ತೊಡಗುವುದು ನಂತರವೇ. ಡಿ.ವಿ.ಜಿ. ಬಿತ್ತಿದಂತೆ ಬೆಳೆ ಎನ್ನುತ್ತಾರೆ. ನಮ್ಮ ಕರ್ಮಗಳಿಗೆ ಅನುಸಾರವಾದ ಫಲ ನಮಗೆ ದೊರೆಯುತ್ತದೆ. ಸನ್ಮಾರ್ಗದಲ್ಲಿ ನಡೆದವನಿಗೆ ಸನ್ಮಾನ್ಯತೆ ಸಿಕ್ಕುತ್ತದೆ. ದುರ್ಮಾರ್ಗದಲ್ಲಿ ನಡೆದವನಿಗೆ ಸಮಾಜ ನಿಂದನೆಯೇ ಕೊರಳ ಹಾರವಾಗಿ ಸುತ್ತಿಕೊಳ್ಳುತ್ತದೆ. ಅದಕ್ಕೇ ಡಿವಿಜಿ ನಿನ್ನ ಪಾಲಿನ ಕರ್ಮ ಅದು ಉತ್ತಮವಾಗಿರಲಿ. ನಿನಗೆ ಕಡೆಗೆ ಸಂಸ್ಕಾರ ಲಭಿಸುವುದು ಸೌದೆಯುರಿಯಲ್ಲೋ ಮಣ್ಣಿನಿಂದಲೋ ಎಂದು ಉಪದೇಶಿಸುತ್ತಾರೆ. ಸ್ವಾವಲಂಬನೆಯನ್ನು ಬೋಧಿಸುವ ಡಿ.ವಿ.ಜಿ. ಉತ್ತಮ ದೃಷ್ಟಾಂತವನ್ನು ನೀಡಿದ್ದಾರೆ.

"ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ।
ಹೊರಡು ಕರೆಬರಲಳದೆ" – ಮಂಕುತಿಮ್ಮ॥

ಫಲಾಪೇಕ್ಷೆ ಇಲ್ಲದ ಕರ್ಮವನ್ನು ಮಾಡುತ್ತ, ಅದರಲ್ಲೇ ದೇವರನ್ನು ಕಾಣಬೇಕು.

ನಮಗೆ ದಕ್ಕಿದುದರಲ್ಲಿ ಸಾರ್ಥಕತೆಯನ್ನು ಕಾಣಬೇಕು. ಬದುಕಿರುವ ಕಡೆ ಕ್ಷಣದವರೆಗೂ ನಾವು ಕ್ರಿಯಾಶೀಲರಾಗಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು. ದೇವರಲ್ಲಿ ನಂಬಿಕೆ ಇಟ್ಟು ಆರಾಧಿಸಿದರೆ ಶ್ರಮಕ್ಕೆ, ಭಕ್ತಿಗೆ ತಕ್ಕ ಫಲ ಭಗವಂತನಿಂದ ಖಂಡಿತ ಸಿಗುತ್ತದೆ. ಇಂದು ಕಷ್ಟವೆಂದು ಬೇರೆ ದಾರಿಕಾಣದೆಂದು ಕೈಚೆಲ್ಲಿ ಕುಳಿತರೆ ಖಂಡಿತ ನಾಳಿನ ಬದುಕು ದುಸ್ತರವಾಗುತ್ತದೆ. ಯಾರೂ ಹುಟ್ಟುತ್ತಲೇ ಮಹಾನ್ ವ್ಯಕ್ತಿಗಳಲ್ಲ, ಸನ್ನಡತೆಗಳನ್ನು ಮೈಗೂಡಿಸಿಕೊಂಡು ಆ ಮೂಲಕ ಮಹನ್ ವ್ಯಕ್ತಿಗಳಾಗಬೇಕು.

ತಲೆಕೊಡವ ತಳೆದಿರಲು ಕೈಕತ್ತಿ ಪಿಡಿದಿರಲು।
ಬಳುಕು ಹಗ್ಗದ ಮೇಲೆ ತಾನಡಿಯನಿಡುತ॥

"ಡಿವಿ.ಜಿ.ರವರು ಜೀವನವನ್ನು ದೊಂಬರವನ ಆಟದೊಂದಿಗೆ ಸಮೀಕರಿಸಿದ್ದಾರೆ. ತನ್ನ ಮತ್ತು ತನ್ನ ಕುಟುಂಬದವರ ಜವಾಬ್ದಾರಿಯನ್ನು ತಲೆಯಲ್ಲಿ ಹೊತ್ತ ಮನುಷ್ಯ ಹೀಗೆ ಅನಿಶ್ಚಿತವಾದ ಬಳುಕು ಹಗ್ಗದಂತಹ ಜೀವನದ ದಾರಿಯಲ್ಲಿ ಸಾಗಬೇಕಾಗುತ್ತದೆ. ಹಾಗೆ ಸಾಗುವಾಗ ಪ್ರಪಾತಕ್ಕೆ ಬೀಳದೆ, ಗಂಡಾಂತರಕ್ಕೆ ಸಿಲುಕದೆ, ನೈತಿಕತೆಯಿಂದ ದೂರವಾಗದೆ ಸಾಗಬೇಕಾಗಿದೆ. ನಿಜಕ್ಕೂ ಇದೊಂದು ಅನುಪಮವಾದ ಕಲೆ, ಇದೇ ಜೀವನದ ಕಲೆ ಎಂದು ಸಾರಿದ್ದಾರೆ."

ಪ್ರತಿಯೊಬ್ಬನ ಜೀವನವೂ ದೊಂಬರ ಆಟದಂತೆ. ಅದನ್ನು ನಿರ್ವಹಿಸಲು ಕೌಶಲಪೂರ್ಣವಾದ ಕಲೆ, ಅಗತ್ಯ ಎಂದು ಡಿವಿಜಿ ಇಲ್ಲಿ ಸಾರಿದ್ದರು. ಹೊಸ ಹೊಸ ಸುಳುಹುಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಹೊಸ ಹೊಸ ರೀತಿಯಲ್ಲಿ ಅನ್ವಯಿಸಬಹುದಾಗಿದೆ. ಅದೇ ಡಿವಿಜಿಯವರ 'ಕಗ್ಗ'ದ ವಿಶೇಷತೆ ಕೂಡಾ ಉದಾರಹಣೆಗೆ ಪತ್ರಕರ್ತನೊಬ್ಬನಿಗೆ ಈ ಮೇಲಿನ ಮುಕ್ತಕ ತುಂಬಾ ಚೆನ್ನಾಗಿ ಅನ್ವಯಿಸುತ್ತದೆ. ಸಮಾಜವನ್ನು ತಿದ್ದುವ ಗುರುತರ ಜವಾಬ್ದಾರಿ ಪತ್ರಕರ್ತನದಾಗಿದ್ದು, ಅಂತಹ ಜವಾಬ್ದಾರಿಯನ್ನು ಆತ ಕೊಡದ ರೂಪದಲ್ಲಿ ತಲೆಯ ಮೇಲೆ ಹೊತ್ತಿದ್ದಾನೆ.

ಒಂದೆಡೆ ಸಮಾಜಘಾತುಕ ಶಕ್ತಿಗಳು ಮಾರಕ ಆಯುಧಗಳನ್ನು ಹಿಡಿದು ನಿಂತು, ಸತ್ಯವನ್ನು ಬರೆದರೆ ಕೊಲ್ಲುತ್ತೇವೆ ಎಂದು ಬೆದರಿಸಿದರೆ, "ಇನ್ನೊಂದಡೆ ಸತ್ಯವನ್ನು ಬರೆಯದಂತೆ ಆತನಿಗೆ ಹಣ, ಉಡುಗೊರೆ ಮುಂತಾದ ಆಮಿಷಗಳನ್ನು ಒಡ್ಡಿ ನೈತಿಕವಾಗಿ ಅಧಃಪತನಕ್ಕೆ ಎಳೆಯುತ್ತವೆ" ವ್ಯಕ್ತಿ ಗೊಂದಲಮಯ ಬದುಕಿನಿಂದ ಬಿಡುಗಡೆ ಹೊಂದುವ ಕಲೆಯನ್ನು ಅರಿತು ನೆಮ್ಮದಿಯ ನಿರುಮ್ಮಳ ಬದುಕನ್ನು ಸಾಗಿಸಲಿ ಎಂಬುದೇ ಇಲ್ಲಿನ ಆಶಯ.

ಮನವನಾಳ್ಪುದು ಹಟದ ಮಗುವನಾಳುವ ನಯದೆ।
ಇನಿತಿನಿತು ಸವಿಯುಣಿಸು ಸವಿಕಥೆಗಳಿಂದೆ॥

ಮನಸ್ಸು ಸರ್ವಾಂತರ್ಯಾಮಿಯಾದುದು. ಎಲ್ಲೆಂದರಲ್ಲಿ ಸಂಚರಿಸುತ್ತದೆ. ಮನಸ್ಸಿನ ಈ ಚಂಚಲ ಸ್ವಭಾವವನ್ನು ಕಂಡೇ ಕವಿಗಳು 'ಪದ್ಮ ಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ' ಎಂದಿದ್ದಾರೆ. ಇಂತಹ ಹರಿದೋಡುವ ಮನಸ್ಸನ್ನು ಕ್ರಮೇಣವಾಗಿ ನಿಯಂತ್ರಿಸಬೇಕು. ಅದು ಬಯಸಿದ ಬಯಕೆಗಳನ್ನು ನಿಧಾನಕ್ಕೆ ಪೂರೈಸುತ್ತಾ ಬರಬೇಕು. ತಾಯಿ ಮಗುವನ್ನು ಸಂತೈಸುವಂತೆ ಮನಸ್ಸಿನ ಬಯಕೆಗಳಿಗೆ ಪೂರಕವಾದ್ದನ್ನು ನಾವು ಒದಗಿಸಬೇಕು ಮನಸ್ಸು ಹಿಡತಕ್ಕೊಳಪಟ್ಟಾಗ ನೈತಿಕ ಬದುಕು ಯಶಸ್ಸನ್ನು ಕಾಣುತ್ತದೆ.

ಎದೆಯನುಕ್ಕಾಗಿಸುತ, ಮತಿಗದೆಯ ಪಿಡಿದು, ನೀ-।
ನೆದುರು ನಿಲೆ ಬಿದಿಯೊಲಿವ-ಮಂಕುತಿಮ್ಮ॥

ಡಿ.ವಿ.ಜಿ.ರವರು ಬದುಕಿನ ಅನುಭವದ ಶಾಲೆಯಲ್ಲಿ ದೇವರಿಗೆ ವಿಶಿಷ್ಟ ಸ್ಥಾನವನ್ನು ಕೊಟ್ಟವರು. ದೇವರಲ್ಲಿ ಅಪಾರ ಭಕ್ತಿಯನ್ನು ಇಟ್ಟವರು. ತಮ್ಮ ನೋವಿನ ಸಂದರ್ಭಗಳನ್ನು ಅವನ ನೆಪದಲ್ಲಿ ಮರೆತವರು. ಇಲ್ಲೂ ಸಹ ಜನರಿಗೆ ಆ ಮಾತುಗಳನ್ನೇ ಉಪದೇಶಿಸುತ್ತಾರೆ. ದೇವರಲ್ಲಿ ನಂಬಿಕೆಯನ್ನು ಇಟ್ಟು, ಎಂತಹ ಸಂಕಟಗಳು ಎದುರಾದರು ಧೈರ್ಯವಾಗಿ ಎದುರಿಸುತ್ತ ನಿನ್ನ ಆತ್ಮವಿಶ್ವಾಸವನ್ನು ಕಾಪಾಡಿಕೊ ದೇವರು ತಾನಾಗೇ ಒಲಿಯುತ್ತಾನೆ. ಬದಲಾಗಿ ನೀನು ಎದುರಾದ ಸಮಸ್ಯೆಗಳಿಗೆ ಅಂಜುತ್ತಾ ಕುಳಿತರೆ ಆತನೂ ಸಹ ನಿನ್ನನ್ನು ಶೋಷಿಸುತ್ತಾನೆ ಎನ್ನುತ್ತಾರೆ. ರಾಮನ ಬರುವಿಕೆಗಾಗಿ ಕಾದ ಶಬರಿಯ ಪ್ರಯತ್ನ ಕಡೆಗೊಮ್ಮೆ ಫಲಿಸಿದಂತೆ ಅಚಲ ವಿಶ್ವಾಸದಿಂದ ಮಾಡಿದ ಕೆಲಸಕ್ಕೆ ಯಶಸ್ಸು ಖಚಿತ ಎಂಬುದೇ ಇಲ್ಲಿನ ಆಶಯವಾಗಿದೆ. ನಮ್ಮ ಪ್ರಯತ್ನಗಳ ಮೇಲೆ ನಮಗೆ ಭರವಸೆ ಇರಬೇಕು.

ದೇಹವೆಂಬುದು ಕುದುರೆಯಾತ್ಮನದರಾರೋಹಿ।
ವಾಹನವನುಪವಾಸವಿರಿಸೆ ನಡೆದೀತೆ?॥

ಡಿ.ವಿ.ಜಿ.ರವರು ದೇಹ ಮತ್ತು ಆತ್ಮಗಳ ನಡುವಿನ ಸಂಬಂಧ ಹೇಗಿರಬೇಕು ಎಂಬುದರ ಬಗೆಗೆ ಮನವರಿಕೆ ಮಾಡಿಸುತ್ತಾರೆ. ಆತ್ಮದ ಅನುಪಸ್ಥಿತಿಯಲ್ಲಿ ದೇಹಕ್ಕೆ ಬೆಲೆಯೇ ಇಲ್ಲ. ಆತ್ಮದ ನಿರ್ದೇಶನದಿಂದಾಗಿಯೇ ದೇಹ ಕೆಲಸಗಳಲ್ಲಿ ತೊಡಗಿ ಯಶಸ್ಸನ್ನು ಕಾಣುತ್ತದೆ. ಈ ಎರಡರ ನಡುವಿನ ಸಂಬಂಧಗಳನ್ನು ದೃಷ್ಟಾಂತದ ಮೂಲಕ ವಿವರಿಸುತ್ತಾರೆ. ದೇಹವೇ ಕುದುರೆ, ಅದನ್ನು ನಡೆಸುವವ ಸಾರಥಿ.

ಕುದುರೆಗೆ ಉತ್ತಮವಾದ ಪೋಷಣೆ ಸಿಗಬೇಕು. ಕೆಲವೇಳೆ ಹದ್ದುಮೀರಿ ಓಡುತ್ತದೆ. ಹಾಗೆಂದು ಆರೋಹಿಯಾದವನು ತಿದ್ದಿ ಕುದುರೆಯನ್ನು ಉತ್ತಮವಾದ ಮಾರ್ಗದಲ್ಲಿ ನಡೆಸುವಂತೆ ಡಿ.ವಿ.ಜಿ. ಹೇಳುತ್ತಾರೆ. ಕುದುರೆ ಸದೃಢವಾಗಿತ್ತೆಂದರೆ ಗುರಿಯ ಬೆನ್ನತ್ತಿ ಸಾಗಿದ ನಾವು ಆ ಗುರಿಯನ್ನು ಖಚಿತವಾಗಿಯೂ ಮುಟ್ಟಬಹುದು. ಹಾಗಾಗಿ ದೇಹ ಮತ್ತು ಆತ್ಮಗಳೆರಡೂ ಪೂರಕವಾಗಿದ್ದಾಗ ಮಾತ್ರ ಸಾಧನೆಯ ಶಿಖರವನ್ನೇರಲು ಸಾಧ್ಯವೆನ್ನುತ್ತ

ಎಲ್ಲರೂ ಸ್ವಾವಲಂಬಿಗಳಾಗಿ ಬದುಕುವಂತೆ ಡಿ.ವಿ.ಜಿ. ಕರೆ ಇತ್ತಿದ್ದಾರೆ. ದೇಹ ದಂಡನೆಗಿಂತ ಮನಸ್ಸಿನ ನಿಗ್ರಹ ಅನಿವಾರ್ಯ.

ಎಡೆವದೆಯೆ ಮೈಗಾಯವಡೆಯದೆಯ ಮಗುವಾರು।
ನಡೆಯ ಕಲಿತವನು? ಮತಿ ನೀತಿಗತಿಯಂತು॥

ಸೋಲು, ಅವಮಾನಗಳೆಲ್ಲ ಮನುಷ್ಯ ಸಹಜವಾದದ್ದು, ಎಲ್ಲರೂ ಸೋತು ಗೆದ್ದವರೆ ಸೋಲೇ ಗೆಲುವಿನ ಸೋಪಾನ ಎದುರಾಗುವ ಎಲ್ಲಾ ಅಡೆತಡೆಗಳನ್ನೂ ಧೈರ್ಯವಾಗಿ ಎದುರಿಸಬೇಕು. ಕಲ್ಲು ಪೂಜೆಗೆ ಅರ್ಹವಾಗಬೇಕಾದರೆ ಉಳಿಪೆಟ್ಟು ತಿನ್ನಲೇಬೇಕು. ಏನನ್ನೇ ಕಲಿಯುವ ಮೊದಲು ನಮಗೆ ಸೋಲಿನ ಅನುಭವ ಆಗುತ್ತದೆ, ಆಗಬೇಕು. ಮೊದಲಿಗೆ ಇಂಗ್ಲೀಷ್ ಸಾಹಿತ್ಯದಲ್ಲಿ ಆಸಕ್ತರಾಗಿದ್ದ ಕುವೆಂಪು ನಂತರ ಕನ್ನಡದ ಬಗ್ಗೆ ಒಲವು ತೋರಿದರು. ಅವರ ಕನ್ನಡ ಸಾಹಿತ್ಯದಲ್ಲಿನ ಮಹಾನ್ ಸೇವೆಗಾಗಿ ರಾಷ್ಟ್ರಕವಿ ಬಿರುದು ಸಹ ಕುವೆಂಪುರವರಿಗೆ ಲಭಿಸಿದೆ. ತಪ್ಪು ಮಾಡುವುದು ಮನುಷ್ಯನ ಸಹಜ ಗುಣ. ಆದರೆ ಅವುಗಳನ್ನು ತಿದ್ದಿಕೊಂಡು ನಡೆಯಬೇಕಾದದ್ದು ಆತನ ಕರ್ತವ್ಯ. ಹಲವಾರು ಖೈದಿಗಳು ತಮ್ಮ ತಪ್ಪನ್ನು ತಿದ್ದಿಕೊಂಡು ಇಂದು ಹೊಸ ವ್ಯಕ್ತಿಗಳಾದ ಉದಾಹರಣೆಗಳನ್ನು ನೋಡುತ್ತೇವೆ. ಪುರಂದರರು ಹೇಳುವಂತೆ "ಈಸಬೇಕು ಇದ್ದು ಜೈಸಬೇಕು" ಎಂತಹ ವಿಷಮ ಪರಿಸ್ಥಿತಿಯಲ್ಲೂ ಬದುಕನ್ನು ಧೈರ್ಯವಾಗಿ ಎದುರುಗೊಳ್ಳಬೇಕು.

ತರಚುಗಾಯವ ಕೆರೆದು ಹುಣ್ಣನಾಗಿಪುದು ಕಪಿ।
ಕೊರತೆಯೊಂದನು ನೀನು ನೆನೆ ನೆನೆದು ಕೆರಳಿ॥

ಅಡಿಗರು ತಮ್ಮ ಕವಿತೆಯೊಂದರಲ್ಲಿ "ಇರುವುದೆಲ್ಲವ ತೊರೆದು ಇರದುದರೆಡೆಗೆ ತುಡಿವುದೇ ಜೀವನ" ಎನ್ನುತ್ತಾರೆ. ಜನರಿಗೆ ನೆಮ್ಮದಿ ಎಂಬುದೇ ಇಲ್ಲ. ಇಷ್ಟು ಸಿಕ್ಕರೆ ಮತ್ತಷ್ಟು ಬೇಕೆಂಬ ಆಸ್ತಿ. ಸಿಗದಿದ್ದಾಗ ಅದೇ ಗುಂಗಿನಲ್ಲಿ ಕಾಲಹರಣ ಮಾಡುತ್ತಾರೆ. ಇಲ್ಲದ ಸಮಸ್ಯೆಗಳನ್ನು ಮೈಮೇಲೆ ಎಳೆದುಕೊಂಡು ಅದನ್ನೇ ದೊಡ್ಡ ಸಮಸ್ಯೆಯನ್ನಾಗಿಸಿಕೊಳ್ಳುತ್ತಾರೆ. ಬಂದ ಸವಾಲುಗಳನ್ನು ಧೈರ್ಯವಾಗಿ ಎದುರಿಸಿ ಗೆಲ್ಲಬೇಕೆಂಬ ನೀತಿಯನ್ನು ಡಿ.ವಿ.ಜಿ. ಉಪದೇಶಿಸುತ್ತಾರೆ. ನಾವು ಎಲ್ಲಿಯವರೆಗೆ ಸಾಕು ಎನ್ನುವ ತೃಪ್ತಿಯನ್ನು ಹೊಂದುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಸಮಸ್ಯೆಗಳು ಉದ್ಭವಿಸುತ್ತಲೇ ಇರುತ್ತವೆ.

ಕಷ್ಟ ಎಂದು ಕೊರಗುತ್ತ ಕುಳಿತರೆ ಭವಿಷ್ಯದ ಗತಿ ಏನು? ಕಷ್ಟ-ಸುಖಗಳಾವುವೂ ಮನುಷ್ಯನಿಗೆ ಶಾಶ್ವತವಲ್ಲ ಮೈಕೊಡವಿಕೊಂಡು ಎದ್ದರೆ ಎಲ್ಲವೂ ಕ್ಷಣಾರ್ಧದಲ್ಲಿ ಮಾಯವಾಗಿ ಹೋಗುತ್ತವೆ. ತುತ್ತಿನ ಚೀಲವನ್ನು ತುಂಬಿಸಲು ಅಲೆಯುತ್ತಿದ್ದಂತಹ ಅಂಬಾನಿ, ಅಬ್ದುಲ್ ಕಲಾಂರಂತಹ ಮಹಾನ್ ವ್ಯಕ್ತಿಗಳು ಧೃತಿಗೆಟ್ಟು ಕುಳಿತಿದ್ದರೆ ಇಂದು ಅವರ ಹೆಸರು

೧. ಮಂಕುತಿಮ್ಮನ ಕಗ್ಗ-ಜೀವನ ದೀವಿಗೆ-ಎಸ್.ಶ್ರೀನಿವಾಸಶೆಟ್ಟಿ ಪು.ಸಂ.೧೫.

ಜಗತ್ತಿನಾದ್ಯಂತ ಹರಡಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಡಿ.ವಿ.ಜಿ.ರವರು ಧೃತಿಗೆಟ್ಟು ಪರಿತಪಿಸುವುದು ಬೇಡ ಎನಿಸಿ "ನರಳುವುದು ಬದುಕೇನೋ? – ಮಂಕುತಿಮ್ಮ" ಎನ್ನುತ್ತಾರೆ. ಕೊರತೆಗಳನ್ನು ಪಕ್ಕಕ್ಕಿಟ್ಟು ಉದಾತ್ತ ಗುಣಗಳತ್ತ ಮುಖಮಾಡುವಂತೆ ಉಪದೇಶಿಸಿದ್ದಾರೆ.

ಬರುವುದಿಂತೆತ್ತಣಿನೊ ಬೇಡದ ಪ್ರಾರಬ್ಧ।
ಕರುಮಗತಿ ಕೃತ್ರಿಮವೋ–ಮಂಕುತಿಮ್ಮ॥

"ನಮ್ಮ ಬದುಕೊಂದು ಹಾವು ಏಣಿಯ ಆಟ. ವಿಧಿ ಅದರ ಸೂತ್ರಧಾರ ಆತ ಒಮ್ಮೆ ಏಣಿಯನ್ನು ಮುಂದೊಡ್ಡಿ ಲೀಲಾಜಾಲವಾಗಿ ನಾವು ಮೇಲೇರುವಂತೆ ಮಾಡಬಲ್ಲ. ಮಗದೊಮ್ಮೆ ಹಾವಿನ ಬಾಯಿಗೆ ತಳ್ಳಿ ನಮ್ಮನ್ನು ಕ್ಷಣ ಮಾತ್ರದಲ್ಲಿ ಪ್ರಪಾತಕ್ಕೆ ಎಸೆಯಬಲ್ಲ. ಬಾಳನ್ನು ಮೂರಾಬಟ್ಟೆಯಾಗಿಸಬಲ್ಲ. ನಾವು ಎಷ್ಟೇ ಎಚ್ಚರಿಕೆಯಿಂದ, ನ್ಯಾಯ, ನೀತಿಯಿಂದ ಬದುಕುತ್ತಿದ್ದರೂ ವಿಧಿರಾಯ ಹವಣಿಸಿದ ಎಂದಾದರೆ, ಕೃತ್ರಿಮವಾದ ಸಂದರ್ಭಗಳನ್ನೇ ಸೃಷ್ಟಿಸಿ, ನಮ್ಮ ಬದುಕಿನೊಂದಿಗೆ ಜೋಡಿಸಿ, ಬದುಕನ್ನು ಬಿರುಗಾಳಿಗೆ ಒಡ್ಡಿ ಬಿಡುತ್ತಾನೆ. ಇದು ನಮ್ಮ ಕರ್ಮ ಪ್ರಾರಬ್ದವಾಗಿದ್ದು, ಇದನ್ನು ಸಹನೆಯಿಂದ ಎದುರಿಸಬೇಕು ಎಂಬುದೇ ತಿಮ್ಮ ಗುರುವಿನ ಸಂದೇಶ"೧

ಹರಿಶ್ಚಂದ್ರನ ಉದಾಹರಣೆಯ ಮೂಲಕ ಡಿ.ವಿ.ಜಿ. ಮೂರನೆಯವ ಮಾತಿಗೆ ಸಂಬಂಧವಿಲ್ಲದ ಹರಿಶ್ಚಂದ್ರ ತಲೆಕೊಡಬೇಕಾಯಿತು. ಇಂದಿನ ವಾಸ್ತವ ಕೂಡ ಏನೂ ಭಿನ್ನವಲ್ಲ. ಕೋತಿ ತಾನು ಬೆಣ್ಣೆ ತಿಂದು ಮೇಕೆಯ ಬಾಯಿಗೆ ಸವರಿದಂತೆ ಜನ ಭಿನ್ನ ವೇಷದಲ್ಲಿ ಭಿನ್ನ ಕೃತ್ಯಗಳನ್ನು ಮಾಡಿ ಮುಗ್ಧರನ್ನು ಬಲಿಕೊಡುತ್ತಿದ್ದಾರೆ. ಹಾಗಾಗಿ ಧೈರ್ಯದಿಂದ ಸಂಕಷ್ಟಗಳನ್ನು ಎದುರಿಸಿ ಮೇಲೆ ಬರಬೇಕು. "ಕರುಮಗತಿ ಕೃತ್ರಿಮವೋ–ಮಂಕುತಿಮ್ಮ" ಎನ್ನುವ ಡಿ.ವಿ.ಜಿ. ಧೈರ್ಯವೇ ಬದುಕಿಗೆ ಭೂಷಣ ಎಂಬ ನೀತಿಯನ್ನು ಬೋಧಿಸುತ್ತಾರೆ.

ಎಷ್ಟು ನೀನುಂಡರೇಂ? ಪುಷ್ಟಿ ಮೈಗಾಗುವುದು
ಹೊಟ್ಟೆ ಜೀರ್ಣಿಸುವಷ್ಟೆ; ಮಿಕ್ಕುದೆಲ್ಲ ಕಸ॥

ದೇಹವು ಚಟುವಟಿಕೆಯಿಂದಿರಬೇಕೆಂದರೆ ಅದಕ್ಕೆ ಆಹಾರ ಅಗತ್ಯ. ಜಾಗತೀಕರಣದ ಸೋಂಕಿದೆ ಜೋತು ಬಿದ್ದಿರುವ ಯುವ ಪೀಳಿಗೆ ಎಲ್ಲದಕ್ಕೂ ಅನುಕರಣೆಯನ್ನೇ ರೂಢಿಸಿಕೊಂಡಿದ್ದಾರೆ. ಉಡುಪು, ಆಹಾರಗಳಂತಹ ಅನಿವಾರ್ಯ ವಿಚಾರಗಳಲ್ಲೂ ಬದಲಾವಣೆ ತಂದುಕೊಂಡಿದ್ದಾರೆ. ಪಿಜ್ಜಾ, ಬರ್ಗರ್, ಗೋಬಿಗಳಂತಹ ಮಸಾಲ ಪದಾರ್ಥಗಳನ್ನು ತಿನ್ನುತ್ತಾರೆ. ಅದೂ ಸಮಯವಲ್ಲದ ಸಮಯದಲ್ಲಿ ಇತಿ–ಮಿತಿ ಇಲ್ಲದೆ ತಿಂದು ತಾವಾಗಿಯೇ ರೋಗಗಳನ್ನು ಆಹ್ವಾನಿಸುತ್ತಾರೆ. ಅಂದರೆ ಅವುಗಳ ತಯಾರಿಕೆಗೆ

೧. ಮಂಕುತಿಮ್ಮನ ಕಗ್ಗ – ಜೀವನ ದೀವಿಗೆ ಎಸ್. ಶ್ರೀನಿವಾಸಶೆಟ್ಟಿ ಪು.ಸಂ. –೬೩

ಬಳಸುವ ವಿಭಿನ್ನ ಬಗೆಯ ರಾಸಾಯನಿಕಗಳು ನಮ್ಮ ದೇಹವನ್ನು ಸೇರಿ ನಮ್ಮ ಆರೋಗ್ಯವನ್ನು ಹಾಳುಗೆಡಹುತ್ತಿವೆ. "ಹಸಿವಿಲ್ಲದುಣಬೇಡ ಹಸಿದು ಮತ್ತಿರಬೇಡ" ಎಂದು ಸರ್ವಜ್ಞ ಕೂಡ ಮನೋಜ್ಞವಾಗಿ ವರ್ಣಿಸಿದ್ದಾನೆ. ಜೀರ್ಣಿಸಿಕೊಳ್ಳುವ ಸಾಮರ್ಥ್ಯವಿಲ್ಲದಿದ್ದರೂ ಕೆಲವರು ಹೆಚ್ಚು ಊಟ ತಿನ್ನುವ ಪೇಚಿಗೆ ಸಿಕ್ಕಿಕೊಳ್ಳುತ್ತಾರೆ. ಗಳಿಸುವ ಆತುರಕ್ಕೆ ಬಿದ್ದು ತಮಗೂ, ತಮ್ಮ ಬದುಕಿನ ನಿರ್ವಹಣೆಗೂ ಮೀರಿದ ಸಂಪತ್ತನ್ನು ಗಳಿಸಿ, ಕೂಡಿಟ್ಟು ಅನುಭವಿಸಲಾಗದೆ ಕಡೆಗೊಮ್ಮೆ ಪೊಲೀಸರ ಅತಿಥಿಗಳಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ನಾವೇನೇ ಸಂಪತ್ತನ್ನು ಗಳಿಸಿಟ್ಟರೂ ಅದು ಕೇವಲ ನಮ್ಮ ಕುಟುಂಬ, ಮಕ್ಕಳ ಪಾಲಿಗೆ ಮಾತ್ರ ಮೀಸಲು. ಆ ಸಂಸಾರ, ಕುಟುಂಬ ಮಾತ್ರ ನಮ್ಮನ್ನು ನೆನಪಿಸಿಕೊಳ್ಳುತ್ತಾರೆ. ಅದಕ್ಕೂ ಮಿಗಿಲಾಗಿ ಆ ವ್ಯಕ್ತಿ ನಾಲ್ಕು ಜನರಿಗೆ ಸಹಾಯಕವಾಗುವ ಕೆಲಸವನ್ನು ಮಾಡಿದರೆ ಇಡೀ ಸಮಾಜವೇ ಆತನನ್ನು ಸ್ಮರಿಸುತ್ತದೆ. ಆತನ ವಿಶಾಲಮನಸ್ಸಿಗೆ ಜನರ ಹೃದಯವೂ ಸಹ ವಿಶಾಲ ಭಾವನೆಗಳಿಂದ ಸ್ಪಂದಿಸುತ್ತವೆ. ಆತ ಸ್ವಾರ್ಥಿಯಾಗಿ ಸಮಾಜವನ್ನು ಕಡೆಗಣಿಸಿದನಾದರೆ ಅವನನ್ನು ತೆಗಳುತ್ತದೆ. ಅದಕ್ಕೆ ಡಿ.ವಿ.ಜಿ. ಆಸೆ ಬುರುಕತನವನ್ನು ಬಿಡುವಂತೆ ಜನರನ್ನು ನೀನು ಎಷ್ಟೇ ವಂಚಿಸಿ ಗಳಿಸಿದರೂ ನಿನಗೆ ಅಂತಿಮವಾಗಿ ದೊರೆಯುವುದು ಮುಷ್ಟಿ ಪಿಷ್ಟವು ತಾನೆ? – ಮಂಕುತಿಮ್ಮ ಎನ್ನುತ್ತಾ ತ್ಯಾಗ ಮನೋಭಾವ ರೂಢಿಸಿಕೊಳ್ಳುವಂತೆ ತಿಳಿಸುತ್ತಾರೆ.

ಭುಕ್ತಿ ನಿನಗೆಲ್ಲಿಯದು? ಭತ್ತ ತಾನೆಲ್ಲಿಯದೋ?।
ಎತ್ತಲಿನ ಗೊಬ್ಬರವೋ। ಎತ್ತಲಿನ ನೀರೋ॥

ವಿಸ್ಮಯಕರವಾದ ಪ್ರಕೃತಿಯು ಹೆಣೆದಿರುವ ಹೊಂದಾಣಿಕೆಯ ಬಲೆಯನ್ನು ಕಂಡು ಸ್ವತಃ ಡಿ.ವಿ.ಜಿ.ರವರೇ ಆ ಬಗೆಗೆ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾರೆ. ಎಲ್ಲೋ ಹುಟ್ಟಿ ಮತ್ತೆಲ್ಲೋ ಹರಿದು ಜೀವರಾಶಿಗಳ ಒಳಗೆ ಸಂಚರಿಸಿ ಜೀವ ಸ್ವರೂಪಿಯಾದ ನದಿಯ ಹರಿವೇನಿದೆಯೋ ಅದು ವಿಸ್ಮಯ. ನಮ್ಮ ಸಹೋದರರ ಜೊತೆಗೇ ನಾವು ಹೊಂದಿಕೊಳ್ಳಲು ಹಿಂದೆ ಮುಂದೆ ನೋಡುತ್ತೇವೆ. ಅವರು ಮಾಡಿದ ತಪ್ಪುಗಳನ್ನು ನೆನೆದು ಪ್ರತಿಸೇಡು ತೀರಿಸಿಕೊಳ್ಳುತ್ತೇವೆ. ಆದರೆ ಮನುಷ್ಯ ಏನೇ ತೊಂದರೆ ಮಾಡಿದರೂ ಪ್ರಕೃತಿಯು ಆತನಿಗೆ ಎಲ್ಲೆಲ್ಲಿಂದಲೋ ಸಂಬಂಧಗಳನು ಕಲ್ಪಿಸಿ ಒಳಿತನ್ನು ಮಾಡುತ್ತಿದ್ದಾಳೆ.

ನಡೆವ ಯಾವುದೇ ಒಂದು ಕೆಲಸಕ್ಕೆ, ಅದರ ಪೂರ್ಣತೆಗೆ ಸ್ಫೂರ್ತಿ ಎಲ್ಲೆಲ್ಲಿಂದಲೋ ಸಿಗುತ್ತದೆ. ತಿನ್ನುವ ಒಂದು ಅಗುಳು ಅನ್ನದ ಹಿಂದೆಯೂ ಸಾವಿರಾರು ಜನರ ಶ್ರಮದ ಪಾಲಿರುತ್ತದೆ ಎಂದು ಧಾನ್ಯದ ಕಾಳನ್ನು ಬಿತ್ತುವ ಪ್ರಕ್ರಿಯೆಯಿಂದ ಪ್ರಾರಂಭಿಸಿ ಅಂತಿಮವಾಗಿ ಅನ್ನವಾಗಿಸುವವರೆಗಿನ ಈ ಕ್ರಮಕ್ಕೆ ದೈವದ ಸ್ಫೂರ್ತಿ ಇದೆ. ಇಲ್ಲಿ ಎಲ್ಲರ ಶ್ರಮ ಒಟ್ಟಿಗೆ ಹರಿದು ಬಂದಾಗ ಸಾರ್ಥಕತೆ ಸಾಧ್ಯ. ಅದಕ್ಕೆ ವಚನಕಾರರು "ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ" ಎಂದು ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ

ಎಲ್ಲದಕ್ಕೂ ಸ್ಫೂರ್ತಿಯಾದ ವಿಧಿಯನ್ನು ಡಿವಿಜಿ "ಗುಪ್ತಗಾಮಿನಿಯೋ ಋಣ–ಮಂಕುತಿಮ್ಮ" ಎನ್ನುತ್ತಾರೆ.

ಸರಿಗೆ ಪಂಚೆಯೊ ಹೊದಕೆ –ಹರಕುಚಿಂದಿಯೊ ಮೈಗೆ।
ಪರಮಾನ್ನ ಭೋಜನವೋ ತಿರುಷೆಯಂಬಲಿಯೊ॥
ಪರಿಣಾಮದಲಿ ಧನಿಕ ಬಡವರೀರ್ವರು ಮೊಂದೆ।
ಕರುಬು ಕೋರಗೇತಕೆಲೋ? ಮಂಕುತಿಮ್ಮ॥

ಡಿ.ವಿ.ಜಿ.ರವರು ಎಂದೂ ತಾವು ವೈಭವದ ಜೀವನಕ್ಕೆ ಆಡಂಬರಕ್ಕೆ ಆಶಿಸಿದವರಲ್ಲ. ಸರಳತೆಯನ್ನು ಉಸುರಿದವರು ಅಂತೆಯೇ ನಡೆದವರೂ ಸಹ ಮನುಷ್ಯನ ಆಸಕ್ತಿಯ ಕ್ಷೇತ್ರಗಳು ಬೇರೆ ಬೇರೆಯಾಗಿರಬಹುದು. ಆದರೆ ಅವರ ಉದ್ದೇಶ ಒಂದೇ (ಗಳಿಕೆಯೇ) ಆಗಿರುತ್ತದೆ. ಆರ್ಥಿಕ, ಸಮಾಜಿಕ, ರಾಜಕೀಯ ಸ್ಥಿತಿಗಳು ಭಿನ್ನವಾಗಿದ್ದರೂ ಅವರ ಮೂಲಭೂತ ಅವಶ್ಯಕತೆಗಳು ಮಾತ್ರ ಒಂದೇ ಬಗೆಯಾಗಿರುತ್ತವೆ. "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ"– ಎಂದು ದಾಸರು ಏನು ಹೇಳುತ್ತಾರೆ ಹಾಗೆ ಯಾವ ವ್ಯಕ್ತಿಯೂ ಯಾವ ಕಾರಣಕ್ಕೂ ಹಿಂಜರಿಯಬಾರದು. ಅಶಾಶ್ವತವಾದ ಸುಖ, ಸಂತೋಷಗಳಿಗೆ ಹಿಗ್ಗಬಾರದು. ಶ್ರೀಮಂತ ಬಡವರಿಬ್ಬರ ಮೂಲಭೂತ ಅವಶ್ಯಕಗಳೆಲ್ಲವೂ ಒಂದೇ. ಶ್ರೀಮಂತ ಉತ್ತಮವಾದ ಆಹಾರವನ್ನು, ಬಟ್ಟೆಯನ್ನು ತೊಡಬಹುದು ಬಡವನೂ ಸಹ ತಿನ್ನುತ್ತಾನೆ ಹಾಗೂ ಉಡುತ್ತಾನೆ. ಅದರಲ್ಲಿ ಸ್ವಲ್ಪ ಕಳಪೆ ಗುಣಮಟ್ಟವಿರಲೂ ಬಹುದು. ಹೊಟ್ಟೆ ತುಂಬಿಸಿಕೊಳ್ಳುವ ಮತ್ತು ಮೈಮುಚ್ಚಿಕೊಳ್ಳುವ ಇಬ್ಬರ ಉದ್ದೇಶವೂ ಒಂದೆ.

"ಬದುಕಿಗಾಗಿ ಹೋರಾಟ" ಎಂಬ ಡಾರ್ವಿನ್ನನ ಸಿದ್ಧಾಂತವನ್ನು ಪರಿಪಾಲಿಸೋಣ. ಇತರರ ಉನ್ನತಿಗೆ ನಾವೂ ಸ್ಪಂದಿಸೋಣ ಅಭಿವೃದ್ಧಿಗೆ ಕೈಜೋಡಿಸೋಣ ಆಗ ಆ ವ್ಯಕ್ತಿಯು ಇನ್ನೂ ಮೇಲೆ ಹೋಗಬಹುದು. ನಮಗೂ ಸಂತೋಷವಾಗುತ್ತದೆ. ನಾವೂ ಅವರನ್ನು ನೋಡಿ ಪಾಠ ಕಲಿಯೋಣ ಬದುಕಲು ಪ್ರಯತ್ನಿಸೋಣ ಅದು ಬಿಟ್ಟು ಆತನ ಅಭಿವೃದ್ಧಿಗೆ ಕರುಬಿ ರಾತ್ರೋರಾತ್ರಿ ಆತನ ಮನೆಗೋ ಕಾರ್ಖಾನೆಗೋ ಬೆಂಕಿಹಚ್ಚಿ ಅಥವಾ ಲೂಟಿ ಮಾಡಿ, ದೋಚಿ ವ್ಯಂಗ್ಯ ನಗೆ ನಗುವುದು ಬೇಡ–"ಕರುಬು ಕೊರಗೇತಕೆಲೋ? – ಮಂಕುತಿಮ್ಮ॥" ಕೂಡಿ ಬಾಳಿದರೆ ಸ್ವರ್ಗಸುಖ ಎಂದು ಬೋಧಿಸುತ್ತಾರೆ.

ತಿರುತಿರುಗಿ ತಿರುಗುತ್ತೆ ಬುಗುರಿ ತಾನೆ ಸೋತು।
ತಿರೆಗುರುಳುವುದು ತನ್ನ ಬಲವ ತಾಂ ಕಳೆದು॥

ಜಗತ್ತಿನ ಎಲ್ಲದಕ್ಕೂ ಮಿತಿ ಎಂಬುದುಂಟು. ಎಲ್ಲವೂ ನಿರಂತರವಾಗಿರಲು ಸಾಧ್ಯವಿಲ್ಲ. ಪ್ರಕೃತಿಯ ಸಮತೋಲನತೆಗಾಗಿ ವಿಧಿ ಸೂರ್ಯ, ಚಂದ್ರರನ್ನೇ ಉದಯ–ಅಸ್ತಂಗತರಾಗುವಂತೆ ನಿಯಮಿಸಿದ್ದಾನೆ. ಹೀಗಿರುವಾಗ ಇತರೆ ವಸ್ತು ವಿಚಾರಗಳಿಗೆ ಬಿಡುವನೆ? ಸವೆದುಹೋದ

ಯಂತ್ರ ಹೇಗೆ ಕಾರ್ಯ ಸ್ಥಗಿತಗೊಳಿಸುತ್ತದೆಯೋ ಜೀವನದ ಜಂಜಾಟದಲ್ಲಿ ಹೋರಾಡಿ ಸಾಕಾದ ಮನುಷ್ಯ ಕಡೆಗೊಮ್ಮೆ ಅಂತ್ಯವನ್ನು ಹೊಂದಲೇಬೇಕು. ಆದರೆ ಇರುವ ಅಷ್ಟೂ ದಿನದಲ್ಲಿ ನಮ್ಮ ಸಾಧನೆ ಅಚಲವಾಗಿರಬೇಕು. ಬದುಕಿನ ಕಡೆವರೆಗೂ ಮನುಷ್ಯ ಕ್ರಿಯಾಶೀಲನಾಗಿರಬೇಕು. ನಮ್ಮ ಕಾರ್ಯಗಳಿಂದಾಗಿ ನಾವು ಅಳಿದರೂ ನಮ್ಮ ನೆನಪುಮಾತ್ರ ಅಮೃತಂಗಮಯವಾಗಿರಬೇಕು ಎಂಬ ನೀತಿಯನ್ನು ಡಿವಿಜಿ ನಮ್ಮಲ್ಲಿ ತುಂಬುತ್ತಾರೆ. ದೇವರ ನಿಯಮವನ್ನು ಮೀರದೆ ಆತನು ವಿಧಿಸಿದ ಮಾರ್ಗಗಳಲ್ಲಿ ನಡೆದು ಸುಸಂಸ್ಕೃತರಾಗಬೇಕು. ಗೊಂದಲಗಳಿಂದ ಮುಕ್ತರಾಗಿ ಜೀವನದ ಗತಿಯನ್ನು ಸವೆಸೋಣ.

ಯಮನಿಗೇಕಪಕೀರ್ತಿ? ನರರು ಬಲು ಕರುಣಿಗಳೆ?।
ಮಮತೆಯಿನೊ ರೋಷದಿನೊ, ಹಾಸ್ಯದಿನೋ ಹೇಗೋ॥

ಭೂ ಭಾರವನ್ನು ಇಳಿಸುವುದು ಯಮನ ಒಂದು ಕರ್ತವ್ಯ. ಆತ ತನ್ನ ಕರ್ತವ್ಯವನ್ನು ಚಾಚೂ ತಪ್ಪದೆ ನಿಷ್ಪಕ್ಷಪಾತವಾಗಿ ಮಾಡುತ್ತಾನೆ. ಮಾಡುತ್ತಿದ್ದಾನೆ ಕೂಡ ಎಂಬುದು ಪುರಾಣ ಮೂಲದಿಂದ ನಮಗೆ ತಿಳಿದು ಬಂದುದು. ಪ್ರೀತಿ ಪಾತ್ರರನ್ನು ಕಳೆದುಕೊಂಡ ಜನ ಯಮನನ್ನು ಮನಬಂದಂತೆ ಶಪಿಸುತ್ತಾರೆ. ಆ ವೃತ್ತಿ ಅವನಿಗೆ ದೈವ ನಿಯಾಮಕವಾಗಿ ಬಂದದ್ದು. ಆದರೆ ಆ ಯಾವ ಅರ್ಹತೆಯೂ ಇಲ್ಲದ ಮನುಷ್ಯ ಆಲೋಚನೆ ಮಾಡುವ ನೈಜ ಗುಣ ಹೊಂದಿದ್ದರೂ ಸಹ ಪ್ರಾಣಿಗಳಂತೆ ಒರಟಾಗಿ ವರ್ತಿಸುತ್ತ, ಇತರರಿಗೆ ಕೇಡನ್ನು ಬಗೆಯುತ್ತಾನೆ. ಐಶಾರಾಮಿ ಬದುಕಿನ ದಾಸನಾಗುತ್ತಿರುವ ಮನುಷ್ಯ ತನ್ನ ಮನಸ್ಸಿನ ಇಂಗಿತವನ್ನು ಈಡೇರಿಸಿಕೊಳ್ಳಲಿಕ್ಕಾಗಿ? ವಿನಾ ಕಾರಣ ಇತರರನ್ನು ಹಿಂಸಿಸುತ್ತಿದ್ದಾನೆ. ಇತರರನ್ನು ಕೊಂದಾದರೂ ತನ್ನ ಮನಸ್ಸಿನ ಆಸೆಯನ್ನು ತೀರಿಸಿಕೊಳ್ಳಬೇಕು ಎಂಬ ಪೇಚಿಗೆ ಸಿಲುಕಿ ಅನೈತಿಕ, ಅವೈಚಾರಿಕ ಕ್ರಿಯೆಗಳ ದಾಸನಾಗಿದ್ದಾನೆ. ಮಾನವೀಯತೆಯನ್ನೇ ಮರೆತು ಕೊಂದುಹಾಕುತ್ತಿದ್ದಾನೆ. ಇದೇ ದೊಡ್ಡ ದುರಂತ.

ಸೃಷ್ಟಿಸುವ ಸಾಮರ್ಥ್ಯವಿಲ್ಲದ ಈತ ಕೊಲ್ಲಲೂ ಅರ್ಹನಲ್ಲ. ಆದರೂ ಅಂತಹ ಹೀನ ಕೃತ್ಯಗಳಲ್ಲಿ ತೊಡಗಿರುವ ಮನುಷ್ಯನದು ಯಮನಿಗಿಂತಲೂ ಕೀಳು ವೃತ್ತಿ. ಇತರರಿಗೆ ತೊಂದರೆ ಕೊಡುವುದನ್ನೇ ವೃತ್ತಿಯಾಗಿಸಿಕೊಂಡಿದ್ದಾನೆನ್ನುವ ಡಿವಿಜಿ. "ಒರ್ವನೊರ್ವನನುತಿಕ್ಕಿ । ಸಮೆಯಿಸುವನಾಯುವನು–ಮಂಕುತಿಮ್ಮ" ಎನ್ನುತ್ತಾರೆ. ಏನು ಹಗೆ! ಏನು ಧಗೆ! ಏನು ಹೊಗೆ! ಯೀ ಧರಣಿ! ಸೌನಿಕ (ಮಾಂಸ ಮಾರುವವ) ನ ಕಟ್ಟೆಯೇಂ? ಎಂದು ಆತಂಕವನ್ನು ವ್ಯಕ್ತಪಡಿಸುತ್ತಾರೆ. ಇಡೀ ಧರಣಿ ಶಾಂತಿಯ ಆಗರವಾಗುವ ಬದಲು ಕ್ರೌರ್ಯಗಳ ನೆಲೆಯಾಗಿ ಕಟುಕನ ಜಗುಲಿಯಾಗಿದೆ. ಇದು ವಿನಾಶಕ್ಕೆ ಆಸ್ಪದ. ಈ ಕ್ರೌರ್ಯಗಳನ್ನು ಮರೆತು ಶಾಂತಿಯನ್ನು ಮೈಗೂಡಿಸಿಕೊಳ್ಳುವಂತೆ ಡಿ.ವಿ.ಜಿ. ಕಗ್ಗದ ಮೂಲಕ ಉಪದೇಶಿಸುತ್ತಾರೆ.

"ಇಲ್ಲಿ ಚೆನ್ನಲ್ಲಿ ಚನ್ನೆಲ್ಲೊ ಚೆನ್ನೆನುತೆಣಿಸಿ।
ಹುಲ್ಲು ಬಯಲೊಂದೆಡೆಯಿನೊಂದಕ್ಕೆ ನೆಗೆದು॥"

ಡಿ.ವಿ.ಜಿರವರು ಮಹಾನ್ ಮೇಧಾವಿಗಳು ಉತ್ತಮವಾದ ದೃಷ್ಟಾಂತಗಳನ್ನು ಕೊಡುತ್ತ ನಮ್ಮನ್ನು ತಿದ್ದಲು ಯತ್ನಿಸಿದ್ದಾರೆ. ನಿಜ ಮನುಷ್ಯನ ಮನಸ್ಸು ಚಂಚಲ ಸ್ವಾಭಾವದ್ದು. ಒಂದೆಡೆ ನೆಲೆ ನಿಲ್ಲುವುದಿಲ್ಲ. ಅವನಿಗೆ ತೃಪ್ತಿ ಎಂಬುದೇ ಇಲ್ಲ. ಇಲ್ಲಿಂದಲ್ಲಿಗೆ, ಅಲ್ಲಿಂದ ಮತ್ತಲ್ಲಿಗೆ ಸುಖವನ್ನರಸಿ ಸುತ್ತುತ್ತಾನೆ. ಕರುವೊಂದು ಬಯಲ ತುಂಬ ಹುಲ್ಲು ತಿನ್ನಲಿಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಓಡಾಡುವಂತೆ ಎಂಬ ಅದ್ಭುತ ದೃಷ್ಟಾಂತವನ್ನು ನೀಡಿದ್ದಾರೆ. ಮನುಷ್ಯ ದೃಢ ಚಿತ್ತನಾಗಿ ನಲೆ ನಿಲ್ಲದಿದ್ದರೆ ಆತನಿಗೆ ಏನೂ ಲಭಿಸುವುದಿಲ್ಲ. ಶೂನ್ಯ ಸಾಧಕನಾಗುತ್ತಾನೆ. ಕರು ಹೇಗೆ ತಿನ್ನದೆ ಸುತ್ತುತ್ತದೋ ಹಾಗೆ ಇಲ್ಲಿ ಮನುಷ್ಯನೂ ಸಹ ಒಳ್ಳೆಯದು ಬೇಕೆಂಬ ನೆಪದಲ್ಲಿ ಸುತ್ತಿಯೇ ಕಾಲ ಸವೆಸಿಬಿಡುತ್ತಾನೆ. ಹಾಗಾಗಿ ಅಲ್ಲಮ ಪ್ರಭುಗಳು ಹೇಳುವಂತೆ "ಕೊಟ್ಟಕುದುರೆಯ ಏರಲರಿಯದೆ ಮತ್ತೊಂದ ಬಯಸುವರು...." ಹಾಗಾಗುತ್ತದೆ ಬದುಕು-ಮೊದಲು ನಮಗೆ ದಕ್ಕಿರುವುದರಲ್ಲಿ ಸಂತೋಷವನ್ನು ಕಾಣಬೇಕು ಎಂಬುದೇ ಡಿವಿಜಿರವರ ಕಿವಿಮಾತು.

ಈ ಮಹಿಯೊಳನ್ಯಾಯಕಾರಿಯಿಲ್ಲದುದೆಂದು?।
ರಾಮಭಟನಾಗು ನೀ- ಮಂಕುತಿಮ್ಮ॥

ಭೂಮಿ ಮೇಲೆ ಒಳಿತು ಕೆಡುಕು ಎಂಬ ವಿಭಿನ್ನ ಗುಣಗಳೂ ಒಟ್ಟಿಗೆ ಬೆರೆತಾಗಲೇ ಅದು ಪೂರ್ಣವೆನಿಸಿಕೊಳ್ಳುವುದು. ಒಳ್ಳೆಯದರ ಮಹತ್ವ ತಿಳಿವುದು ಅಲ್ಲಿ ಕೆಡುಕು ಇದಾಗ ಮಾತ್ರ. "ಪಾಪಿಗೂ ಉದ್ದಾರ ಸಾಧ್ಯ" ಎನ್ನುತ್ತಾರೆ ಕುವೆಂಪು. ಸಜ್ಜನರಾದವರು ಸಮಾಜದಲ್ಲಿ ಕೆಟ್ಟವನೆಂಬ ಹಣೆಪಟ್ಟಿ ಹೊತ್ತವನನ್ನು ಸನ್ಮಾರ್ಗದತ್ತ ಕೊಂಡೊಯ್ಯುವುದು ಸೂಕ್ತ ಎಂಬುದೇ ಡಿ.ವಿ.ಜಿ. ಆಶಯ ಕೆಟ್ಟದನ್ನು ದಮನ ಮಾಡುವ ನಿಟ್ಟಿನಲ್ಲಿ ಒಳ್ಳೆಯ ವ್ಯಕ್ತಿ ಸವಾಲುಗಳನ್ನು ಎದುರಿಸಬೇಕು. ಸ್ವಾತಂತ್ರನಾದ ವ್ಯಕ್ತಿಯಲ್ಲಿ ಈ ಇಬ್ಬಗೆಯ ಗುಣಗಳೂ ಇರಬೇಕು. ಕಾಯುವ ಮತ್ತು ದಂಡಿಸುವ ಎರಡೂ ಗುಣಗಳು ಅವನನ್ನು ಔನ್ನತ್ಯಕ್ಕೇರಿಸುತ್ತವೆ. ಸಮಾಜ ಇರುವವರೆಗೂ ಅನ್ಯಾಯ, ಅಕ್ರಮ, ದ್ವೇಷ, ಅಸೂಯೆ ಮೊದಲಾದುವು ಇದ್ದೇ ಇರುತ್ತವೆ. ದುರ್ಮಾರ್ಗಿಗಳನ್ನು ಮೆಟ್ಟಿ ಸನ್ಮಾರ್ಗದ ಹಾದಿಯನ್ನು ತೋರುವ ಸತ್ಪ್ರಜೆಗಳು ಅನಿವಾರ್ಯವಾಗಿ ಬೇಕು. ಒಳಿತಿಗೆ ಎಂದೂ ತಲೆಬಾಗಬೇಕು. ಕೆಡುಕನ್ನು ಒದ್ದು ನಿರ್ಮೂಲನ ಮಾಡಬೇಕು.

ಕಾಯಕದ ಮಹತ್ವ

ಪ್ರತಿಯೊಬ್ಬರ ಬದುಕಿನಲ್ಲೂ ಕೆಲಸ ದುಡಿಮೆಗೆ ಹೆಚ್ಚಿನ ಮಹತ್ವವಿದೆ ಹಲವಾರು ಬುದ್ಧಿಜೀವಿಗಳು ಕಾಯಕದ ಬಗೆಗೆ ತಮ್ಮದೇ ರೀತಿಯಲ್ಲಿ ವ್ಯಾಖ್ಯಾನವನ್ನು ನೀಡಿದ್ದಾರೆ. ಡಿ.ವಿ.ಜಿ.ರವರೇ ಹೇಳುವಂತೆ "ಮನುಷ್ಯ ಬದುಕಿನ ಕಡೆಕ್ಷಣದವರೆಗೂ ತನ್ನದೇ ಆದ ವೃತ್ತಿಯಲ್ಲಿ ತೊಡಗಿಸಿಕೊಂಡು ಕ್ರಿಯಾಶೀಲನಾಗಿರಬೇಕು. ಕಾಯಕದ ಮಹತ್ವವನ್ನು ದಾಸರು ಶರಣರು ತಮ್ಮದೇ ಆದ ರೀತಿಯಲ್ಲಿ ಬೋಧಿಸಿದರು. "ಕಾಯಕವೇ ಕೈಲಾಸ" ಎಂದ ಆಯ್ದಕ್ಕಿ ಮಾರಯ್ಯ ಕಾಯಕ ತತ್ವವನ್ನು ಪ್ರಚಾರಮಾಡುತ್ತ ಜನರಲ್ಲಿ ಆ ಬಗೆಗೆ ಅರಿವು

ಮೂಡಿಸಿದರು. ದುಡಿಮೆ ವ್ಯಕ್ತಿಯನ್ನು ರೂಪಿಸುತ್ತದೆ. "ಕೈ ಕೆಸರಾದರೆ ಬಾಯಿ ಮೊಸರು" ಸ್ವಾವಲಂಬನೆ, ಸ್ವಾಭಿಮಾನದ ಬದುಕನ್ನು ಬಯಸುವ ವ್ಯಕ್ತಿ ಖಂಡಿತವಾಗಿಯೂ ಕಾಯಕದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಹಂಗಿಲ್ಲದ ನೆಮ್ಮದಿ ಬದುಕು ಸಾಧ್ಯ.

ದೊರೆಯ ವೇಷವ ಧರಿಸಿ ಮರೆಯುವೆಯಾ ಮೀಸೆಯನು?
ತಿರುಕ ಹಾರುವನಾಗಿ ಮೀಸೆ ತಿರಿಚುವೆಯಾ?॥

ವೃತ್ತಿ ಧರ್ಮದ ಬಗ್ಗೆ ನಮಗೆ ಅರಿವಿರಬೇಕು. ನಮ್ಮ ಯೋಗ್ಯತೆಗೆ ಅನುಸಾರವಾಗಿ ನಮ್ಮ ವಿಶ್ವಾಸಕ್ಕೆ ಸಾರ್ಥಕವಾದ ಕೆಲಸ ಮಾಡಬೇಕು. ಅರ್ಹತೆ ಇಲ್ಲದೆಯೂ ಅರ್ಹನಂತೆ ಹೋಗಿ ನಗೆ ಪಾಟಲಿಗೆ ಈಡಾಗುವಂತಹ ಕೆಲಸ ಮಾಡಬಾರದು. ಜಗನ್ನಾಟಕ ರಂಗದಲ್ಲಿ ದೇವರು ನಮಗೆ ನೀಡಿದ ಪಾತ್ರವೇನು ಅದನ್ನು ನಾವು ನಿರ್ವಹಿಸಬೇಕು. ರಾಜನ ಪಾತ್ರಕ್ಕೆ ಅರ್ಹನಾದವನು ರಾಜನ ಪಾತ್ರವನ್ನೂ, ಭಿಕ್ಷುಕನ ಪಾತ್ರಕ್ಕೆ ಪಾತ್ರನಾದವನು ಭಿಕ್ಷುಕನ ಪಾತ್ರವನ್ನೂ ನಿರ್ವಹಿಸಬೇಕು. ಇಲ್ಲವಾದರೆ ಅದು ಅಪಹಾಸ್ಯಕ್ಕೀಡಾಗುತ್ತದೆ. ಆಯಾಯ ಪಾತ್ರಗಳಿಗೆ ತಮ್ಮದೇ ಆದ ಮಹತ್ವವಿರುತ್ತದೆ ಅದನ್ನು ನಾವು ಮನಗಂಡು ನಿರ್ವಹಿಸಬೇಕು.

ಜಟ್ಟಿ ಕಾಳಗದಿ ಗೆಲದೊಡೆ ಗರಡಿಯ ಸಾಮು।
ಪಟ್ಟು ವರಸೆಗಳೆಲ್ಲ ವಿಫಲವೆನ್ನುವೆಯೇಂ?॥

ಸೋಲು ಜೀವನದಲ್ಲಿ ನಿರ್ಣಾಯಕ ಹಂತವಲ್ಲ. ಅದನ್ನೇ ನಾವು ಸಕಾರಾತ್ಮಕಗೊಳಿಸಿಕೊಳ್ಳಬೇಕು. ಪ್ರಯತ್ನ ಶೀಲರಾಗಬೇಕು. ಸೋಲು ಗೆಲುವಿನ ಸೋಪಾನ. ಒಮ್ಮೆ ಸೋಲುಂಡವನಿಗೆ ಮುಂದೆ ಗೆಲ್ಲಬೇಕೆಂಬ ಆತ್ಮವಿಶ್ವಾಸ ಹುಟ್ಟುತ್ತದೆ. ಅಂತೆಯೇ ನಿರಂತರವಾಗಿ ಪರಿಶ್ರಮವನ್ನು ಹಾಕಿ ದುಡಿದವನಿಗೆ ಗೆಲುವು ಖಂಡಿತವಾಗಿಯೂ ಲಭಿಸುತ್ತದೆ. ನಮ್ಮ ಪ್ರಯತ್ನದಲ್ಲಿ ಒಮ್ಮೆ ಸೋತರೂ ಸರಿ ಪ್ರಯತ್ನ ಬಿಡಬಾರದು. ಕಡೇ ಪಕ್ಷ ನಮಗಲ್ಲಿ ಅನುಭವವಾದರೂ ದಕ್ಕುತ್ತದೆ. ಗರಡಿ ಮನೆಯಲ್ಲಿ ಪಳಗಿದ ಜಟ್ಟಿ ಪಂದ್ಯದಲ್ಲಿ ಸೋಲುತ್ತಾನೆ. ನಂತರ ಆತ ತಾನು ಆ ವ್ಯಾಯಾಮ ಶಾಲೆಯಲ್ಲಿ ವ್ಯಯಿಸಿದ ಎಲ್ಲ ಶ್ರಮವೂ ವ್ಯರ್ಥವೆನ್ನಲಾಗದು. ಆತನನ್ನು ನಾವು ಮೂದಲಿಸಿ ನಗಬಾರದು. ಏಕೆಂದರೆ ಆತನ ದೇಹ ಅವನ ಪರಿಶ್ರಮದಿಂದಾಗಿ ಗಟ್ಟಿಗೊಂಡಿದೆ. ಮತ್ತೊಮ್ಮೆ ಅವನು ಗೆಲ್ಲಬಹುದು. ಹಾಗಾಗಿ ಎಂತಹ ಕಠಿಣ ಸ್ಥಿತಿಯಲ್ಲೂ ಕೈಲಾಗದು ಎಂದು ನಿರಾಶನಾಗಿ ಕೂರದೆ ಪ್ರಯತ್ನ ಶೀಲರಾಗಬೇಕು. ಅದಕ್ಕೆ ತಕ್ಕ ಫಲ ಸಿಕ್ಕೇ ಸಿಗುತ್ತದೆ.

ಬಡಗಿ ಬೇಸಾಯಿ ಕರ್ಮಿಗರೇನು ಯೋಗಿಗಳೊ।
ಮುಡುಪವರ ಮನಸೆಲ್ಲ ಕೈಯದುಡಿತಕ್ಕೆ॥
ಬಿಡುವಿರದು ಬಣಗು ಚಿಂತೆಗೆ, ಬುತ್ತಿ ಹಂಗಿರದು।
ಕಡಿದಲ್ಲವರ್ಗೆ ಬಾಳ್ – ಮಂಕುತಿಮ್ಮ॥

ಡಂಬಾಚಾರಕ್ಕೆ ಯಾವ ಕೆಲಸವನ್ನೂ ಮಾಡಬಾರದು. ಕಾಯಕಕ್ಕೆ ತನ್ನದೇ ಆದ ಮಹತ್ವವಿದೆ. ಇಲ್ಲದ ಗುಣಗಳನ್ನು ಆರೋಪಿಸಿಕೊಂಡು ನಾನು ಅರ್ಹನೆಂದು ಮೆರೆದರೆ ಅವರಿಂದ ಸಮಾಜಕ್ಕೂ ಮತ್ತು ಆ ವ್ಯಕ್ತಿಗೂ ಮಾರಕವಾಗುತ್ತದೆ. ಮನಸ್ಸಿದ್ದರೆ ಮಾತ್ರ ಆತ ದುಡಿಯಬೇಕು. ಆತ ಪಳಗಿರುವ ವೃತ್ತಿಯಲ್ಲೇ ಯಶಸ್ಸನ್ನು ಕಾಣುವುದು ಸೂಕ್ತ. ಮಾಡುವ ಕ್ರಿಯೆಯಲ್ಲಿ ಏಕಾಗ್ರತೆ ಇರಬೇಕು ಯಾರು. ಸದಾ ಕ್ರಿಯಾಶೀಲನಾಗಿ ಕಾರ್ಯನಿರ್ವಹಿಸುವನೋ ಆತ ಸೋಮಾರಿಯಾಗಲಾರ. ಆತನ ಮನಸ್ಸು ಕೆಲಸದ ಕಡೆಗೆ ತುಡಿಯುತ್ತಿರುತ್ತದೆ. ಅವರ ಬದುಕು ಅವರಿಗೆ ಎಂದೂ ಭಾರವೆನಿಸದು. ಅವರ ಕಾಯಕ ನಿಷ್ಠೆ ಅವರನ್ನು ಯೋಗಿಗಳ ಮಟ್ಟಕ್ಕೆ ಕೊಂಡೊಯ್ಯುತ್ತದೆ.

ಯೋಗ ಎಂಬುದು ಒಂದೆಡೆ ಕುಳಿತು ನಿಯಮಬದ್ಧವಾಗಿ ಹೀಗೇ ಮಾಡಬೇಕೆಂಬುದಿಲ್ಲ. ಏಕಾಗ್ರೆಯಿಂದ ಮಾಡುವ ಯಾವ ಕೆಲಸವೂ ಯೋಗ ಎನಿಸುತ್ತದೆ. ವೃತ್ತಿ ಯಾವುದೇ ಇರಲಿ ನಮ್ಮ ನಿಷ್ಠೆ ಮುಖ್ಯ. ಬಡಗಿ, ಬೇಸಾಯಗಾರ, ಮತ್ಯಾವುದೇ ವೃತ್ತಿಯಲ್ಲಿರಬಹುದು ಆತನ ಮನಸ್ಸು ಕರ್ತವ್ಯ ಶೀಲವಾಗಿ ಕೆಲಸದಲ್ಲೇ ನಾಟಿರುತ್ತದೆ. ಆತ ತನ್ನ ತುತ್ತಿನ ಚೀಲ ತುಂಬಿಸಲು ಏಕಚಿತ್ತನಾಗಿ ನಿರಂತರವಾಗಿ ದುಡಿಯುತ್ತಾನೆ. ತಮ್ಮ ದುಡಿಮೆಯಿಂದ ಅಲ್ಪ ಆದಾಯಬಂದರೂ ಅವರು ಅದರಲ್ಲೇ ಸುಖ ಸಂಸಾರ ಮಾಡುತ್ತ ಯೋಗಿಗಳಂತೆ ನಿಶ್ಚಿಂತರಾಗಿರುತ್ತಾರೆ. ಈ ಪ್ರವೃತ್ತಿಯನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂಬುದೇ ಡಿವಿಜಿ ರವರ ಆಂಬೋಣ ಅದಕ್ಕೆ ಅವರು ಕಡಿದಲ್ಲವರ್ಗೆ ಬಾಳ್ ಎನ್ನುತ್ತಾರೆ.

ಕ್ಷಿತಿಗರ್ಭಧರಿಸುವಳು ಮತ್ತುದಿಸುವುದು ಜೀವ।
ಸತತ ಕೃಷಿಯೋ ಪ್ರಕೃತಿ–ಮಂಕುತಿಮ್ಮ॥

"ಕ್ರಿಯಾಶೀಲತೆಗೆ ಪರ್ಯಾಯವಾದ ಹೆಸರೇ ಪ್ರಕೃತಿ. ಅದು ನಿರಂತರವಾಗಿ ಚಟುವಟಿಕೆಗಳಲ್ಲಿ ತಲ್ಲೀನವಾಗಿರುತ್ತದೆ. ಹೊಸ ಹೊಸ ರೂಪಗಳಲ್ಲಿ ತನ್ನನ್ನು ತೆರೆದುಕೊಳ್ಳುತ್ತದೆ. ಪ್ರಕೃತಿಯು ಸಿಂಧುವಾದರೆ ಮಾನವ ಅದರ ಸಿಡಿದು ಬಿದ್ದ ಒಂದು ಬಿಂದು. ಮಾನವನಿಗೆ ನಿರಂತರ ಕ್ರಿಯಾಶೀಲತೆ, ಕರ್ತವ್ಯ ನಿಷ್ಠೆ, ಕಲಾವಂತಿಕೆ, ಸೌಂದರ್ಯ ಉಪಾಸನೆ, ಇವುಗಳ ಮೂಲಪಾಠಗಳೆಲ್ಲವೂ ದೊರಕಿದ್ದು ಪ್ರಕೃತಿಯಿಂದಲೇ ಪ್ರಕೃತಿಯು ನಿರಂತರ ಕ್ರಿಯಾಶೀಲವಾದದ್ದು. ನವನವೋನ್ಮೇಷಶಾಲಿಯಾದುದು ಎಂಬುದನ್ನು ಡಿ.ವಿ.ಜಿ. ಈ ಮುಕ್ತಕದಲ್ಲಿ ರಸವತ್ತಾಗಿ ನಿರೂಪಿಸಿದ್ದಾರೆ.

ಕ್ಷಿತಿಗರ್ಭಧರಿಸುವಳು ಮತ್ತುದಿಸುವುದು ಜೀವ।
ಸತತ ಕೃಷಿಯೋ ಪ್ರಕೃತಿ–ಮಂಕುತಿಮ್ಮ॥

"ಕ್ರಿಯಾಶೀಲತೆಗೆ ಪರ್ಯಾಯವಾದ ಹೆಸರೇ ಪ್ರಕೃತಿ. ಅದು ನಿರಂತರವಾಗಿ

ಚಟುವಟಿಕೆಗಳಲ್ಲಿ ತಲ್ಲೀನವಾಗಿರುತ್ತದೆ. ಹೊಸ ಹೊಸ ರೂಪಗಳಲ್ಲಿ ತನ್ನನ್ನು ತೆರೆದುಕೊಳ್ಳುತ್ತದೆ. ಪ್ರಕೃತಿಯು ಸಿಂಧುವಾದರೆ ಮಾನವ ಅದರ ಸಿಡಿದು ಬಿದ್ದ ಒಂದು ಬಿಂದು. ಮಾನವನಿಗೆ ನಿರಂತರ ಕ್ರಿಯಾಶೀಲತೆ, ಕರ್ತವ್ಯ ನಿಷ್ಠೆ, ಕಲಾವಂತಿಕೆ, ಸೌಂದರ್ಯ ಉಪಾಸನೆ, ಇವುಗಳ ಮೂಲಪಾಠಗಳೆಲ್ಲವೂ ದೊರಕಿದ್ದು ಪ್ರಕೃತಿಯಿಂದಲೇ ಪ್ರಕೃತಿಯು ನಿರಂತರ ಕ್ರಿಯಾಶೀಲವಾದದ್ದು. ನವನವೋನ್ಮೇಷಶಾಲಿಯಾದುದು ಎಂಬುದನ್ನು ಡಿ.ವಿ.ಜಿ. ಈ ಮುಕ್ತಕದಲ್ಲಿ ರಸವತ್ತಾಗಿ ನಿರೂಪಿಸಿದ್ದಾರೆ.

"ಪರಿವರ್ತನೆ ಜಗದ ನಿಯಮ" ಋತುಚಕ್ರ ತಿರುಗದಂತೆಲ್ಲ ಪ್ರಕೃತಿಯಲ್ಲೂ ವಿಶೇಷ ಬದಲಾವಣೆಗಳು, ಪರಿವರ್ತನೆಗಳು ಉಂಟಾಗುತ್ತವೆ. ಈ ಪರಿವರ್ತನೆಗೆ ಪ್ರಾಣಿ ಪಕ್ಷಿಗಳಾದಿಯಾಗಿ ಎಲ್ಲ ಜೀವಿಗಳನ್ನೂ ಮನಪರಿವರ್ತಿಸುವ ಶಕ್ತಿಯೂ ಇದೆ. ಹುಟ್ಟು-ಸಾವುಗಳ ಜೀವನ ಕ್ರಮವನ್ನು ನಿಯಂತ್ರಿಸುವ "ಕಾಲ" ಜೀವಿಗಳ ಜೀವನವನ್ನು ಸೆಳೆದೊಯ್ದು ತನ್ನ ಕಪಿಮುಷ್ಟಿಯಲ್ಲಿ ಇರಿಸಿಕೊಂಡಿರುತ್ತಾನೆ. ಋತು ಧರ್ಮದ ಪ್ರಭಾವದಿಂದಲೇ ಜೀವಿಗಳ ಮೇಲಿನ ಮರುಕದಿಂದಲೇ ತನ್ನ ಮುಷ್ಟಿಯನ್ನು ಸಡಿಲಿಸಿ ಜೀವಿಗಳನ್ನು ಬಿಟ್ಟು ಬಿಡುತ್ತಾನೆ. ಮರಳಿ ಜನ್ಮತಾಳಲು ಹಾತೊರೆವ ಜೀವಗಳು ಭೂಮಾತೆಯ ಗರ್ಭವನ್ನು ಸೇರಿ ಜೀವತಳೆಯಲು ಯತ್ನಿಸುತ್ತವೆ. ಪ್ರಾಣಿಗಳಾಗಿ, ಮನುಷ್ಯರಾಗಿ, ಪಕ್ಷಿಗಳಾಗಿ ಅಥವಾ ವಿವಿಧ ಸಸ್ಯ ಪ್ರಭೇದಗಳಾಗಿ ಹೊರಹೊಮ್ಮುತ್ತವೆ. ಅವಕಾಶಕ್ಕಾಗಿ ಹಾತೊರೆಯುವ ಅವುಗಳು ಮಣ್ಣಲ್ಲಿ ಮಣ್ಣಾಗಿ ಹೋದ ಮೃತದೇಹಗಳ ಗೋರಿಗಳಿಂದಲೂ ಹುಲ್ಲಾಗಿ ಮೊಳೆಯುತ್ತವೆ. ಪ್ರಕೃತಿಯ ಈ ಸೃಷ್ಟಿತಂತ್ರವನ್ನು ಡಿ.ವಿ.ಜಿ.ರವರು ಮಗುವಿನ ಜನನದ ಪ್ರಕ್ರಿಯೆಗೆ ಹೋಲಿಸುತ್ತಾ 'ಕ್ಷಿತಿಗರ್ಭಧರಿಸುವ ಲತೆ, ನಿರಂತರವಾದ ಚಟುವಟಿಕೆ, ಸೋಲರಿಯದ ಯತ್ನ, ಇವುಗಳನ್ನು ನಾವು ಅಳವಡಿಸಿಕೊಳ್ಳಬೇಕು. ಸದಾ ಕ್ರಿಯಾಶೀಲರಾಗಿರಬೇಕು ಎಂದು ಪರೋಕ್ಷವಾಗಿ ಅವರು ಕರೆಯಿತ್ತಿದ್ದಾರೆ.[೧]

ಸಿನಿಮಾ ನಟ-ನಟಿಯರು, ರಾಜಕೀಯ ಮುಖಂಡರನ್ನು ಅನುಕರಣೆ ಮಾಡುವುದಲ್ಲ. ಬದುಕಿಗೆ ಪೂರಕ ಸ್ಫೂರ್ತಿ ಒದಗಿಸುವ ಪ್ರಕೃತಿ ಮಾತೆಯ ಕಾರ್ಯತತ್ಪರೆಯನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ।
ನಾನೇನು ಹುಲುಕಡ್ಡಿಯೆಂಬ ನುಡಿಬೇಡ॥
ಹೀನಮಾವುದುಮಿಲ್ಲ ಜಗದ ಗುಡಿಯೂಳಿಗದಿ।
ತಾಣ ನಿನಗಿಹುದಲ್ಲಿ – ಮಂಕುತಿಮ್ಮ॥

ಹಿರಿಯರು "ಉದ್ಯೋಗಂ ಪುರುಷ ಲಕ್ಷಣಂ" ಎಂದಿದ್ದಾರೆ. ಇಡೀ ಮಾನವ

೧. ಮಂಕುತಿಮ್ಮನ ಕಗ್ಗ ಜೀವನ ದೀವಿಗೆ – ಎಸ್.ಶ್ರೀನಿವಾಸಶೆಟ್ಟಿ – ಪುಟ ೯೫.

ಸಂತತಿಗೇ ಇದು ಅನ್ವಯಿಸುತ್ತದೆ. ಸ್ತ್ರೀ-ಪುರುಷರೆನ್ನದೆ ಎಲ್ಲರೂ ಬಾಳಿನ ನೌಕೆಯನ್ನು ನೂಕಲು ದುಡಿಯಲೇ ಬೇಕು. ಒಬ್ಬೊಬ್ಬರದೂ ಒಂದೊಂದು ಬಗೆಯ ಸೇವೆ. ಆ ಸೇವೆ ನಿಷ್ಠೆಯಿಂದ ಕೂಡಿರಬೇಕು. ದೊರೆತ ಆ ಸೇವೆಯಲ್ಲಿ ತಾತ್ಸಾರ ಸಲ್ಲದು. ಯಾವ ಕೆಲಸವೂ (ನೈತಿಕ) ಕೀಳಲ್ಲ. ಇತರರ ಮೇಲೆ ಅವಲಂಬಿತರಾಗದೆ ಬದುಕಲು ಡಿವಿಜಿ ನಮ್ಮಲ್ಲಿ ಪ್ರೋತ್ಸಾಹದ ಮಾತುಗಳನ್ನು ತುಂಬುತ್ತಾರೆ. ಸ್ವಾಭಿಮಾನ ಪ್ರಜ್ಞೆಯನ್ನು ಹುಟ್ಟಿಸುತ್ತಾರೆ.

ತಿನ್ನು ನೀಂ ಜಗಕೆ ತಿನಲಿತ್ತನಿತ: ಮಿಕ್ಕೂಟ।
ಜೀರ್ಣಿಸದ ಋಣಶೇಷ – ಮಂಕುತಿಮ್ಮ॥

ಡಿವಿಜಿ ಈ ಮುಕ್ತಕರಲ್ಲಿ ಋಣದ ಪರಿಕಲ್ಪನೆಯನ್ನು ತರುತ್ತಾರೆ. ಜನ್ಮ ತಳೆದ ನೀನು ಜಗತ್ತಿನ ಋಣಕ್ಕೆ ಬಾದ್ಯ ಜಗತ್ತಿನ ಋಣವನ್ನು ತಿಂದವನಾಗದ್ದೀಯೇ ಹಾಗಾಗಿ ಈ ಋಣವನ್ನು ತೀರಿಸಲು ನೀನು ದುಡಿಯಲೇ ಬೇಕು. ಆ ನಿನ್ನ ದುಡಿಮೆ ಭಕ್ತಿ, ನಿಷ್ಠೆಯಿಂದ ಕೂಡಿದ್ದಾಗಿರಬೇಕು ಎಂದು ಉಪದೇಶಿಸುತ್ತಾರೆ.

ಅದ್ಭುತವಾದ ದೃಷ್ಟಾಂತವನ್ನು ಕೊಡುತ್ತ ಮನುಷ್ಯನನ್ನು ಎಚ್ಚರಗೊಳಿಸುತ್ತಿದ್ದಾರೆ. ತಮ್ಮ ಈ ಮುಕ್ತಕದ ಮೂಲಕ ಎಂತಹ ಮನುಷ್ಯನೂ "ಆತ್ಮಾವಲೋಕನ" ಮಾಡಿಕೊಳ್ಳಬೇಕು. ನಿಜವಾಗಿಯೂ ತನ್ನ ಬದುಕಿನ ಬಗೆಗೆ ಕಾಳಜಿ ಹೊಂದಿರುವ ವ್ಯಕ್ತಿ ನೀತಿಬಾಹಿರವಾಗಿ ನಡೆಯುತ್ತಿದ್ದದ್ದೇ ಆದರೆ ತಕ್ಷಣ ತನ್ನನ್ನು ತಾನು ಎಚ್ಚರಗೊಳಿಸಿಕೊಳ್ಳುತ್ತಾನೆ. ಯಾವ ಮಾರ್ಗದಲ್ಲಾದರೂ ಸರಿ ತನ್ನ ಗುರಿ ಏನಿದೆ ಅಷ್ಟನ್ನು ಮುಟ್ಟಲು ಉತ್ಸುಕನಾದ ಮನುಷ್ಯ ನೀತಿ-ನಿಯಮಗಳನ್ನು ಗಾಳಿಗೆ ತೂರಿ ಸ್ವಾರ್ಥಕ್ಕಾಗಿ ತುಡಿಯುತ್ತಾನೆ. ನಮ್ಮ ಆರ್ಥಿಕ, ರಾಜಕೀಯ, ಸಾಮಾಜಿಕ ವ್ಯವಸ್ಥೆಯೇ ಹದಗೆಟ್ಟಿದೆ. ಆಥಿಕವಾಗಿ, ರಾಜಕೀಯವಾಗಿ ಪ್ರಬಲನಾದವನಿಗೇ ಇಂದು ಸಮಾಜ ಪ್ರೋತ್ಸಾಹಿಸಿ, ಪುರಸ್ಕರಿಸುತ್ತಿದೆ. ಅದನ್ನು ಕಂಡಂತಹ ಸಭ್ಯ ಪ್ರಮಾಣಿಕರು, ಅರ್ಹ ವ್ಯಕ್ತಿತ್ವವುಳ್ಳವರು ಬೇಸತ್ತು ಅನ್ಯಮಾರ್ಗಗಳಿಗೆ ಜಾರುವುದನ್ನು ಕಾಣುತ್ತೇವೆ. ಅದಕ್ಕೇ ಡಿವಿಜಿರವರು "ನಿನ್ನ ದುಡಿತದ ಬೆಮರೊ, ಪೆರರ ಕಣ್ಣೀರೋ॥" ಎಂದು ಎಚ್ಚರಿಸುತ್ತಾರೆ. ಆ ಮೂಲಕ ಮನುಷ್ಯನ ಕೊಳ್ಳುಬಾಕತನಕ್ಕೆ ಕಡಿವಾಣ ಹಾಕುತ್ತಿದ್ದಾರೆ. ವ್ಯಕ್ತಿ ಸುಸಂಸ್ಕೃತನಾಗಬೇಕೆಂಬ ಇಂಗಿತವನ್ನು ವ್ಯಕ್ತಪಡಿಸುತ್ತಾರೆ.

ನಾವು ತಿನ್ನುವ ಒಂದೊಂದು ಅನ್ನದ ಅಗುಳೂ ಸಹ ಶ್ರಮವನ್ನಾಧರಿಸಿದ್ದು, ಅದನ್ನು ಬಿತ್ತು ಬೆಳೆಯುವವರ ಶ್ರಮ ಒಂದು ಬಗೆಯದಾದರೆ, ಅದನ್ನು ನಮಗೆ ಹಂಚುವವರ ಶ್ರಮ ಇನ್ನೊಂದು ಬಗೆಯದು. ಅದನ್ನು ಹದಗೊಳಿಸಿ ನಮಗೆ ನೀಡುವವರ ಶ್ರಮ ಮತ್ತೊಂದು ಬಗೆಯದು. ಕ್ರಮ ಹೀಗಿರುವಾಗ ಅದನ್ನು ನಾವು ಸುಮ್ಮನೆ ತಿನ್ನಲಾಗದು ಅದಕ್ಕೆ ನಿಷ್ಠೆ, ಪ್ರಮಾಣಿಕತೆ ಎಂಬುದು ಬೇಕು. ನಮ್ಮ ದುಡಿಮೆಯೂ ಅಲ್ಲಿ ಅಷ್ಟೇ ಮುಖ್ಯ ಅದನ್ನು ಸ್ವೀಕರಿಸುವ ನಮ್ಮ ದಾರಿ ಅಕ್ರಮವಾಗಿರಬಾರದು ನಾವು ಅದಕ್ಕೆ ಬೆಲೆ ತೆರಲೇಬೇಕು. ಅದು ಕಷ್ಟಪಟ್ಟು ದುಡಿದ ನಮ್ಮ ಸ್ವತ್ತಾಗಬೇಕು.

[illegible]

"ಆಸ್ತಿವಂತನು ತಾನು ಕೆಲಸ ಮಾಡದೆಯೆ ಇತರರ ಕಣ್ಣೀರಿನಿಂದ ಸಂತೋಷ ಪಡುತ್ತಾನೆ ಭೋಗಜೀವನ ನಡೆಸುತ್ತಾನೆ"-ಎಂಬ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತ ಈ ಮುಕ್ತಕದಲ್ಲಿ ಹೆಪ್ಪುಗಟ್ಟಿದ್ದನ್ನು ನಾವು ಗಮನಿಸಬಹುದು. ಅಂಥವರಿಗೆ ಆತ್ಮಾವಲೋಕನ ಮಾಡಿಕೊಳ್ಳಿ ಎಂಬ ಕರೆಯೂ ಇಲ್ಲವಾದರೆ ಮುಂದೊಂದು ದಿನ ಅದು ವಿಷಕಾರಿಯಾದೀತು ಎಂಬ ಎಚ್ಚರಿಕೆಯ ಗಂಟಾಧ್ವನಿಯೂ ಇದಾಗದೆ.

ಕಂಡವರ ದಂಡಿಸುತ। ಕೊಂಡವರ ಒಡವೆಗಳ।
ನುಂಡುಂಡು ಮಲಗಿ ಮಡಿದ ಮೇಲವಗೆ
ಯಮ ದಂಡ ತಪ್ಪುವುದೇ ಸರ್ವಜ್ಞ॥

ಸರ್ವಜ್ಞನ ತ್ರಿಪದಿಯಲ್ಲಿ ಅಡಗಿದ 'ಧ್ವನಿಯೇ' ತಿಮ್ಮ ಗುರುವಿನ ಈ ಮುಕ್ತಕದಲ್ಲಿ ಹೊಸದಾಗಿ ಮೈದಾಳಿ ನಿಂತಿದೆ ಎನಿಸುತ್ತದೆ.

ಆದರೆ ಇವುಗಳನ್ನೆಲ್ಲ ನಾವು ಗಾಳಿಗೆ ತೂರಿ ವಿರುದ್ಧ ದಿಕ್ಕಿನಲ್ಲಿ ಬಹುದೂರ ಸಾಗಿ ಬಿಟ್ಟಿದ್ದೇವೆ. 'ಹೊಡಿ, ಬಡಿ ಕೊಲ್ಲು-ಆದರೆ ಗಳಿಸು' ಎಂಬ ಸಿದ್ದಾಂತವೇ ಮೇಲುಗೈ ಪಡೆದಿದೆ. ನೀನು ಉಣ್ಣುವ ಅನ್ನ ನಿನ್ನ ದುಡಿತದ ಬೆಮರೋಕೇ ಪೆರರ ಕಣ್ಣೀರೋ? ಎಂದು ಅಂದು ತಿಮ್ಮಗುರು ಪ್ರಶ್ನಿಸಿದ್ದರು. ಆದರೆ ಇಂದು ದೇಶದಲ್ಲಿ ಬಲಿಷ್ಟರೆನಿಸಿಕೊಂಡ ಮಂದಿ ಬಡವರ ಬೆವರನ್ನು, ಬೆವರಿನ ದುಡಿಮೆಯನ್ನು ಕಸಿಯುವುದಿಲ್ಲ. ಅವರ ರಕ್ತವನ್ನೇ ಹೀರಿ ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ ಕೂಡಿಸುತ್ತಿದ್ದಾರೆ. ಮುಚ್ಚಿಡುತ್ತಿದ್ದಾರೆ. ಇಲ್ಲಿ ಸಾಲದು ಎಂದು 'ಸ್ವಿಸ್' ಮತ್ತು ಇತರ ವಿದೇಶಿ ಬ್ಯಾಂಕುಗಳಲ್ಲಿ ಬಚ್ಚಿಡುತ್ತಿದ್ದಾರೆ"

ದಿಢೀರನೆ ರಾತ್ರೋರಾತ್ರಿ, ದಿನವೊಂದಕ್ಕೆ ಶ್ರೀಮಂತರಾಗುವ ಧನ ಪಿಶಾಚಿಗಳಿಗೆ ತಿಮ್ಮ ಗುರುಗಳು ಅದ್ಭುತವಾದ ಬಗೆಯಲ್ಲಿ ಉಪದೇಶಿಸುತ್ತಿದ್ದಾರೆ. ಇದನ್ನೇ ವಚನಕಾರರೂ ಸಹ ಮನವರಿಕೆ ಮಾಡಿದ್ದರು. "ಈಸಕ್ಕಿಯಾಸೆ ನಿಮಗೇಕೆ........." ಎಂದು ಗಂಡನನ್ನೇ ತಿದ್ದುವ ಆಯ್ದಕ್ಕಿ ಲಕ್ಕಮ್ಮ ನಿಸ್ವಾರ್ಥ ಸ್ವಾಭಿಮಾನದ ಸಂಕೇತವಾಗಿದ್ದಾಳೆ.

"ತನ್ನ ಶಿಲುಬೆಯ ತಾನೆ ಹೊತ್ತನಲ ಗುರುಯೇಸು?
ನಿನ್ನ ಕರ್ಮದ ಹೊರೆಯ ಬಿಡದೆ ನೀನೆ ಹೊರು॥ "

ಯೇಸುವಿನ ಧರ್ಮೋಪದೇಶವೇ ವಿಭಿನ್ನವಾದದ್ದು. ಆತ ಮರಣದಂಡನೆಯನ್ನು ಅನುಭವಿಸುವ ಸಂದರ್ಭದಲ್ಲಿ ತಾನು ಶಿಲುಬೆಗೇರುವ ಅಂತ್ಯ ಕ್ಷಣವನ್ನು ಎದುರುಗೊಳ್ಳುವ ಸಂದರ್ಭದಲ್ಲೂ ಧೃತಿಗೆಡಲಿಲ್ಲ - ಆಗಲೂ ಸ್ವಾವಲಂಬಿಯಾಗಿಯೇ ನಡೆದುಕೊಂಡ. ತನ್ನ ಶಿಲುಬೆಯನ್ನು ತಾನೇ ಹೊತ್ತು ನಡೆದ. ಜಗತ್ತಿಗೆ ಆದರ್ಶ ಪ್ರಾಯನಾದ ಅಂತಹ ಮಹಾನ್ ವ್ಯಕ್ತಿಯೇ ಹೀಗಿರುವಾಗ ಯಃಕಶ್ಚಿತ್ ಆದ ನಾವೇಕೆ ಎಲ್ಲದಕ್ಕೂ ಪರರನ್ನು ಅವಲಂಬಿಸುವುದು? ನಮ್ಮ ಕೆಲಸವನ್ನು ನಾವೇ ನಿರ್ವಹಿಸಿ ಆ ಸ್ವಾತಂತ್ರ್ಯದ ಸವಿಯನ್ನು

ಅನುಭವಿಸೋಣ ಎನ್ನುತ್ತಾರೆ. ಕೆಲಸ ಯಾವುದೇ ಆದರೂ ಅದರಲ್ಲಿ ಉತ್ಸಾಹವನ್ನು ತೋರಿಸು. ತಾತ್ಸಾರವನ್ನು ತೋರಬೇಡ. ಅಲ್ಲೇ ನಿನಗೆ ಯಶಸ್ಸು ಸಿಗುತ್ತದೆ ಎಂಬ ಭರವಸೆಯನ್ನು ಡಿವಿಜಿ ನೀಡುತ್ತಾರೆ.

ಕಾಯಾ, ವಾಚಾ, ಮನಸಾ ಸತ್ಯ ಶುದ್ಧ ಕಾಯಕವನ್ನು ಮಾಡುವಂತೆ ಡಿ.ವಿ.ಜಿ. ಕರೆನೀಡುತ್ತಾರೆ. ತೋರಿಕೆಯ ಕಾಯಕಬೇಡ ನಿನ್ನ ಮನಸ್ಸಾಕ್ಷಿಗೆ ಒಪ್ಪುವ ಕೆಲಸ ಮಾಡು.

"ಯಾತ್ರಿಕರು ನಾವು ದಿವ್ಯಕ್ಷೇತ್ರ ವೀ ಲೋಕ
ಸತ್ರದಲಿ ನೇಮದಿಂದಿರಲಿಕೆಡೆಯುಂಟು॥

ಸದ್ಭಾವನೆಗಳನ್ನು ಹೊತ್ತು ಹೇಗೆ ಯಾತ್ರೆಗಳನ್ನು ಕೈಗೊಳ್ಳುತ್ತೇವೋ ಹಾಗೆ ಹೊಸ ಜನ್ಮ ತಾಳಿ ಜಗತ್ತಿನ ಊಳಿಗ (ಸೇವೆ)ಕ್ಕೆ ಬಂದ ನಾವು ಸಾರ್ಥಕ ರೀತಿಯಲ್ಲಿ ಅವನ್ನು ನಿರ್ವಹಿಸಬೇಕೆನ್ನುತ್ತಾರೆ. ಹುಟ್ಟಂತು ಆಕಸ್ಮಿಕ, ಸಾವು ಖಚಿತ ಕಟ್ಟಿಟ್ಟ ಬುತ್ತಿ. ಹುಟ್ಟಿದವ ಸಾಯಲೇ ಬೇಕು ಆ ನಡುವಿನ ನಾಲ್ಕು ದಿನದ ಬದುಕಿನಲ್ಲಿ ಶುದ್ಧ ಕೆಲಸಗಳನು ಮಾಡಿ ಮರೆಯಾದ ಮೇಲೂ ನಮ್ಮ ನೆನಪು ಜನ ಮಾನಸದಲ್ಲಿ ಉಳಿವಂತಾಗಬೇಕು.

ಯಾತ್ರಾ ಸ್ಥಳಗಳಲ್ಲಿ ನಿಯಮಾನುಸಾರ ನಡೆದುಕೊಂಡರೆ ಅಲ್ಲಿ ಪಾರುಪಾತ್ಯಗಾರನಾದಿಯಾಗಿ ಎಲ್ಲರಿಂದಲೂ ಹೇಗೆ ಮೆಚ್ಚುಗೆ ಪಡೆಯುತ್ತೇವೆಯೋ ಹಾಗೆ ಜಗತ್ತಿನ ಈ ನಾಟಕರಂಗದಲ್ಲೂ ಉತ್ತಮ ಪಾತ್ರವನ್ನು ನಿರ್ವಹಿಸು, ಜಗತ್ತನ್ನು ನಡೆಸುತ್ತಿರುವ ಆ ಪರಮಾತ್ಮನಿಂದ ಮೆಚ್ಚುಗೆಯನ್ನು ಗಳಿಸುತ್ತೀಯೆ. ಆಗ ಲೌಕಿಕ ಬದುಕಿನಲ್ಲೂ ಸಹ ಪ್ರಶಂಸೆ ತಾನಾಗಿಯೇ ದೊರೆಯುತ್ತದೆ ಎನ್ನುತ್ತಾರೆ ಡಿ.ವಿ.ಜಿ.

ಬೀಳುವುದ ನಿಲ್ಲಿಪುದು, ಬಿದ್ದುದನು ಕಟ್ಟುವುದು।
ಹಾಲೊಡೆಯೆ ಕಡೆದದನು ತಕ್ರವಾಗಿಪುದು॥

ಸಮಾಜದ ಏಳಿಗೆಗೆ, ಬದುಕಿನ ಸಾರ್ಥಕತೆಗೆ ಕಾಯಕವೇ ಆಧಾರ. 'ಕಾಯಕ'ದ ಪರಿಕಲ್ಪನೆಯೇ ಅತ್ಯದ್ಭುತವಾದದ್ದು. ಕಾಯಕ ವೈಯಕ್ತಿಕವಾಗಿಯಾದರೂ ಇರಬಹುದು. ಅಥವಾ ಸಮಾಜಕ್ಕೆ ಸಲ್ಲಿಸುವ ಸೇವೆಯೇ ಆಗಿರಬಹುದು ಒಟ್ಟಾರೆ ಇದು ಧರ್ಮಸಮ್ಮತವಾಗಿರಬೇಕು. ಜಗತ್ತು ಚಿರಂತನವಾದದ್ದು. ಅದರೊಟ್ಟಿಗೆ ನಾವೂ ಸಹ ಕ್ರಿಯಾಶೀಲರಾಗಿ ಮುನ್ನಡೆಯಬೇಕಾದದ್ದು ನಮ್ಮ ಧರ್ಮ ಡಿ.ವಿ.ಜಿ. ಈ ಮುಕ್ತಕದಲ್ಲಿ 'ಕರ್ಮಯೋಗ' ತತ್ವವನ್ನು ಪ್ರತಿಪಾದಿಸಿದ್ದಾರೆ.

ಅಳಿವಿನಂಚನ್ನು ತಲುಪಿದುದನ್ನು ಕಾಪಾಡಿ ಮುಂದಿನ ಪೀಳಿಗೆಗೆ ಅದು ದಕ್ಕುವಂತೆ ಮಾಡಬೇಕಾದ್ದು ನಮ್ಮ ಕರ್ತವ್ಯ. ಹಾಗೆಯೇ ನಮ್ಮ ಕವಿಗಳ ಶ್ರೇಷ್ಠಗ್ರಂಥಗಳನ್ನು ಕೃತಿಗಳ ಬಗೆಗೆ ಅಭಿಮಾನವುಳ್ಳ ಕಾಳಜಿವುಳ್ಳ ಸಂಪಾದಕರು ಸಂಪಾದಿಸಿ ಸಂಗ್ರಹಿಸಿದ್ದಾರೆ. ಬೀಳುವ

ಸ್ಥಿತಿಯಲ್ಲಿರುವ ಯಾವುದೇ ವಸ್ತುವಿಗೆ ಊರುಗೋಲನ್ನು ಕೊಟ್ಟು ನಿಲ್ಲಿಸಿದರೆ ಅದು ನೇರವಾಗಿ ನಿಂತು ಮತ್ತಷ್ಟು ದಿನ ಉಳಿಯುತ್ತದೆ. ಅದಕ್ಕೂ ಮೀರಿ ಬಿದ್ದುಹೋದದ್ದನ್ನು ಪುನಃ ಎತ್ತಿ ಕಟ್ಟಿ ನಿಲ್ಲಿಸಿದರೆ ಅದೂ ಸಹ ಶಾಶ್ವತ ಹೆಸರನ್ನು ತಂದುಕೊಡುತ್ತದೆ.

ಒಡೆದು ಹೋದ ಹಾಲು ಎಂದು ವ್ಯರ್ಥವಾಗಿ ಬಿಸಾಡದೆ ಅದಕ್ಕೆ ಹೆಪ್ಪು ಹಾಕಿ ಕಡೆದರೆ ಅದರಿಂದ ಬೆಣ್ಣೆ ಮತ್ತು ಮಜ್ಜಿಗೆಗಳು ದೊರೆಯುತ್ತವೆ. ಹಾಳಾಗಿ ಉಪಯೋಗಕ್ಕೆ ಅನರ್ಹವಾದದ್ದು ಎನಿಸಿದುದನ್ನು ಹಾಗೆಯೇ ಬಿಟ್ಟು ಹಳೆಯದು ಎನಿಸಿದದನ್ನು ಹೊಸದಾಗಿ ಪರಿವರ್ತನೆಗೊಳಿಸುವುದು ಇದು ಅವನ ವೃತ್ತಿ. ಈ ಮೂಲಕ ಆತ ತನ್ನ ಚಿರಧರ್ಮವನ್ನು ಕಾಯ್ದುಕೊಂಡು ಹೋಗಬೇಕು. ವರ್ತಮಾನದ ವಿಚಾರಗಳನ್ನು ನೋಡುತ್ತಾ ಹೋದರೆ ಒಂದು ದಿನದಂತೆ ಮತ್ತೊಂದು ದಿನವಿಲ್ಲ. ಕ್ಷಣಕ್ಷಣವೂ ವಿಸ್ಮಯಕಾರಿಯಾದದ್ದು. ಸಂಭವಿಸಬಹುದಾದ ಘಟನೆಗಳ ಬಗೆಗೆ ಯಾರಿಗೂ ತಿಳಿಯುವುದಿಲ್ಲ. ಇಡೀ ಜಗತ್ತು ನಿರಂತರ ಚಲನಶೀಲವಾದದ್ದು.

"ಕರ್ಮವನ್ನು ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಆದರ ಫಲಾಫಲಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಕರ್ಮವನ್ನು ಎಸಗಬೇಕಾದದ್ದು ಈ ಜಗದ ನಿಯಮ. ತ್ರಿಕಾಲಜ್ಞಾನಿಗಳಾದ ವೇದವ್ಯಾಸರಿಗೆ ಮುಂದಾಗುವ ಎಲ್ಲಾ ಘಟನಾವಳಿಗಳ ಅರಿವಿತ್ತು. ಚಂದ್ರವಂಶದ ರಾಜಪುತ್ರರ ದಾಯಾದಿ ಕಲಹವೇ ಕಾರಣವಾಗಿ ಕುರುಕ್ಷೇತ್ರದ ಯುದ್ಧ ಭೂಮಿಯಲ್ಲಿ ನರಮೇಧವು ನಡೆಯುವುದೆಂದು, ರಕ್ತದ ಹೊಳೆ ಹರಿಯುವುದೆಂದೂ ಅವರಿಗೆ ತಿಳಿದಿತ್ತು, ಆದರೆ ಚಿತ್ರಸೇನ, ವಿಚಿತ್ರವೀರ್ಯರ ಅಕಾಲಮರಣದಿಂದ ನಿರ್ವಂಶವಾದ ಚಂದ್ರವಂಶವನ್ನು ಅವರು ಹಾಗೆಯೇ ಬಿಡಲಿಲ್ಲ. ನಿಯೋಗ ಪದ್ಧತಿಯಿಂದ ಧೃತರಾಷ್ಟ್ರ, ಪಾಂಡು ಎಂಬಿಬ್ಬರ ಜನನಕ್ಕೆ ಕಾರಣರಾದರು. ಅಲ್ಲಿಂದ ಮುಂದೆ ಗಾಂಧಾರಿಯ ಗರ್ಭದಲ್ಲಿ ಒಂದಾಗಿದ್ದ ಪಿಂಡ ನೂರೊಂದಾಗಿ ಸಿಡಿದು ಬಿದ್ದಾಗ, ಅವುಗಳೇ ಮುಂದಿನ ದುರಂತದ ಬೀಜಗಳು ಎಂಬ ಅರಿವಿದ್ದರೂ ಅವುಗಳಿಗೆ ಜೀವತುಂಬಿ ಉಳಿಸಿದರು. ನಂತರ ಅದೇ ಕೌರವರು ದುರ್ಮಾರ್ಗದಲ್ಲಿ ಹೊರಟಾಗ ಪದೇ ಪದೇ ತಿದ್ದುವ ಯತ್ನವನ್ನು ಅವರು ಮಾಡಿದರು. ಅದಾವುದೂ ಫಲಿಸದೇ ಇದ್ದಾಗ ಪಾಂಡವರಿಗೆ ಧರ್ಮಯುದ್ಧದ ಮೂಲಕವೇ ಸಿಂಹಾಸನವನ್ನು ಪಡೆದುಕೊಳ್ಳುವಂತೆ ಆಶೀರ್ವದಿಸಿದರು. ಹೀಗೆ ಸಾಂದರ್ಭಿಕವಾಗಿ ಕರ್ತವ್ಯ ನಿರ್ವಹಿಸುವುದಷ್ಟೇ ಧರ್ಮ. ಅದರ ಫಲಾಫಲಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವಂತಿಲ್ಲ ಎಂಬುದನ್ನು ವೇದವ್ಯಾಸರು ತಮ್ಮ ಜೀವನ ವಿಧಾನದ ಮೂಲಕ ಸಾಧಿಸಿ ತೋರಿಸಿದರು. ಇದನ್ನೇ ಕೃಷ್ಣ 'ಕರ್ಮಣ್ಯೇ ವಾಧಿಕಾರಸ್ತೆ ಮಾ ಫಲೇಶು ಕದಾಚಿನ' ಎಂದು ಸಾರಿದ್ದು. ಈ ಕರ್ಮಸಿದ್ಧಾಂತವನ್ನೇ ತಿಮ್ಮ ಗುರು ಈ ಮುಕ್ತಕದಲ್ಲಿ ಬಿಡಿಸಿಟ್ಟಿದ್ದು."

ಜೀವನದಲ್ಲಿ ಇದ್ದಕ್ಕಿದ್ದಂತೆ ಸಮಸ್ಯೆಗಳು ತಲೆದೋರಿದಾಗ ಅವುಗಳಿಗೆ ಹೆದರಿ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ಅವುಗಳಿಗೆ ಪರಿಹಾರವನ್ನು ಕಂಡುಕೊಂಡು ಚಾಣಾಕ್ಷತೆಯಿಂದ ಹೊರಬರುವುದು ಉತ್ತಮ ಎನ್ನುತ್ತಾರೆ. ಸಮಸ್ಯೆಯನ್ನು ಸರಾಗವಾಗಿಸುವ ಈ ಕ್ರಿಯೆಗೆ

"ಹಾಲೊಡೆಯೆ ಕಡೆದದನು ತಕ್ರವಾಗಿಪುದು" ಎನ್ನುತ್ತಾರೆ. ನಮ್ಮ ಮಧ್ಯಸ್ಥಿಕೆಯಿಂದಲೂ ಅದು ನೆಟ್ಟಗಾಗದು ಎನಿಸಿದರೆ ಅದನ್ನು ಹಾಗೆಯೇ ಬಿಟ್ಟು ಹೊರಬರಬೇಕು. ಬದಲಾವಣೆ ಮಾಡಲು ಪ್ರಯತ್ನಿಸಬೇಕು. ಅದು ಬದಲಾವಣೆಗೂ ಮೀರಿದ್ದು, ಬದಲಾಯಿಸಲು ಸಾಧ್ಯವಿಲ್ಲವೆಂದಾಗ ಬಿಡು ಎನ್ನುವ ಡಿವಿಜಿ "ಹಾಳ ಹಾಳಾಗಿಪು ಹಳೆದ ಹೊಸತಾಗಿಪುದು ಬಾಳಿಗಿದು ಚಿರಧರ್ಮ-ಮಂಕುತಿಮ್ಮ" ಎಂದು ಉಪದೇಶಿಸಿದ್ದಾರೆ.

ನಿನ್ನ ನಿಸ್ವಾರ್ಥ ಸೇವೆಯಿಂದಾಗಿ ನೀನು ಸುಖ ನೀಡುವ ಮಗುವಿನಂತೆ, ಹಸುವಿನಂತೆ, ಫಲನೀಡುವ ಗಿಡದಂತೆ ಹೆಸರಾಗುತ್ತೀಯೇ. ಜಗತ್ತಿನ ಕೊಳೆಯನ್ನು ತೊಳೆವಲ್ಲಿ ಪೊರಕೆ ಹೇಗೆ ಸಮರ್ಥವೋ ಅದಕ್ಕೂ ಮುಂದುವರೆದು ನೀನು ಜನರ ಮನಸ್ಸಿನ ಕೊಳೆಯನ್ನು ತೊಳೆವಲ್ಲೂ ಪಾತ್ರವಹಿಸು. ನಿನ್ನ ಕೀರ್ತಿ ಶಾಶ್ವತವಾಗಿ ಉಳಿಯುತ್ತದೆ. ಬುದ್ಧ, ಗಾಂಧಿ, ಬಸವಣ್ಣರಂತೆ ನಿನ್ನ ಹೆಸರು ಭೂಮಿಯಲ್ಲಿ ಶಾಶ್ವತವಾಗಿ ಉಳಿಯುತ್ತದೆ ಎನ್ನುತ್ತಾರೆ ಡಿವಿಜಿ.

ಸಸ್ಯಗಳ ಪಾತ್ರ ಜಗತ್ತಿನಲ್ಲಿ ಅತ್ಯಂತ ಪ್ರಮುಖವಾದದ್ದು ಬೇರಾವ ಜೀವಿಯ ತ್ಯಾಗಕ್ಕಿಂತಲೂ ಇವುಗಳ ಸೇವೆ ಉತ್ಕೃಷ್ಟವಾದದ್ದು. ಯಾರು ಕಾರ್ಯ ನಿರ್ವಹಿಸಲಿ, ಬಿಡಲಿ ನಿರಂತರವಾಗಿ ಕೆಲಸ ಮಾಡುತ್ತಲೇ ಇರುತ್ತವೆ. ಸೂರ್ಯ ಚಂದ್ರರೇ ಬರಲಿ, ಬಾರದಿರಲಿ ಸಸ್ಯಗಳ ಕ್ರಿಯೆ ಮಾತ್ರ ನಿತ್ಯ ನಿರಂತರ. ಪ್ರಾಣವಾಯುವನ್ನು ತುಂಬುತ್ತವೆ ಹಾಗೂ ಅವರಿಗೆ ಆಹಾರವನ್ನು ಪೂರೈಸುತ್ತ ಮೌನವಾಗಿ ನಿಂತು ಜಗತ್ತಿನ ಅಭಿವೃದ್ಧಿಗೆ ಕೈ ಜೋಡಿಸುತ್ತಿವೆ.

ಪೊರಕೆ ಸ್ವಚ್ಛತೆಯ ಸಂಕೇತ ಕಸಪೋರಕೆ ಹೇಗೆ ಕೊಳಕನ್ನು ತೊಳೆದು ಸ್ವಚ್ಛತೆಯನ್ನು ಉಳಿಸುವುದೋ ಅಂತೆಯೇ ನಿನ್ನ ಸುತ್ತಲಿನವರ ನೋವಿಗೆ ನೀನು ಮಿಡಿಯುವ ಮೂಲಕ ಜನರ ಆಂತರ್ಯವನ್ನೂ ಶುಚಿಗೊಳಿಸು. ಅವರ ಭೌತಿಕ ಆಂತರಿಕ ನೋವುಗಳಿಗೆ ಮಿಡಿದು ಅವರ ಹೊಗಳಿಕೆಗೆ ಪಾತ್ರವಾಗು ಎಂಬ ಹಿತನುಡಿಗಳನ್ನು ನೀಡುತ್ತಾರೆ ಮೇಧಾವಿ ಡಿ.ವಿ.ಜಿರವರು.

ಜೀವನಧರ್ಮ

ಧರ್ಮ ಎಂದರೆ 'ವೇ ಆಫ್ ಲೈಫ್' ಸಂಸ್ಕೃತದ 'ಧೃ' ಎಂಬ ಅಕ್ಷರದಿಂದ ಬಂದ ಧರ್ಮ-ಧಾರಣೆ ಎಂದರೆ ಒಳ್ಳೆಯದನ್ನು ಧರಿಸುವುದು ಎಂಬರ್ಥದ ಪದದಿಂದ ಬಂದದ್ದು.

ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ।
ದಾರಿಯಾತ್ಮೋನ್ನತಿಗೆ – ಮಂಕುತಿಮ್ಮ॥

ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರ ಎಂದು ದಾಸರು ಉಪದೇಶಿಸುತ್ತಾರೆ. ಡಿ.ವಿ.ಜಿ.ರವರೂ ದಾಸರ ಈ ಮಾತನ್ನು ಅನುಮೋದಿಸಿಯೇ

ಹೇಳುತ್ತಾರೆ. ಆದಿ ಅಂತ್ಯಗಳಿಲ್ಲದ ಮನುಷ್ಯ ನಿರ್ದಿಷ್ಟ ಗುರಿಯೊಂದನ್ನು ಹೊತ್ತು ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳಬೇಕು. "ಈ ಜಗತ್ತನ್ನು ನಡೆಸುತ್ತಿರುವವನು ಇನ್ಯಾರೋ, ಅದಕ್ಕೂ ನಿನಗೂ ಯಾವ ವಿಧವಾದ ಸಂಬಂಧವೂ ಇಲ್ಲ ಎನ್ನುವಂತೆ ನಡೆದುಕೊಳ್ಳಬೇಡ. ನೀನೂ ಈ ಪ್ರಪಂಚ ಜೀವನದ ಒಂದು ಭಾಗ ಆಗಿರುವಾಗ ಆ ಜೀವನವನ್ನು ಗೌರವಿಸುವುದನ್ನು ಕಲಿ. ಜೀವನ ತುಚ್ಛ ಮತ್ತು ಹೇಯವಾದದ್ದಲ್ಲ. ಸಕಲರಲ್ಲೂ ಇರುವ ಪರಮಾತ್ಮನ ಚೈತನ್ಯವನ್ನು ಗೌರವಿಸು. ಪರಮಾತ್ಮನು ಸೃಷ್ಟಿಸಿದ ಈ ಜೀವನವನ್ನು ಸಮೃದ್ಧಿಗೊಳಿಸಲು ದುಡಿಯುವುದೇ ನಿನ್ನ ಆತ್ಮದ ಉನ್ನತಿಗೆ ದಾರಿ"[೧]

ಎರಡು ಕೈ ಸೇರಿದರೆ ಮಾತ್ರ ಚಪ್ಪಾಳೆ ಹೊಡೆಯಲು ಸಾಧ್ಯ. ಯಾವುದೇ ಕ್ರಿಯೆ ಜರುಗಬೇಕಾದರೆ ಅದು ತನ್ನಷ್ಟಕ್ಕೆ ಪೂರಕ ಅಲ್ಲ. ಆ ಕ್ರಿಯೆಯ ಹಿಂದೆ ಕಾಣದ ಕೈಗಳಕೆದರ ಶ್ರಮವಿರುತ್ತದೆ. ಅದರಲ್ಲಿ ನಮ್ಮದೂ ಒಂದಾಗಿರುತ್ತದೆ. ಈ ಬಗೆಯ ಮನೋವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರಿಗೂ ತಮ್ಮದೇ ಆದ ಅಸ್ಮಿತೆಯಿರುತ್ತದೆ. ನಾನು, ನನ್ನದು ಎಂಬ ಸ್ವಾರ್ಥ ಭಾವನೆ ಬೇಡ ನಾವು, ನಮ್ಮವರೆಂಬ ವಿಶಾಲ (ಸಮಷ್ಟಿ) ಮನೋಭಾವವನ್ನು ಬೆಳೆಸಿಕೊಳ್ಳುವಂತೆ ತಿಳಿಸುತ್ತಾರೆ. ಬಸವಣ್ಣವರು ಹೇಳುವಂತೆ "ಇವನಾರವ ಇವನಾರವ ನೆಂದೆನಿಸದಿರಯ್ಯ – ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ" ಹೌದು ಅದೇ ಮಾನವೀಯತೆ ಒಗ್ಗಟ್ಟಿನ ಸಾರ. ಜೀವನವನ್ನು ಉತ್ತಮಗೊಳಿಸಲಿಕ್ಕಾಗಿ ಹೋರಾಡು.

ಮೇಲು, ಕೀಳು, ಶ್ರೇಷ್ಠ, ಕನಿಷ್ಠತೆಯ ಭಾವಗಳನ್ನು ಕಟ್ಟಿಟ್ಟು ಉದಾತ್ತತೆಯೆಡೆಗೆ ಸಾಗಿದರೆ, ಜೀವನ ಆಗ ತಾನಾಗಿಯೇ ಉನ್ನತಿಯ ಕಡೆಗೆ ಸಾಗುತ್ತದೆ. ಹಾಗಾಗಿ ಜೀವನ ಮೌಲ್ಯಗಳಿಗೆ ಬೆಲೆ ಕೊಡುವಂತೆ ಹೇಳುತ್ತಾರೆ ಮಾನ್ಯ ಡಿವಿಜಿ. ಧರ್ಮಸಮ್ಮತ ಹಾದಿಯಲ್ಲಿ ನಡೆದು ವಿಧಿಯ ಕೃಪೆಗೊಳಗಾಗೋಣ.

ಧರಿಸು ಲೋಕದ ಭರವ ಪರಮಾರ್ಥವನುಬಿಡದೇ।
ಹೊರಡು ಕರೆಬರಲಳದೆ–ಮಂಕುತಿಮ್ಮ

ಜಗದ ಉನ್ನತಿಗೆ ದುಡಿವುದಷ್ಟೇ ನಮ್ಮ ಕರ್ತವ್ಯ, ಫಲ ವಿಧಿಗೆ ಬಿಟ್ಟಿದು. ಅವನ ಇಚ್ಛೆಗೆ ಬಂದಂತೆ ನಿಷ್ಪಕ್ಷಪಾತವಾಗಿ ಫಲ ನೀಡುತ್ತಾನೆ. ಆ ಬಗೆಯ ಆಲೋಚನೆ ಮಾಡುವುದು ಅದನ್ನೇ ಶ್ರೀಕೃಷ್ಣ ಅರ್ಜುನನಿಗೆ ಉಪದೇಶಿಸುವುದು. 'ಕಾಯಕಯೋಗ'ವನ್ನು ಬೋಧಿಸುತ್ತ ಅವನನ್ನು ಕರ್ತವ್ಯ ಮಗ್ನನನ್ನಾಗಿಸುತ್ತಾನೆ. ಭಗವಂತನ ಕರೆ ಬರುವ ಆ ಕಡೆ ಕ್ಷಣವವರೆಗೂ ಕರ್ಮಮಾರ್ಗದಲ್ಲಿ ಬದುಕನ್ನು ಸವೆಸುವಂತೆ ಉಪದೇಶಿಸುತ್ತಾರೆ. ವಿಧಿಯ ಆಟವೇ ನಿಗೂಢ.

ಹಲವಾರು ಜನ ಇಂದು ವಿಧಿಯ ಬಗೆಗಿನ ಆ ನಿಷ್ಠೆಯನ್ನು ಮರೆತು ತಾವು ಬಯಸಿದ್ದೊಂದು ನಡೆಯುತ್ತದೆ ಎಂಬ ಆಸೆಯನ್ನು ಹೊಂದಿದ್ದಾರೆ. ಆದರೆ ಅದು ಅವನಿಗೆ

೧ ಮಂ.ತಿ. ಕಗ್ಗ–ತಾತ್ಪರ್ಯ – ಶ್ರೀಕಾಂತ ಪು.ಸಂ. ೧೬೨

ಯೋಗ್ಯವಲ್ಲ. ನಾವು ಏನೇ ಎಣಿಸಿದರೂ ಆತನ ಮುಂದೆ ಏನೂ ನಡೆಯುವುದಿಲ್ಲ. ಅದನ್ನೇ ತಮ್ಮ ಅನುಭವದ ಮೂಲಕ ಡಿ.ವಿ.ಜಿ. ಹೀಗೆ ಹೇಳುತ್ತಾರೆ.

ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು।
ಪದಕುಸಿಯೆ ನೆಲವಿಹುದು – ಮಂಕುತಿಮ್ಮ॥

ಜೀವನವೇ ಜಟಕಾಬಂಡಿ, ಇಲ್ಲಿ ವಿಧಿ ಜೀವನವೆಂಬ ಸಾರೋಟನ್ನು ನಡೆಸುವ ಸಾರಥಿ. ಆ ಬದುಕೆಂಬ ಬಂಡಿಗೆ ಕಟ್ಟಿರುವ ಕುದುರೆಗಳೆ ನಾವು. ಆ ವಿಧಿಯ ನಿರ್ದೇಶನದಂತೆ ಎಲ್ಲವೂ ನಡೆಯುತ್ತದೆ. ಆತನು ನಡೆಸಿದ ದಾರಿಯಲ್ಲಿ, ವೇಗದಲ್ಲಿ, ಬಗೆಯಲ್ಲಿ ಹೋಗುವುದಷ್ಟೇ ನಮ್ಮಗಳ ಪಾಡು. ಬಂಡಿಯಲ್ಲಿ ನಮ್ಮನ್ನವಲಂಬಿಸಿರುವ ಬಂಧು ಮಿತ್ರರೂ ಇರುತ್ತಾರೆ. ಆದರೆ ಅವರನ್ನು ಯಾವ ಸುವ್ಯವಸ್ಥಿತ ಸ್ಥಳಕ್ಕೆ ಸಾಗಿಸಬೇಕೆಂಬ ಬಗ್ಗೆ ನಮಗೇ ಸ್ವಾತಂತ್ರ್ಯ ಇರುವುದಿಲ್ಲ. ಹಾಗಾಗಿ ವಿಧಿಯ ಕೈಗೊಂಬೆಗಳು ನಾವು. ಆ ಸಾರಥಿಯ ಕೃಪಾ ಕಟಾಕ್ಷಕ್ಕೆ ಒಳಗಾದರೆ ಮಾತ್ರ ಆತ ನಮ್ಮನ್ನು ನಿಗಧಿತ ಸ್ಥಳಕ್ಕೆ ಕರೆದೊಯ್ಯುತ್ತಾನೆ.

ಆ ವಿಧಿಯೆಂಬ ಸಾರಥಿಯ ಕೈಗೊಂಬೆಯಾಗಿ ನಾವು ಮುನ್ನಡೆವಾಗ ಆತನ ಚಾಟಿಯ ಏಟಿಗೋ, ಆತನ ವೇಗಕ್ಕೆ ಹೆಜ್ಜೆ ಇಡಲಾರದೆಯೋ, ಬಾಯಾರಿಕೆಗೊ ಕುಸಿದು ಬೀಳಲೂಬಹುದು. ಆತನ ಕೋಪಕ್ಕೂ ತುತ್ತಾದ ಮೇಲೆ ಏನೋ ಎಂದು ಬಾಯಿ ಬಿಡುವಂತಿಲ್ಲ. ಇನ್ನೂ ಕೆಳಗೆ ಭೂದೇವಿಯ ರಕ್ಷಣೆ ಸಿಗುತ್ತದೆ. ನೆಲದ ಆಸರೆಯಲ್ಲಿ. ಭೂದೇವಿಯ ಮಡಿಲಲ್ಲಿ, ಆ ತಾಯಿಯ ಪೋಷಣೆಗೆ ಪಾತ್ರನಾಗುತ್ತಿಯೇ. ನಿನಗೆ ಮತ್ತೂ ಉತ್ತಮತೆ ಕಡೆಗೆ ಸಾಗಲು ತಾಯಿಯು ಆಸರೆಯನ್ನು ನೀಡುತ್ತಾಳೆ. ಎಂತಹ ಪಾಪಿಯೂ ಆ ಭೂದೇವಿಯ ಮುಂದೆ ಕ್ಷಮಾರ್ಹ ಎಂಬ ಮಾತಿನ ಮೂಲಕ ಡಿವಿಜಿರವರು ಕೊಟ್ಟಂತಹ ಈ ದೃಷ್ಟಾಂತ ಮನೆಮಾತಾಗಿ ಉಳಿಯಿತು. ಅದಕ್ಕೆ ಹೇಳುವುದು "ದೇವರ ಆಟ ಬಲ್ಲವರಾರು" ತನಗಿಚ್ಚೆ ಬಂದಂತೆ ಪರಿಸ್ಥಿತಿಗಳನ್ನು ನಿರ್ಮಿಸಿ ಪರೀಕ್ಷಿಸುತ್ತಾನೆ. ಇದೇ ವಿಧಿ ವಿಪರ್ಯಾಸ.

ಸುತ್ತಿಸುತ್ತುವ ಖಗವ ಗೂಡ ನೆನಪೆಳೆಯುವುದು।
ಗೊತ್ತುನೂಲ್ ಪಿಡಿದಿಹುದು ದನವ ಬಯಲಿನಲಿ॥

ಮನುಷ್ಯನಾದವನು ಅಮೂಲ್ಯವಾದ ಒಂದು ತತ್ವಕ್ಕೆ ಬದ್ಧನಾಗಿರಬೇಕು. ಆತನಿಗೆ ಕೇಂದ್ರ ಒಂದಿರಬೇಕು. ಆ ಕೇಂದ್ರ ಆತನನ್ನು ಬಂಧಿಸಿ ಹಿಡಿದಿಡುತ್ತದೆ. ಆ ಕೇಂದ್ರವೇ ಆತನ ಜಿವನ ಧರ್ಮ. ಆತನ ಅಲೆದಾಟದ ಕ್ಷೇತ್ರಗಳು ಏನೇ ಆದರೂ ಆತನ ಮನಸ್ಸು ಮಾತ್ರ ಆ ತಾತ್ವಿಕವಾದ ಕೇಂದ್ರದ ಕಡೆಗೆ ತುಡಿಯುವುದಾಗಿರಬೇಕು. ಆಹಾರದ ಪೂರೈಕೆಗಾಗಿ ಪಕ್ಷಿ ಬೆಳಗಿನಿಂದ ರಾತ್ರಿವರೆಗೆ ಇಡೀ ಬಯಲಿನ್ನೆಲ್ಲಾ ಸುತ್ತುತ್ತದೆ. ಸೂರ್ಯಾಸ್ತವಾಗುತ್ತಲೇ ಅದಕ್ಕೆ ತನ್ನ ಸಂತಾನದ, ಸಂಸಾರದ ನೆನಪಾಗಿ ಮತ್ತೆ ತಿರುಗಿ ಬಂದು ಸೇರುತ್ತದೆ. ಅಂತೆಯೇ ಮಾಲಿಕನ ಹಿಡಿತಕ್ಕೊಳಪಟ್ಟ ದನ ಎಲ್ಲೂ ಹೋಗಲಾರದು. ತನ್ನ ಪರಿಮಿತ

ದೂರವನ್ನು ಮಾತ್ರ ಅದು ಮುಟ್ಟಲು ಸಾಧ್ಯ ಮತ್ತೆ ಅದು ತನ್ನ ಸ್ಥಳಕ್ಕೇ ಬಂದು ಸೇರಬೇಕು.

ನಾವು ಅಂದುಕೊಳ್ಳುವ ತತ್ವ ಸಿದ್ಧಾಂತಗಳನ್ನು ಮೀರಿದ ಬಾಳು ಅದು ಬದುಕೇ ಅಲ್ಲ. ಅದರಲ್ಲಿ ಸಾರ್ಥಕತೆಯನ್ನು ಕಾಣಲಾಗದು. ನಮ್ಮ ಬದುಕಿನ ಕೇಂದ್ರಗಳಿಗೆ ಬದ್ಧವಾದ ಜೀವನ ಗಾಳಿಪಟದಂತೆ ಚಲನೆಯ ದಿಕ್ಕನ್ನೇ ಬದಲಿಸಿ, ಎಲ್ಲೆಂದರಲ್ಲಿ ಬಿದ್ದು, ಹರಿದು ಛಿದ್ರವಾಗಿ ಬಿಡುತ್ತದೆ. ಕೇಂದ್ರ ಸಿದ್ಧಾಂತ ಬದುಕಿಗೆ ಅವಶ್ಯಕ. ಹೇಗೆ ವ್ಯಾಪಾರ ಮಾಡುವ ವ್ಯಕ್ತಿ ತನ್ನ ಲಾಭ–ನಷ್ಟಗಳ ನಡುವೆಯೂ ವ್ಯಾಪಾರದ ತತ್ವವೊಂದನ್ನು ಬಿಡನೋ ಹಾಗೆ ಇದೂ ಸಹ. ಅಧಿಕಾರ, ಹಣ, ಪೌರುಷ ಇವೆ ಎಂಬ ಕಾರಣಕ್ಕೆ ಎಲ್ಲವನ್ನೂ ಗೆದ್ದೆ, ಎಲ್ಲವನ್ನೂ ಸಾಧಿಸಬಲ್ಲೆ ಎಂಬ ಅಹಂಕಾರ ತರವಲ್ಲ. ವಿನಯ, ವಿಧೇಯತೆ ವಿವೇಕಗಳು ಬದುಕಿಗೆ ಅವಶ್ಯಕ ಎಂಬುದೇ ಇಲ್ಲಿನ ಆಶಯ ಅದಕ್ಕೇ "ತಿಮ್ಮಗುರು ಕಿತ್ತ ಗಾಳಿಯ ಪಟವೋ–ಮಂಕುತಿಮ್ಮ" ಎನ್ನುತ್ತಾರೆ.

ನೀಗುವುದು ಹಸಿವನ್ ಉಣಿಸೆಂತಪ್ಪುದಾದೊಡಂ।
ಬಾಗಿಸದ್ದಿರಾತ್ಮವನು ಮಂಕುತಿಮ್ಮ॥

ಆಹಾರ ಸೇವನೆಯ ಉದ್ದೇಶವೇ ಹಸಿವನ್ನು ಹಿಂಗಿಸುವುದು ತಿನ್ನುವ ಆಹಾರದ ಶೈಲಿಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ತಿನ್ನುವ ಆ ಆಹಾರವು ನಿಷ್ಠೆ ಮತ್ತು ಪ್ರಾಮಾಣಿಕವಾಗಿ ಗಳಿಸಿದ್ದಾಗಿರಬೇಕು. ಶ್ರಮಜೀವಿಯೊಬ್ಬ ಬೆವರು ಸುರಿಸಿ ದುಡಿದು ಬಂದ ಸಂಪಾದನೆಯಲ್ಲಿ ರಾಗಿಯ ಮುದ್ದೆಯನ್ನೋ, ಗಂಜಿಯನ್ನೋ ತಿನ್ನುತ್ತಾ ಜೀವನ ಸಾಗಿಸುತ್ತಾನೆ. ಎಲ್ಲಿಂದಲೋ ಸಿಹಿ ತಿನಿಸೊಂದನ್ನು ತಂದು ಆತನ ಮುಂದೆ ಕುಳಿತು ತಿನ್ನುವ ಕಾಗೆಯನ್ನು ಕಂಡ ಆತನ ಮನಸ್ಸು ಚಂಚಲಗೊಳ್ಳದೆ ಸ್ಥಿರವಾಗಿ ಹಾಗೇ ಇರಬೇಕು. ಅದನ್ನು ಬಿಟ್ಟು ಆ ಬಗೆಯ ಭಕ್ಷ್ಯ ತನ್ನ ಪಾಲಿಗೆ ಇಲ್ಲ ಎಂದು ಅಸೂಯೆ ಪಟ್ಟರೆ ಅದು ಹೀನ. ಆ ಬಗೆಯ ಆತನ ಭಾವನೆ ಅವನ ಸ್ವತಂತ್ರ ಬದುಕಿಗೆ ಪೆಟ್ಟಾಗಿ ಪರಿಣಮಿಸಿ ಹಂಗಿನ ಕೂಳಿಗೆ ಗುರಿ ಮಾಡುತ್ತದೆ. ಬಯಕೆಗಳ ಕೂಪದಲ್ಲಿ ಬಿದ್ದ ಆ ವ್ಯಕ್ತಿ ಆತ್ಮ ಗೌರವವನ್ನು ಕಳೆದುಕೊಳ್ಳಬೇಕಾಗುತ್ತದೆ. ಹಾಗಾಗಿ ಅಸೂಯೆಯಿಂದ ಮುಕ್ತನಾಗುವಂತೆ ತಿಳಿಸುತ್ತಾರೆ.

ಸ್ವಾವಲಂಬಿಯಾದ, ಪ್ರಮಾಣಿಕನಾದ ವ್ಯಕ್ತಿ ಕೇವಲ ತನ್ನ ಹಸಿವನ್ನಷ್ಟೇ ತಣಿಸಲು ನೋಡುತ್ತಾನೆ ಅದು ಬಿಟ್ಟು ತನ್ನ ಆಹಾರ ಉತ್ತಮವಾದದ್ದು. ಕಳೆಪೆಯಾದದ್ದು ಎಂಬ ಬೇಧಭಾವಗಳನ್ನು ಮಾಡುವುದಿಲ್ಲ. ಅದನ್ನೇ ಸರ್ವಜ್ಞ

ಹಂಗಿನಾ ಹಾಲಿನಿಂದ ಅಂಬಲಿಯ ತಿಳಿಲೇಸು
ಭಂಗಬಟ್ಟುಂಬ ಬಿಸಿಯಿಂದ
ತಿರಿವರ ಸಂಗವೇ ಲೇಸು ಸರ್ವಜ್ಞ

ಇನ್ನೊಬ್ಬರು ಕೊಡುವ ಮೃಷ್ಟಾನವನ್ನು ತಿಂದು ವಿಶ್ವಾಸ ಕಳೆದುಕೊಳ್ಳುವ ಬದಲು ಭಿಕ್ಷೆ ಮಾಡುವ ಕಾಯಕದ ಮೂಲಕವಾದರೂ ಬಂದ ಆಹಾರವನ್ನು ಉಂಡು ಒಡಲ ಹಸಿವನ್ನು ನೀಗುವುದೇ ಧರ್ಮ ಎನ್ನುತ್ತಾನೆ ಸರ್ವಜ್ಞ. ಎಂತಹ ಇಕ್ಕಟ್ಟಿನ ಸ್ಥಿತಿಯಲ್ಲೂ ಆತ್ಮ ಗೌರವವನ್ನು ಬಿಡಬೇಡ ಎಂಬುದೇ ಡಿ.ವಿ.ಜಿ.ರವರ ಉಪದೇಶ.

ಧಾರುಣಿಯ ನಡುಗೆಯಲಿ ಮೇರುವಿನ ಗುರಿಯಿರಲಿ।
ಮೇರುವನು ಮರೆತಂದೆ ನಾರರಕೆ ದಾರಿ
ದೂರವಾದೊಡದೇನು? ಕಾಲು ಕುಂಟಿರಲೇನು?
ಊರನೆನಪೇ ಬಲವೋ-ಮಂಕುತಿಮ್ಮ

ಜೀವನದ ಬೆಲೆಯನ್ನು ತಿಳಿಯಬೇಕು ನಾವು. ಮಾನವೀಯ ಮೌಲ್ಯಗಳನ್ನು ಅರಿಯಬೇಕು. "ಜೀವನದ ದೀರ್ಘವಾದ ಪ್ರಯಾಣದಲ್ಲಿ ಮೇರುಪರ್ವತದಷ್ಟು ಎತ್ತರವಾದ ಗುರಿಯನ್ನು ಇಟ್ಟುಕೊಳ್ಳಬೇಕು. ದಿನದಿನವೂ ಕ್ಷಣಕ್ಷಣವೂ ಆ ಗುರಿಯ ನೆನಪು ನಮ್ಮಲ್ಲಿ ಜಾಗೃತವಾಗಿರಬೇಕು. ಅದಲ್ಲದೆ ಗುರಿಯನ್ನು ಮರೆತದ್ದೆ ಆದರೆ ನಾವು ನರಕದ ಹಾದಿ ಹಿಡಿದಂತೆ, ಸೋಲಿನ ಬಲೆಗೆ ಬಿದ್ದಂತೆ. ಕನಸು ಮನಸ್ಸಲ್ಲೆಲ್ಲ ಆ ಎತ್ತರದ ಗುರಿಯ ಬಗ್ಗೆಯೇ ಧ್ಯಾನಿಸುತ್ತಿದ್ದರೆ ಯಶಸ್ಸು ನಮ್ಮನ್ನು ಹಿಂಬಾಲಿಸುತ್ತದೆ. ಉನ್ನತವಾದ ಗುರಿಯನ್ನು ಇಟ್ಟುಕೊಂಡು ಕಾರ್ಯೋನ್ಮುಖವಾದರೆ ಆ ಕೆಲಸ ಅರ್ಧಮುಗಿದಂತೆಯೇ ಸರಿ. ಅದಕ್ಕೆ ಹಿರಿಯರು ಮುಂದೆ ಗುರಿಯಿರಬೇಕು ಹಿಂದೆ ಗುರು ಇರಬೇಕು ಎಂದಿದ್ದಾರೆ."[೧]

ಕೇವಲ ಹದಿಮೂರು ವರ್ಷದ ಶಾಲಾ ಬಾಲಕಿ ಮೌಂಟ್ ಎವರೆಸ್ಟ್ ಶಿಖರವನ್ನು ಹತ್ತಿದಳು. ಅವಳಿಗೆ ಪ್ರೇರಣೆ ಅವಳಲ್ಲಿದ್ದ ಆತ್ಮವಿಶ್ವಾಸ ಹಾಗೂ ಮುಟ್ಟಬೇಕೆಂಬ ದೃಢವಾದ ಗುರಿ. ಜೀವನದಲ್ಲಿ ಇಂತಹ ಎತ್ತರವಾದಂತಹ ಗುರಿಗಳನು ಇಟ್ಟುಕೊಳ್ಳಬೇಕು. ನಾನು ಮಾಡುತ್ತೇನೆ ಎಂದು ಬೀಗುವವನು ಆ ಬೀಗುವಿಕೆಯಲ್ಲೇ ಕಾಲಕಳೆದು ಬಿಡುತ್ತಾನೆ. ಅದು ಅವನನ್ನು ಅಹಂಕಾರಕ್ಕೆ ತಳ್ಳಿ ಅವನಲ್ಲಿ ಬೇಜವಾಬ್ದಾರಿತನವನ್ನು ಹುಟ್ಟಿಸಿಬಿಡುತ್ತದೆ. ಯಾರಿಗೂ ಹೇಳದೆ ಮನದೊಳಗೆ ಅಚಲವಾದ ಛಲವಿದ್ದು ಎತ್ತರವಾದ ಗುರಿಯಿದ್ದು, ಅದನ್ನು ಮುಟ್ಟುವ ಮನಸ್ಸಿದ್ದರೆ ಗುರಿ ತಲುಪೇ ತೀರುತ್ತಾನೆ. ನಮ್ಮ ಮನಸ್ಸು ಸದಾ ಜಾಗೃತವಾಗಿದ್ದು ನಮ್ಮನ್ನು ಗುರಿ ಎಡೆಗೇ ಎಚ್ಚರಿಸುತ್ತಿದ್ದರೆ ಮಾತ್ರ ಗುರಿ ಮುಟ್ಟಲು ಸಾಧ್ಯ. ತೊಡಕುಗಳಿಗೆ ಮನಕೊಡಬಾರದು. ಮನುಷ್ಯ ತನ್ನ ಬಗೆಗೆ ಎಂದೂ ಕೀಳರಿಮೆಯನ್ನು ಹೊಂದಬಾರದು.

ಪರಿಪೋಷಿಸದೆ ನಿನ್ನೊಡಲ ದಾರಿಮರದ ಫಲ।
ಕಿರುಜಾಜಿ ಸೋಗಕುಡದೆ। ಮಂಕುತಿಮ್ಮ॥

೧. ಮಂಕುತಿಮ್ಮನ ಕಗ್ಗ-ಜೀವನ ದೀವಿಗೆ-ಎಸ್. ಶ್ರೀನಿವಾಸಶೆಟ್ಟಿ

ವಿಧಿ ಎಲ್ಲರಿಗೂ ಒಂದೊಂದು ಕರ್ತವ್ಯವನ್ನು ನಿಯಮಿಸಿಯೇ ಇರುತ್ತಾನೆ. ಜಗದ ಗುಡಿಗೆ ಬಂದ ಮಾನವ ತನ್ನ ಕೆಲಸವನ್ನು ಮುಗಿಸಿಯೇ ಹೋಗಬೇಕು. ಅದು ಸಣ್ಣ ಕೆಲಸವೇ ಇರಲಿ ನಿನ್ನ ಪಾಲಿನದು ಅಂದಮೇಲೆ ಎದುರಾಡದೆ, ಅನ್ಯ ಭಾವಿಸದೆ ಮಾಡಬೇಕಾದ್ದು ನಿನ್ನ ಧರ್ಮ ಎನ್ನುತ್ತಾರೆ. ಡಿ.ವಿ.ಜಿ. ಕಟ್ಟೆ, ಕೆರೆಗಳು ದಿಢೀರನೆ ತುಂಬಿ ಹೋಗವು ಹನಿ ಹನಿ ನೀರು ಸೇರಿಯೇ ಅವು ತುಂಬಿ ಹರಿಯುತ್ತವೆ. ಒಂದೊಂದು ಕಾಳಿನ ಧಾನ್ಯ ಸೇರಿ ರಾಶಿಯಾಗುತ್ತದೆ. ಇಲ್ಲಿ ಡಿ.ವಿ.ಜಿ. ಯವರೂ ಅದನ್ನೇ ಹೇಳುವುದು ಜಗತ್ತಿನ ಊಳಿಗ (ಸೇವೆ) ಕ್ಕೆ ನಿನ್ನ ಸೇವೆಯೂ ಅಗತ್ಯ. ನಿನ್ನ ಸೇವೆ ಇಲ್ಲವಾದರೆ ಕೆಲಸ ಅರೆಯಾಗುತ್ತದೆ.

ಬಗೆ ಬಗೆಯ ಸುಖಗಳ ನಡುವೆ ಯಾವುದೋ ಒಂದು ಅರೆಯಾದಾಗ ಏನೂ ಅನಿಸದಿರಬಹುದು. ಒಂದನ್ನು ಮತ್ತೊಂದರ ಮೂಲಕ ತುಂಬಿಕೊಳ್ಳಬಹುದು. ಯಾವ ಸುಖವೂ ಇಲ್ಲದಾಗ ಮನಸ್ಸು ಜಿಗುಪ್ಸೆಯನ್ನು ಹೊಂದುತ್ತದೆ. ಇಲ್ಲೂ ಅಂತೆಯೇ ದಾರಿಯಲ್ಲಿ ಬೆಳೆದ ಮರದಲ್ಲಿ ಉತ್ಕೃಷ್ಟವಾದ, ಯಥೇಚ್ಛವಾದ ಹಣ್ಣುಗಳು ಸಿಗದಿರಬಹುದು. ಆದರೆ ಹಸಿದು ಬಾಯಾರಿ ಬಂದವನಿಗೆ ತಣಿವಷ್ಟಾದರೂ ಹಣ್ಣು ನೀಡಿತು. ಅಷ್ಟಿದ್ದರೆ ಸಾಕು ಮರಕ್ಕೆ ಮುಕ್ತಿ ದೊರೆತಂತೆ. ಅದರ ಬದುಕೂ ಸಾರ್ಥಕವಾದಂತೆ ಜಾಜಿಯ ಹೂವು ಗಾತ್ರದಲ್ಲಿ ಎಷ್ಟೇ ಚಿಕ್ಕದಾದರೂ ಅದರಿಂದ ಹೊರಡುವ ಸುಗಂಧ ಮನನೀಯವಾದದ್ದು. ಎಲ್ಲೋ ಇರುವ ಆ ಹೂವು ಬಹುದೂರದವರೆಗೆ ಕಂಪನ್ನು ಬೀರಿ ರೋಮಾಂಚನಗೊಳಿಸಿ ತನ್ನೆಡೆಗೆ ಆಕರ್ಷಿಸುತ್ತದೆ.

ಇಂತೆಯೇ ನೀನೂ ಕೂಡ. ನಿಂದೆ, ತಾತ್ಸಾರಗಳಿಗೆ ಮನಕೊಡದೆ ನಿನ್ನತನವನ್ನು ನೀನು ಮರೆದರೆ ಜಾಜಿಯ ಹೂವಂತೆ ಜನರೇ ನಿನ್ನನ್ನು ಹುಡುಕಿಬಂದು ಸೇರುತ್ತಾರೆ. ಹಾಗಾಗಿ ನಿನ್ನ ಪ್ರಯತ್ನವನ್ನು ಮಾಡು. ಕರ್ತವ್ಯ ಭ್ರಷ್ಟನಾಗಬೇಡ. ಕರ್ತವ್ಯ ಮಾಡಲು ಯಾವುದೇ ಸಂದರ್ಭದಲ್ಲೂ ಹಿಂಜರಿಯಬೇಡ ಇದೇ ಡಿವಿಜಿರವರ ತತ್ವಸಾರ.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ।
ಎಲ್ಲರೊಳಗೊಂದಾಗು ಮಂಕುತಿಮ್ಮ॥

ಈ ಚೌಪದಿ ಮೂಲಕ ಡಿ.ವಿ.ಜಿ.ರವರು ಜೀವನದ ಸ್ವಷ್ಟ ಚಿತ್ರಣವನ್ನು ಬಾಳಿನ ರೀತಿಯನ್ನು ಕಟ್ಟಿಕೊಡುತ್ತಾರೆ. ಆತನ ಜೀವನ (ಮನುಷ್ಯ)ದ ಗುರಿಯೇ ಪರೋಪಕಾರ. ಅವನ ಪರೋಪಕಾರ ಗುಣವೇ ಜೀವನ ಧರ್ಮ "ಪರೋಪಕಾರಾರ್ಥಂ ಇದಂ ಶರೀರಂ" ಎಂಬ ಮಾತು ತ್ಯಾಗಗುಣಕ್ಕೆ ಮಾನ್ಯತೆ ನೀಡುತ್ತದೆ ಎಂತಹದ್ದೇ ಕಠಿಣ ಸ್ಥಿತಿಯಲ್ಲೂ ಜೀವನದ ಧ್ಯೇಯವನ್ನು ತ್ಯಾಗವನ್ನು ಮರೆಯದೆ ಆ ವಿಚಾರಗಳಲ್ಲಿ ಕಾರ್ಯ ನಿರತನಾಗಿರು.

ನಿನ್ನ ಸಾಮರ್ಥ್ಯವನ್ನೇ ಅನುಮಾನಿಸಿ ಕೈಚೆಲ್ಲಿ ಕೂರಬೇಡ ದೊಡ್ಡ ಸಾಧನೆ ನಿನ್ನಿಂದಾಗದಿದ್ದರೆ ಕಡೇಪಕ್ಷ ನಿನ್ನ ಮನಸ್ಸಾಕ್ಷಿಗಾದರೂ ದುಡಿ ಎನ್ನುತ್ತಾರೆ. ಉತ್ತಮವಾದ ದೃಷ್ಟಾಂತಗಳನ್ನು ಕೊಡುವ ಡಿವಿಜಿ ಸಾಧ್ಯವಾದರೆ ಬೆಟ್ಟದ ಕೆಳಗಿನ ಹುಲ್ಲಿನಂತೆ ಹಸಿರಾಗಿ ಜನರನ್ನು ಆಕರ್ಷಿಸುತ್ತ, ದನ ಕರುಗಳಿಗೆ ಹಸಿವನ್ನು ನೀಗಿಸುತ್ತ, ಅದಕ್ಕೂ ಮಿಗಿಲಾಗಿ ಬೆಟ್ಟದ ಮೇಲಿಂದ ಬಿದ್ದ ಜರನ್ನು ಆಪತ್ತಿನಿಂದ ರಕ್ಷಿಸುವ ಸೇವೆಯನ್ನು ಮಾಡು ಎನ್ನುತ್ತಾರೆ. ಮನೆಯಲ್ಲಿ ಉದ್ಭವಿಸುವ ಎಲ್ಲ ಸಮಸ್ಯೆಗಳನ್ನು ತಿಳಿಗೊಳಿಸು ಮನೆಯವರ ನೋವಿಗೆ ಮಿಡಿವ ಪ್ರಾಣ ಮಿತ್ರನಾಗು. ಮಲ್ಲಿಗೆ ಹೂವು ಮೃತ್ವದ ಜೊತೆಗೆ ಕಂಪನ್ನು ನೀಡುವಂತೆ ನೀನೂ ಸಹ ಮೃದು ನುಡಿಗಳ ಮೂಲಕ ನಿನ್ನವರನ್ನು ಸಂತೈಸು ಎನ್ನುತ್ತಾರೆ.

ಸಂಕಷ್ಟದಲ್ಲಿ ದಿನ ದೂಡುತ್ತಿರುವ ನಿನ್ನ ಪರಿಸರದ ಜನರನ್ನು ಸಂತೈಸು. ಅವರ ಕಹಿ ನೋವುಗಳಿಗೆ ನಿತ್ಯ ಸಾಂತ್ವನದ ಮಾತುಗಳ ಮೂಲಕ ಪರಿಹಾರವನ್ನು ಸೂಚಿಸು ಎನ್ನುತ್ತಾರೆ. ನಿನ್ನ ಆ ಸಾಂತ್ವನದ ಮಾತುಗಳು ನೊಂದವರ ಮನಸ್ಸಿಗೆ ಬೆಲ್ಲ ಸಕ್ಕರೆಯ ಸಿಹಿಯನ್ನು ಉಣಿಸಿದಂತಿರಲಿ. ಅವರ ದೈನ್ಯತೆಯನ್ನು ನೋಡಿ ಮರುಕವನ್ನು ಪಡು. ಕನಸಿನಲ್ಲೂ ಅವರನ್ನು ಅಪಹಾಸ್ಯಗೈಯ್ಯಬೇಡ. ಶ್ರೀಮಂತ ಬಡವ ಎಂಬ ಭೇದವಿಲ್ಲದೆ, ಯಾವುದೇ ತಾರತಮ್ಯಕ್ಕೆ ಎಡೆಗೊಡದೆ ಅವರ ನಡುವಿನ ಒಬ್ಬ ವ್ಯಕ್ತಿಯಾಗು ಎಂಬ ಆಶಯವನ್ನು ಡಿವಿಜಿ ವ್ಯಕ್ತಪಡಿಸಿದ್ದಾರೆ. ನಮ್ಮ ಗಣ್ಯವ್ಯಕ್ತಿಗಳು ನೆರೆ, ಪ್ರವಾಹ, ಬರಗಾಲಗಳು ಬಂದಾಗ ಜನರ ಸಂಕಷ್ಟಕ್ಕೆ ಮಿಡಿವ ನೆಪವೊಡ್ಡಿ ಪರಿಹಾರ ರೂಪವಾಗಿ ಅವರ ತೆರಿಗೆ ಹಣವನ್ನು ಅವರಿಗೇ ಕೊಟ್ಟು ಅವರನ್ನು ಸುಧಾರಿಸುವ ಭರವಸೆ ನೀಡಿ ಕಾಲುಕೀಳುತ್ತಾರೆ. ಇನ್ನೆಷ್ಟು ವರ್ಷ ಕಳೆದರೂ ಮತ್ತೆ ಅವರಿಗೆ ಸಂಕಟದಲ್ಲಿರುವ ಜನರು ನೆನಪಿಗೇ ಬರುವುದಿಲ್ಲ. ಇದು ದೀನ ದುರ್ಬಲರನ್ನು ಸಂತೈಸುವ ಮಾರ್ಗವಲ್ಲ.

ನಾವು ಮಾಡುವ ಜನ ಸೇವೆ ಎಂಬುದು ಮನಃಪೂರಕವಾಗಿರಬೇಕು. "ಜೀವನದ ಪ್ರಯಾಣದಲ್ಲಿ ವಿಧಿರಾಯ ಆಗೊಮ್ಮೆ-ಈಗೊಮ್ಮೆ ಕಷ್ಟದ ಮಳೆಸುರಿಸುವುದಂತೂ ಖಂಡಿತಾ. ಅದಕ್ಕೆ ಶಿಥಿಲಗೊಳ್ಳದೆ, ಕರಗದೆ, ಶಿಲೆಯಂತೆ ಎದೆಯನ್ನು ಗಟ್ಟಿಮಾಡಿಕೊಂಡು ಎದುರಿಸಬೇಕು ಎಂದು ತಿಮ್ಮಗುರು ಹೇಳುತ್ತಾರೆ. ಆದರೆ ದೀನದುರ್ಬಲರ ಪಾಲಿಗೆ ಹೃದಯ ಕಲ್ಲಾಗದೆ ಹೂವಿನಂತೆ ಮೃದುವಾಗಬೇಕು. ಅವರ ಪಾಲಿಗೆ ಸಿಹಿಯಾದ, ಭಕ್ಷ್ಯ ಭೋಜ್ಯ ಎಲ್ಲವೂ ಆದ ಬೆಲ್ಲದಂತೆಯೋ ಸಕ್ಕರೆಯಂತೆಯೋ ಸವಿಯಾಗಬೇಕು. ಅವರ ನೋವು ನಲಿವುಗಳಿಗೆ ಸ್ಪಂದಿಸಬೇಕು. ಸಿರಿವಂತಿಕೆಯಿಂದ, ಅಹಂನಿಂದ ಮೆರೆಯದೆ, ಬಡವ ಬಲ್ಲಿದರಲ್ಲಿ ಭೇದಮಾಡದೆ ಎಲ್ಲರೊಂದಿಗೆ ಒಂದಾಗಿ ಬೆರೆಯಬೇಕು. ಸರಳ ಜೀವನವನ್ನು ನಮ್ಮದಾಗಿಸಿಕೊಳ್ಳಬೇಕು ಎಂಬುದೇ ಡಿವಿಜಿರವರ ಅಂತರಂಗದ ಬಯಕೆ."[೧]

ಮೈಮೆ ಕಾಂಬೊಡೆ ನಿನಗೆ ಸಂಸ್ಕಾರವಿರಬೇಕು

೧. ಮಂ.ತಿ.ಕ. -ಜೀವನ ದೀವಿಗೆ ಎಸ್.ಶ್ರೀನಿವಾಸ ಶೆಟ್ಟಿ ಪು. ೭೮೯.

ತಾಮಸಿಗೆ ವರವೆಲ್ಲಿ? ಮಂಕುತಿಮ್ಮ॥

ಬದುಕಿನಲ್ಲಿ ನಂಬಿಕೆ ಮುಖ್ಯ. ನಂಬಿಕೆಟ್ಟವರಿಲ್ಲ ಎನ್ನುತ್ತಾರೆ. ದೈವದ ಮೇಲೆ ಭಾರಹಾಕಿ ಗುರಿಯ ಕಡೆಗೆ ಸಾಗಬೇಕು. ಮನುಷ್ಯ ಮಾಡುವ ಒಳ್ಳೆಯ ಕಾರ್ಯಗಳನ್ನು ಕಂಡ ದೇವರು ಆತನ ಭಕ್ತಿಗೆ ಒಲಿದು ಅವನನ್ನು ಸಂಧಿಸಬಹುದು. ಆತನ ರೂಪ ಹೀಗೆ ಇದೆ ಎಂದು ಹೇಳಲಾಗದು. ಆತ ಬಂದಿರುವ ಬಗೆ ಅಂದರೆ ವೇಷ ಯಾವುದೇ ಇರಬಹುದು, ನಿನ್ನನ್ನು ಕಾಣುವುದಕ್ಕಾಗಿ ಬಂದ ಆ ಕರುಣಾಮಯನನ್ನು ಕಾಣಲು ನಿನಗೆ ಆತ್ಮ ಸಾಕ್ಷಾತ್ಕಾರ ಇರಬೇಕು. ದೇವರ ಮನಸ್ಸನ್ನು ಅರಿಯುವ ಸಂಸ್ಕಾರವನ್ನು ಅರಿತವನಾಗಿರಬೇಕು. ದೇವರಲ್ಲಿ ನಿಷ್ಠೆಯುಳ್ಳ ಪ್ರಮಾಣಿಕನಿಗೆ ದೇವರ ಅನುಗ್ರಹ ತಾನಾಗಿಯೇ ಲಭಿಸುತ್ತದೆ. ದೇವರೇ ಅವನನ್ನು ಹುಡುಕಿ ಬರುತ್ತಾನೆ. ಅದೇ ದೇವರು ಡಂಭಾಚಾರಕ್ಕೆ ಎಂದೂ ಒಲಿಯನು. ಎಷ್ಟೇ ಕಾದರೂ ಡಂಭಾಚಾರಿಗಳ ಮನಸ್ಸನ್ನು ಆತ ಒಪ್ಪುವುದಿಲ್ಲ. ತಾಮಸ ಪ್ರವೃತ್ತಿಯವರನ್ನು ದೇವರೂ ದೂಷಿಸುತ್ತಾನೆ ಎಂಬ ಎಚ್ಚರಿಕೆ ಕೊಟ್ಟಿದ್ದಾರೆ.

"ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ"

ಹೌದು ಜಾಗರೀಕರಣದ ಪ್ರಭಾವಕ್ಕೊಳಗಾದ ಜನ ಕೇವಲ ಹಣದ ಗಳಿಕೆಯ ಮಾರ್ಗವನ್ನಷ್ಟೇ ಚಿಂತಿಸುತ್ತಾರೆ. ದೇವರು ಧರ್ಮದ ಬಗೆಗೆ ಕಾಳಜಿಯೇ ಇಲ್ಲ, ಅಂದು ಇಂತವರನ್ನು ನಮ್ಮ ಗುಹೇಶ್ವರ ಮೆಚ್ಚ ಎನ್ನುವ ಅಲ್ಲಮ ಪ್ರಭುವಿನ ಮಾತನ್ನು ಡಿ.ವಿ.ಜಿ. ಅನುಮೋದಿಸಿ "ತಾಮಸಿಗೆ ವರವೆಲ್ಲಿ" ಎನ್ನುತ್ತಾರೆ. ಜನರ ಮೆಚ್ಚುಗೆಗಾಗಿ ಆಡಂಬರದ ಪೂಜೆ ಮಾಡುವ ಜನರನ್ನು ಉದ್ದೇಶಿಸಿ ಅಂತಹ ಜನರಿಗೆ ದೇವರ ವರವೂ ಸಿಗದು ಅವರು ದೇವರ ರೂಪವನ್ನು ಅಸ್ಥಿತ್ವವನ್ನು ಕಾಣಲೂ ಆಗದು ಎನ್ನುತ್ತಾರೆ ಗುರು ಡಿವಿಜಿ. ಶ್ರೀರಾಮಚಂದ್ರನನ್ನು ಮನಸ್ಸಿನಲ್ಲೇ ಸಾಕ್ಷಾತ್ಕರಿಸಿಕೊಂಡಿದ್ದ ಅಹಲ್ಯೆ, ಶಬರಿ, ಹನುಂತರಿಗೆ ಶ್ರೀರಾಮಚಂದ್ರನೇ ತನ್ನ ಸ್ವರೂಪವನ್ನು ತೋರಿ ಮಹಿಮೆ ಮೆರೆದ ರಾಮನ ಬರುವಿಕೆಗಾಗಿ ಕಾದು ಕುಳಿತಿದ್ದ ಶಬರಿ ಕ್ಷಣ ಕ್ಷಣಕ್ಕೂ ಆತನ ಧ್ಯಾನದಲ್ಲಿ ಲೀನವಾಗಿ ಹೋಗಿದ್ದಳು. ಅದಕ್ಕೆ ಕಡೆಗೆ ಆಕೆಗೆ ಇವನ ದರ್ಶನವಾಗಿ ಆಕೆ ನೆಮ್ಮದಿಯಿಂದ ತನ್ನ ಅಂತ್ಯವನ್ನು ಕಂಡು ಪಂಚಭೂತಗಳಲ್ಲಿ ಲೀನವಾದಳು. ಅಹಲ್ಯೆಯೂ ಮರು ಹುಟ್ಟನ್ನು ಪಡೆದಳು. ಅವರುಗಳೂ ಸಹ ರಾಮನನ್ನು ಮೊದಲ ನೋಟಕ್ಕೆ ಗುರುತಿಸಿದರು. ನಮ್ಮ ಪರಿಶ್ರಮಕ್ಕೆ ಫಲ ಇಂದೋ ನಾಳೆಯೋ ಸಿಕ್ಕೇ ಸಿಗಬಹುದು ಪರಿಶುದ್ಧ ಮನಸ್ಸು ನಮ್ಮದಾಗಿರಬೇಕೆಂಬುದೇ ಡಿವಿಜಿರವರ ಅನಿಸಿಕೆ.

ಉದರದೈವಕೆ ಜಗದೊಳೆದುರು ದೈವವದೆಲ್ಲಿ?।
ಮೊದಲದರ ಪೂಜೆ, ಮಿಕ್ಕೆಲ್ಲವರಿಂದ॥

ಸರ್ವಜ್ಞ "ಅನ್ನದೇವರ ಮುಂದೆ ಇನ್ನು ದೇವರು ಉಂಟೆ" ಎನ್ನುತ್ತ ಅನ್ನವೇ

ಕುಲಕೋಟಿಗೆ ದೇವರು ಎಂದು ಹೊಗಳುತ್ತಾನೆ. ಅದೇ ತಿಮ್ಮ ಗುರು ಅನ್ನವನ್ನಿಕ್ಕಿ ಹೊಟ್ಟೆದೇವರನ್ನು ತಣಿಸಿ ಎನ್ನುತ್ತಾರೆ. 'ಉದರ ದೈವ'ದ ಪರಿಕಲ್ಪನೆ ಸೊಗಸಾಗಿದೆ. ಇಡೀ ಕುಲಕೋಟಿಯೆಲ್ಲಾ ದುಡಿಯುವುದು ತನ್ನ ಉದರಂಭರಣಕ್ಕಾಗಿ. ಹೊಟ್ಟೆಯ ಹಸಿವೇ ಅವನಿಂದ ಏನೆಲ್ಲಾ ಮಾಡಿಸಿ ಬಿಡುತ್ತದೆ. ಎಂತಹ ಸಭ್ಯನೂ ಹಸಿವು ತಾಳಲಾರದ ಸಂದರ್ಭದಲ್ಲಿ ನಿಯಮಬಾಹಿರ ಕೆಲಸಗಳನ್ನೇ ಮಾಡಿ ಬಿಡುತ್ತಾನೆ. ಅಂತಹ ವಿಶ್ವಾಮಿತ್ರನೇ ಹಸಿವಿನಿಂದ ಕೆಳಜಾತಿಯವನ ಮನೆಯಲ್ಲಿ ನಾಯಿಯನ್ನೇ ತಿಂದ ಎಂದ ಮೇಲೆ ಹಸಿವಿನ ಆ ಬಾಧೆ ಊಹೆಗೂ ಮೀರಿದ್ದು.

ಹೊಟ್ಟೆಯೂಳಿಗಕಾಗಿ ಜನ ಸರ್ವಸ್ವವನ್ನೂ ತ್ಯಾಗ ಮಾಡಿದವರುಂಟು. ಹೊಟ್ಟೆ ತುಂಬಿಸುವ ಪ್ರಮೇಯವಿಲ್ಲದಿದ್ದಲ್ಲಿ ಜನ ಸೋಮಾರಿಗಳಾಗಿ ಎಲ್ಲೆಂದರಲ್ಲಿ ಬಿದ್ದು ಕಾಲಕಳೆಯುತ್ತಿದ್ದರೇನೋ। ಪ್ರತಿಯೊಂದು ಜೀವಿಯ ಕಾರ್ಯ ಚಟುವಟಿಕೆಯ ಮೂಲ ಹೊಟ್ಟೆಯೇ. ಮನುಷ್ಯ ತಿಂದುದನ್ನು ದಹಿಸಿ ಶಕ್ತಿ ನೀಡುವ ಶಕ್ತಿದಾತ ಹೊಟ್ಟೆ.

ನಿದ್ದೆಗಳು ಬಾರವು ಬುದ್ದಿಗಳು ತೋರವು
ಮುದ್ದಿನಾ ಮಾತುಗಳು ರುಚಿಸವು
ಬೋನವಾ ಮುದ್ದೆ ತಪ್ಪಿದರೆ ಸರ್ವಜ್ಞ

ಮನುಷ್ಯನ ಎಲ್ಲ ಕೆಲಸಗಳಿಗೂ ಮೂಲ ಪ್ರೇರಣೆದಾಯಕವಾದದ್ದು ಹೊಟ್ಟೆ. ಮೊದಲ ಪೂಜೆ ವಿನಾಯಕನಿಗೆ ಹೇಗೋ ಹಾಗೆ ನಾವು ಮೊದಲು ಹೊಟ್ಟೆರಾಯನನ್ನು ತಣಿಸದಿದ್ದರೆ ನಮ್ಮ ಮನಸ್ಸಿನ ಏಕಾಗ್ರತೆ ಹರಿದು ಹೋಗುತ್ತದೆ. ಮನಸ್ಸು ಎಲ್ಲೂ ನಿಲ್ಲದೆ ಹರಿದರೆ, ದೇಹ ಶಕ್ತಿಗುಂದಿ, ಕಳೆಗುಂದಿ ನಿತ್ರಾಣಗೊಳ್ಳುತ್ತದೆ. ಮನಸ್ಸಿಗೆ ಹಿತನೀಡುವಂತಹ ಯಾವ ಮಾತುಗಳನು ಜೀವ ಸ್ವೀಕರಿಸುವುದಿಲ್ಲ. ಆದ್ದರಿಂದ ಹಸಿದ ಹೊಟ್ಟೆಗೆ ಉಣಿಸನ್ನು ನೀಡಿದ ನಂತರಕ, ಜ್ಞಾನದ ಹಸಿವನ್ನು ತಣಿಸುವುದು ಒಳಿತು. ಉದರದೈವ ಎಂದು ಅದನ್ನು ಪೋಷಿಸುವ ನೆಪದಲ್ಲಿ ಮಿತಿಮೀರಿ ಎನ್ನುವುದಲ್ಲ ಅದನ್ನು ಒಂದು ಹದದಲ್ಲಿಟ್ಟು ಕಾಯುವುದು ಸೂಕ್ತ.

ಸರ್ವರುಂ ಸಾಧುಗಳೆ, ಸರ್ವರೂ ಬೋಧಕರೆ।
ಜೀವನ ಪರೀಕ್ಷೆ ಬಂದಿದಿರು ನಿಲುವನಕ॥

ಎಲ್ಲರೂ ಉಪದೇಶ ಮಾಡಲಷ್ಟೇ ಅರ್ಹರು. ಆದರೆ ಅದರಂತೇ (ನುಡಿದಂತೆ) ನಡೆಯುವವರು ವಿರಳ. ತಾನೊಬ್ಬ ಸಾಧು, ಸಂತ ಎಂದು ಹೇಳಿಕೊಳ್ಳುತ್ತಾರೆ. ಇತರರ ಭವಿಷ್ಯದ ಬಗ್ಗೆ ಹೇಳುತ್ತ ನಾನೊಬ್ಬ ಸಾಧು, ಸಂತ ಭವಿಷ್ಯ ಬಲ್ಲವ ಎಂದು ಹೇಳುವ ಇವರು ತಾವೇ ಪೇಚಿಗೆ ಸಿಕ್ಕಾಗ ದಿಕ್ಕುಗಾಣದೆ ತೋಳಲಾಡುತ್ತಾರೆ.

ನಮ್ಮ ನಾಡಿನಲ್ಲಿ ಸಾಧು-ಸಂತರು, ಸನ್ಯಾಸಿಗಳು ಬಹಳ ವರ್ಷಗಳಿಂದ ಜನರ

ಮನ್ನಣೆಗೆ ಒಳಗಾದವರು. ಕೆಲವು ಸಾಧು-ಸಂತರು ಸನ್ಯಾಸಿಗಳು ವೇಷಭೂಷಣಗಳಲ್ಲಷ್ಟೇ ಸ್ವಾಮಿಗಳಾಗಿ ಮೆರೆದವರು. ಮತ್ತೆ ಕೆಲವರು ಮಾನಸಿಕವಾಗಿ ಪಕ್ವತೆಯನ್ನು ಹೊಂದಿ ಸಮಾಜವನ್ನು ತಿದ್ದುತ್ತ ಸತ್ಯವನ್ನು ಹುಡುಕಿ ಹೊರಟ ಮಹಾತ್ಮರು. ವೇಷ ಭೂಷಣಗಳಲ್ಲಷ್ಟೇ ಸನ್ಯಾಸಿಗಳಾದವರು ಕೇವಲ ಹಣದ ಆಮಿಷಕ್ಕೆ ಬಿದ್ದು ಜನರನ್ನು ಮೋಸದ ಬಲೆಯಲ್ಲಿ ಕೆಡವಿ ಸ್ವಾರ್ಥವನ್ನು ಈಡೇರಿಸಿಕೊಂಡವರು. ಇಂತಹ ಬೂಟಾಟಿಕೆಯ ಸಾಧುಗಳು ಇಂದಿಗೂ ನಮ್ಮ ಜನರ ಮಧ್ಯೆ ನೋಡಲು ಸಿಗುತ್ತಾರೆ. ವೇಷ ಮರೆಸಿಕೊಂಡ ನಿತ್ಯಾನಂದನಂತಹ ಭ್ರಷ್ಟರು ಸಮಾಜದ ಶಾಂತಿಗೆ ಕಾರಣವಾಗುವ ಬದಲು ಸಮಾಜದಲ್ಲಿ ಶಾಂತಿ ಕಾಪಾಡಲು ಸೊಲ್ಲೆತ್ತಿಕೊಡುತ್ತಾರೆ. ಜ್ಯೋತಿಷಿಯು ತಾನೇ ದೇವರು ಎಲ್ಲ ಬಲ್ಲವ ಎಂದು ಪೊಳ್ಳು ಭರವಸೆಯನ್ನು ಜನರಲ್ಲಿ ಬಿತ್ತಿ, ನಂತರ ಅದೇ ಸಮಸ್ಯೆಗಳಲ್ಲಿ ತಾನೇ ಸಿಕ್ಕಿ ತೊಳಲುವಾಗ ದಿಕ್ಕು ಕಾಣದೆ ತಾನೇ ದೇವರ ಮೊರೆ ಹೋಗಿ ಸಂಕಟಪಡುತ್ತಾನೆ. ಬೇರೆಯವರ ನೋವು-ಸಂಕಟಗಳ ಜೊತೆ ಆಟವಾಡುವ ಆತನಿಗೆ ತಿಳಿದಿರಬೇಕು. ತನ್ನಿಂದ ಪರರ ಸಂಕಟಗಳನ್ನು ಪರಿಹರಿಸಲಾಗದು ಎಂದು ಅದಕ್ಕೆ ಡಿವಿಜಿ ಹೇಳುವುದು "ದೇವರೆ ಗತಿಯಾಗ" ಎಂದು.

ಅದಕ್ಕೆ ಡಿವಿಜಿ ಇತರರ ಅನ್ನವನ್ನು ಕಸಿಯುವ ಇಂತಹ ಬೂಟಾಡಿಕೆಯ ವೃತ್ತಿಯನ್ನು ಮಾಡಬೇಡ, ಇತರರ ನಿನ್ನ ಕಾರ್ಯವನ್ನು ನಿರ್ವ್ಯಾಮೋಹದಿಂದ ಮಾಡು ಎನ್ನುತ್ತಾರೆ.

ಕಾವಿರದೆ ಪಕ್ವವಹ ಜೀವವಿಳೆಯೊಳಗಿರದು।
ನೋವೆಲ್ಲ ಪಾವಕವೋ-ಮಂಕುತಿಮ್ಮ

ಜೀವನವೇ ಅನುಭವಗಳ ಶಾಲೆ. ಈ ಜೀವನ ದುರ್ಗಮವಾದ ಕೋಟೆ ಭೇದಿಸಿ ಹೊರಬರುವುದು ಬಹಳ ಕಷ್ಟ. ದಾರಿಯಲ್ಲಿ ಕಠಿಣವಾದ ಅನುಭವಗಳಾಗುತ್ತವೆ. ಔಪಚಾರಿಕ ಶಿಕ್ಷಣ ಪಡೆದವರಿಗಿಂತಲೂ ಜೀವನದ ಶಾಲೆಯಲ್ಲಿ ಅನುಭವಗಳಿಂದ ಪಕ್ವಗೊಂಡ ವ್ಯಕ್ತಿಯು ತಿಳುವಳಿಕೆಯಲ್ಲಿ ಉತ್ತಮನಾಗಿರುತ್ತಾನೆ. ಒಬ್ಬೊಬ್ಬರ ಅನುಭವಳೂ ಭಿನ್ನ. ನೋಯದೆ, ಬೇಗೆಯಲ್ಲಿ ಬೇಯದೆ, ತನ್ನನ್ನು ಅರ್ಪಿಸಿಕೊಳ್ಳದೆ ಇರುವ ಯಾವ ಜೀವಕ್ಕೂ ಲೇಸು ಲಭಿಸದು. ಉಚಿತವಾದ ಪಕ್ವತೆ ಎಂಬುದು ಯಾರಿಗೂ ಲಭಿಸದು. "ಕರ್ಮಕ್ಕೆ ತಕ್ಕ ಫಲ" ದೊರೆಯುತ್ತದೆ. ಆತನಿಗೆ ನೋವಾಗಬಹುದಾದರೂ ಆತನು ಪಡೆದ ಸತ್ ಕೀರ್ತಿ, ಪಕ್ವತೆಗಳ ಮುಂದೆ ಆ ನೋವುಗಳು ಮಾಯವಾಗುತ್ತವೆ.

ದಾರಿಯಲ್ಲಿ ಬಿದ್ದಿದ್ದ ಒಂದು ಕಲ್ಲನ್ನು ತಂದ ಶಿಲ್ಪಿ ಅದನ್ನು ಸುಂದರವಾಗಿ ಕೆತ್ತಿ ದಾರಿಯಬದಿಯಲ್ಲಿ ಇಟ್ಟರೆ ದಾರಿಹೋಕರು ಅದಕ್ಕೆ ನಮಸ್ಕರಿಸುತ್ತಾರೆ. ಹಿಂದೆ ಅದೇ ದಾರಿಹೋಕರು ಆ ಕಲ್ಲನ್ನು ತುಳಿದುದ್ದುಂಟು ಇಲ್ಲಿ ಕಲ್ಲು ಉಳಿಪೆಟ್ಟು ತಿಂದೆ ಎಂದು ಚಿಂತಿಸುವ ಹಾಗಿಲ್ಲ. ತನಗೆ ಮಾನ್ಯತೆ ಸಿಕ್ಕಿತೆನ್ನುತ್ತದೆ. ಬಡಗಿಯೊಬ್ಬ ಮರದ ತುಂಡನ್ನು ಕೆತ್ತಿ, ಒಂದು ಹದಕ್ಕೆ ತರಬೇಕಾದಲ್ಲಿ ಮರಕ್ಕೆ ನೋವಾದರೂ ಅಂತಿಮ ಹಂತಕ್ಕೆ ಬರುವ ವೇಳೆಗೆ ಆ ಮರದ ತುಂಡನ್ನು ಕಡೆದು ಶಿಲ್ಪವಾಗಿಸಿದ ಆ ಶಿಲ್ಪಿಗೆ ಆ ಮರ ಕೃತಜ್ಞತೆಯನ್ನು

ಅರ್ಪಿಸುತ್ತದೆ. ಪ್ರತಿಯೊಬ್ಬ ಮಹಾನ್ ವ್ಯಕ್ತಿಗಳು ಕಹಿ ಅನುಭವಗಳನ್ನು ಉಂಡವರೇ ತಮಗಾದ ಅನುಭವಗಳನ್ನು ಸಕಾರಾತ್ಮಕವಾಗಿ ಬಗೆದು ಚಿಂತಿಸಿ ಕಡೆಗೆ ವಿಭಿನ್ನ ಮಾರ್ಗಗಳಲ್ಲಿ ನಡೆದು ಸಮಾಜದ ಅಭಿವೃದ್ಧಿಗೆ ಶ್ರಮಿಸಿದವರೆ. ಆ ಕಾರಣಕ್ಕೆ ಅಂಬೇಡ್ಕರ್ ಮಹಾನ್ ಮಾನವತಾವಾದಿಯಾದರು. ಅವರ ಅನುಭವಗಳೇ ಅವರನ್ನು ತಿದ್ದಿ ತೀಡಿ ರೂಪಿಸಿದವು. ಜೀವನದಲ್ಲಿ ಎದುರಾದ ನೋವು, ಅವಮಾನ, ಸಂಕಟ, ಇವುಗಳೇ ನಮ್ಮ ಗೆಲುವಿಗೆ ಉತ್ತಮಿಕೆಗೆ ಸ್ಫೂರ್ತಿಯ ಚಿಲುಮೆಯಾಗಬೇಕು ಇದನ್ನೇ ಡಿವಿಜಿ "ನೋವೆಲ್ಲ ಪಾವಕವೋ" ಎನ್ನುತ್ತಾರೆ.

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ।
ವಿಹಿತವಾಗಿಹುದದರ ಗತಿ ಸೃಷ್ಟಿವಿದಿಯುಂ॥

ಜಗತ್ತೇ ನಾಟಕರಂಗ ಅಲ್ಲಿ ವಿಧಿಯೇ ಸೂತ್ರಧಾರ. ಆತ ವಹಿಸಿದ ಪಾತ್ರವನ್ನು ಹೊತ್ತು ನಿರ್ವಹಿಸುವ ಪಾತ್ರಧಾರಿಗಳು ನಾವು ಎನ್ನುತ್ತಾರೆ. ಡಿ.ವಿಜಿ. ನಮ್ಮಬದುಕಿನ ನಿರ್ದೇಶಕ ಆತ. ಹುಟ್ಟಿದ ಮನುಷ್ಯನ ಹಣೆ ಬರಹಗಳು ಆತನ ಹುಟ್ಟಿನಿಂದಲೇ ನಿರ್ಧರಿತವಾಗುತ್ತವೆ. ಅದನ್ನು ಬದಲಾಯಿಸಲು, ತಿಳಿಯಲು ಸ್ವತಃ ಹುಟ್ಟಿದ ಆ ವ್ಯಕ್ತಿಗೂ ಮುಂದಿನ ದಿನಗಳಲ್ಲಿ ಅರಿಯಲಾಗದು. ಡಿ.ವಿ.ಜಿ.ರವರಿಗೂ ದೇವರಲ್ಲಿ ಅಪಾರವಾದ ಶ್ರದ್ಧೆ, ನಂಬಿಕೆ ಅದಕ್ಕೆ ಅವರು ಹೇಳುವುದು ಗ್ರಹಗತಿಗಳನ್ನು ಯಾವ ಜ್ಯೋತಿಯೂ ತಿದ್ದಲಾರ. ಇವೆಲ್ಲ ಜನರಿಂದ ದುಡ್ಡು ಗಿಟ್ಟಿಸುವ ತಂತ್ರ. ಇಂತಹ ಬೂಟಾಟಿಕೆಗೆ ಮನ ಕೊಡಬೇಡಿ ಎಂಬುದು ಇವರ ಉಪದೇಶ. ಅವರವರ ಬದುಕಿಗೆ, ಬದುಕಿನ ಸಾರ್ಥಕತೆಗೆ ಅವರವರೇ ಹೊಣೆ. ಅವರವರ ಹೆಗಲಿಗೆ ಬಿದ್ದುದನ್ನು ಅವರವರೇ ನಿರ್ವಹಿಸಬೇಕು. ಆದರೆ ಬದುಕಿನ ಏರುಪೇರುಗಳನ್ನು ಸಹಿಸಿಕೊಳ್ಳುವ ತಾಳ್ಮೆ, ದೊಡ್ಡಗುಣವಿರಬೇಕು. ಅದಕ್ಕೆ ದಾಸರು ಹೇಳುವುದು.

"ತಾಳುವಿಕೆಗಿಂತ ತಪವು ಇಲ್ಲ, ಕೇಳಬಲ್ಲವರಿಗೆ ಹೇಳುವೆನು ಸೊಲ್ಲ" ಎಂದು ನಮ್ಮಲ್ಲಿ ಸಹನೆ, ಸೈರಣೆಗಳಿಲ್ಲದೆ ಇದ್ದರೆ ಬದುಕು ಅನರ್ಥಕ್ಕೆ ಈಡಾಗುತ್ತದೆ. ಆದ್ದರಿಂದ ಸಮಸ್ಯೆಗಳನ್ನು ಎದೆಗೊಟ್ಟು ಎದುರಿಸುವ ಶಕ್ತಿಯನ್ನು, ಸಹನಶೀಲ ಗುಣವನ್ನು ನೀಡೆಂದು ಸೃಷ್ಟಿಕರ್ತನಲ್ಲಿ ಕೇಳಿಕೊಳ್ಳಬೇಕು "ಸಹನೆ ವಜ್ರದ ಕವಚ, ಮಂಕುತಿಮ್ಮ ಮನಸ್ಸಿನ ಉದ್ವೇಗ, ಉದ್ರೇಕಗಳಿಗೆ ಕಡಿವಾಣ ಹಾಕಿ ಎನ್ನುತ್ತಾರೆ.

ವೇದಗಳು ಶಾಸ್ತ್ರಗಳು ಲೋಕನೀತಿಗಳೆಲ್ಲ
ಹಾದಿ ತೋರಲು ನಿಶೆಯೊಳುರಿವ ಪಂಜುಗಳು

ಮನುಷ್ಯನ ನೆಮ್ಮದಿಯುತ ಬದುಕಿಗೆ ಇಂತಹ ವೇದೋಪನಿಷತ್ತುಗಳೇ ಮದ್ದಾಗಿವೆ. ಇವುಗಳನ್ನು ಕೇವಲ ಅಧ್ಯಯನ ಮಾಡಿದರಷ್ಟೇ ಸಾಲದು. ಅವುಗಳನ್ನು ಬದುಕಿಗೆ

ಅಳವಡಿಸಿಕೊಳ್ಳಬೇಕು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು ಅಜ್ಞಾನದ ಕತ್ತಲೆಯಲ್ಲಿರುವವನಿಗೆ ಜ್ಞಾನದ ಬೆಳಕನ್ನು ನೀಡುವಲ್ಲಿ ವೇದಶಾಸ್ತ್ರಗಳು ಪೂರಕವಾಗಿವೆ ನೊಂದ ಜೀವಿಗೆ ಸತ್ವಯುತ ಬದುಕಿನ ಸವಿಯನ್ನು ಉಣಬಡಿಸುವಲ್ಲಿ ಇವುಗಳ ಅಗತ್ಯತೆ ಇದೆ. ಇವುಗಳನ್ನು ಅರ್ಥೈಸಿಕೊಂಡು ಜೀವನ ಸಾರವನ್ನು ಅರಿತು ನಡೆದವನಿಗೆ ಯಶಸ್ಸು ದೊರೆಯುತ್ತದೆ ಎನ್ನುತ್ತ "ಬೀದಿ ಬೆಳಕಿಂದೇನೋ?"– ಎನ್ನುತ್ತಾರೆ.

ನಗುವ ನಗಿಸುವ ನಗಿಸಿ ನಗುವ ಬಾಳುವ ವರವ।
ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ॥

ಸಮಾಜದಲ್ಲಿ ಶಾಂತಿ ನೆಲೆಸುವಂತೆ ಕಾಯ್ದುಕೊಳ್ಳಬೇಕಾದುದು ಜೀವನದ ಪ್ರಮುಖ ಧರ್ಮ. ನೊಂದ ಜೀವಕ್ಕೆ ಹಿತನುಡಿಗಳನ್ನಾಡಿ ಸಂತೋಷದ ಚಿಲುಮೆಯನ್ನು ಚಿಮ್ಮಿಸಬೇಕಾದದ್ದು ಮಾನವನಾಗಿ ಮತ್ತೊಬ್ಬ ಮನುಷ್ಯನ ಕರ್ತವ್ಯ. ನಗಿಸುವ ಕಲೆ ನಿಜಕ್ಕೂ ಸಾಹಸ ಪೂರ್ಣವಾದದ್ದು. ಅಳುವಂತೆ ಮಾಡುವುದು ಸುಲಭ. ಆದರೆ ಅದೇ ವ್ಯಕ್ತಿಯನ್ನು ಸಂತೈಸಿ ನಗಿಸುವುದು ಬಹಳ ಕಠಿಣ ಕೆಲಸ. ನಾವು ಎಲ್ಲರೊಡನೆ ನಗುತ್ತ ವ್ಯವಹರಿಸುವುದು ಮಾನವ ಸಹಜ ಕರ್ಮ. ನೊಂದವರನ್ನು ನಗಿಸುವುದು ಅದು ನಮಗೆ ದೈವ ಕೃಪೆಗೆ ಪಾತ್ರರಾಗಲು ಇರುವ ಧರ್ಮ. ಮನಸ್ಸಿಗೆ ಸಾಧನೆ ಮಾಡಿದಷ್ಟು ಸಂತೋಷವಾಗುತ್ತದೆ. ನಗುವವರ ಸಂತೋಷವನ್ನು ಕಂಡು, ಭಾವನೆಗಳನ್ನು ಹಂಚಿಕೊಂಡು ನಗುವುದು ಮತ್ತೂ ಶ್ರೇಷ್ಟವಾದ ಧರ್ಮ. ಇದು ಸುಮ್ಮನೇ ಲಭಿಸುವುದಿಲ್ಲ. ಯೋಗ ಸಾಧನೆಬೇಕು. ನಮ್ಮೆಲ್ಲ ಸಾಧನೆಯನ್ನು ಮೀರಿದ್ದು ಇತರರ ಸುಖವನ್ನು ಕಂಡು ಹರ್ಷಪಡುವ ನಮ್ಮ ಮನಸ್ಸಿನ ಒಳತೋಟಿ. ದೇವರ ಕೃಪೆಯನ್ನು ಪಡೆಯಲು ಇದು ಸಹಕಾರಿಯಾದದ್ದು.

ತೋರಿಕೆಗಾಗಿ ಜನ ಮೆಚ್ಚಲಿ ಎಂದು ನಗುವುದು ಅದು ಧರ್ಮವಲ್ಲ. ಅಲ್ಲಿ ವಿಧಿಯ ಪ್ರೀತ್ಯಾದರಗಳು ನಮಗೆ ದೊರಯವು. ಶುದ್ಧ ಮನಸ್ಸಿನ ಮಿಡಿತವೇ ಪಾರಮಾರ್ಥಿಕ ಹಾದಿಯಲ್ಲಿ ಮುನ್ನಡೆಯಲು ದಾರಿದೀಪ ನಗುವಿನ ಲಾಭಗಳು ಹಲವಾರು. ನಗು ಆರೋಗ್ಯ ವೃದ್ಧಿಸುತ್ತದೆ. ಮುಖದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಮನಸ್ಸಿನ ಒತ್ತಡವನ್ನು ನಿವಾರಿಸುತ್ತದೆ. ಮನಸ್ಸಿನ ನಿರುಮ್ಮಳ ಸ್ಥಿತಿಗೆ ನಗುವೇ ಮೂಲ. ನಗು ಆರೋಗ್ಯ ವೃದ್ಧಿಗೆ ಸಿಗುವ ಉಚಿತ ಔಷಧ: ದೇವರು ಮಾನವನಿಗೆ ದಯಪಾಲಿಸಿದ ವರಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು ನವಿರಾದ ನಗೆ ಎಂಬುದಾಗಿ ವಲ್ಲಭಬಾಯಿ ಪಟೇಲ್‌ರವರು ಹೇಳುತ್ತಾರೆ. ನಗುವಿಗೆ ಗೆಲ್ಲುವ ಗುಟ್ಟು ತಿಳಿದಿರುತ್ತದೆ. ನಗೆಯ "ನಂಟು ದೀರ್ಘಾಯಸ್ಸಿನ ಗುಟ್ಟು" ಎಂಬುದಾಗಿ ಟಿ.ಪಿ.ಕೈಲಾಸಂರವರು ಹೇಳುತ್ತಾರೆ.

ಮನುಷ್ಯ ಸುಖಾಪೇಕ್ಷಿ. ನೋವು, ಸೋಲು, ಸಂಕಟಗಳನ್ನು ಅವನು ಎಂದೂ ಬಯಸುವುದಿಲ್ಲ. ನಗು ಅಂತರಂಗದಲ್ಲಿ ಹರಳಿದ ಹೂವು. ಡಿ.ವಿ.ಜಿ. ತಮ್ಮ ಇನ್ನೊಂದು ಮುಕ್ತಕದಲ್ಲಿ

"ನಗುವೊಂದು ರಸಪಾಕವಳುವೊಂದು ರಸಪಾಕ।
ನಗುವಾತ್ಮ ಪರಿಮಳವ ಪಸರಿಸುವ ಕುಸುಮ॥"

ಎಂಬ ಮಾತುಗಳ ಮೂಲಕ ಜೀವನದಲ್ಲಿ ಅಳು ಮತ್ತು ನಗುವಿನ ಮಹತ್ವವನ್ನು ತಿಳಿಸುತ್ತಾರೆ. ಇಂದು ನಗುವಿನ ಮಹತ್ವ ಹೆಚ್ಚುತ್ತಿದೆ. ನಗು ಚೈನತ್ಯದಾಯಕ ಶಕ್ತಿಯಾಗಿ ಹೊರಹೊಮ್ಮಿದೆ. ಎಲ್ಲೆಡೆ ನಾವು ನಗೆ ಕೂಟಗಳನ್ನು ಕಾಣುತ್ತೇವೆ. ಎಲ್ಲೆಡೆಯೂ ನಿರ್ಬಂಧ, ಹಣ, ಅಂತಸ್ತುಗಳಿಂದ ಜನರನ್ನು ತೂಗಿನೋಡುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಇನ್ನು ಬೆಳೆಯುತ್ತಿರುವ ತಮ್ಮ ಮಕ್ಕಳಿಗೂ ಅಷ್ಟೇ ಪಕ್ಕದ ಮನೆಯ ಮಕ್ಕಳ ಜೊತೆಗೂ ಬೆರೆಯದಂತಹ ನಿಷೇಧ. ಸದಾ ಮಗು ದೂರದರ್ಶನವೋ, ಗಣಕಯಂತ್ರವೋ, ಪುಸ್ತಕದ ಮುಂದೆಯೋ ಕುಳಿತೇ ಕಾಲಹರಣ ಮಾಡಬೇಕು. ಮಗುವಿನ ಮುಕ್ತ ಚಲನವಲನಗಳ ಮೇಲೂ ನಿಷೇಧ ಹಾಕುತ್ತಾರೆ. ಮಗುವಾಗಲಿ, ತಾವಾಗಲಿ ನಗುವುದೇ ಅಪರೂಪ ಅದಕ್ಕೇ ಇಂದಿನ ಮಕ್ಕಳು ಪುಸ್ತಕದ ಬದನೆಕಾಯಿಗಳಾಗುತ್ತಿದ್ದಾರೆ. ನಗುವಿನ ಮಹತ್ವ ತಿಳಿದವರು ಈಗ ಅಲ್ಲಲ್ಲಿ ನಗೆ ಕೂಟಗಳನ್ನು ಏರ್ಪಡಿಸಿ ಜನರನ್ನು ಹೊಟ್ಟೆ ಹುಣ್ಣಾಗುವಷ್ಟು ನಗಿಸುವ ಹಾಸ್ಯಗಾರರನ್ನು ಕರೆಸಿ ಸುಖ ಅನುಭವಿಸುತ್ತಾರೆ. ನಿಜಕ್ಕೂ ಈ ಹಾಸ್ಯಗಾರರ ಸಾಧನೆ ಮಹತ್ವಪೂರ್ಣವಾದದ್ದು. ತಮ್ಮ ಮನದೊಳಗಿನ ಅಳಲು ಏನೇ ಇದ್ದರೂ, ಅದನ್ನು ನುಂಗಿ ಇತರರನ್ನು ನಗಿಸಿ ಅವರ ಮೆಚ್ಚುವೆ ಗಳಿಸಿ ಅತಿಶಯದ ಧರ್ಮವನ್ನು ಮೆರೆಯುತ್ತಿದ್ದಾರೆ. ಇವರೇ ಧನ್ಯರು.

ಒಲ್ಲೆನೆನದಿರ್ ಬಾಳನ್ ಒಲವದೇನೆನ್ನದಿರು।
ಉಲ್ಲಸಕೆಡೆಮಾಡು ನಿನ್ನಿನಾದಿನಿತು॥

ಜೀವನವನ್ನು ಎಂದೂ ತುಚ್ಛ ಎನ್ನುವುದು ಬೇಡ. ಜೀವನಕ್ಕೆ ಉತ್ತಮವಾದ ಅರ್ಥವಿದೆ. ಜೀವನದ ಜಂಜಾಟಕ್ಕೆ ಸಿಕ್ಕಿ ತೊಳಲಿದ ಮೇಲೆ ಇಷ್ಟೆ ಜೀವನದರ್ಥ. ಇದರೊಳಗೆ ಏನೂ ತಿರುಳಿಲ್ಲ ಎಂದು ತಾತ್ಸಾರದಿಂದ ನೋಡಬೇಡ ಎಂಬುದೇ ಡಿ.ವಿ.ಜಿ.ರವರ ಬೋಧೆ "ಬಹಳಷ್ಟು ಜನರಿಗೆ, ಈ ಜೀವನದ ಸಂಕಷ್ಟಗಳನ್ನು ಅನುಭವಿಸಿ, ನೊಂದು, ಬೆಂದು ಸಾಕಪ್ಪಾ ಈ ಬಾಳು ಎನ್ನುವಂಥಾ ಭಾವ ಮೂಡುತ್ತದೆ. ಆದರೆ ಈ ಬಾಳನ್ನು ಬಾಳದೆ ಅನ್ಯ ಮಾರ್ಗವಿಲ್ಲವಾದ್ದರಿಂದ, ಬಾಳಲೇಬೇಕು ಅಲ್ಲವೇ? ಆದ್ದರಿಂದ, "ಈ ಬಾಳು ಬೇಡ, ಈ ಬಾಳಿನ ಮೇಲೆ ಮೋಹವೇತಕ್ಕೆ ಬೇಕು" ಎಂದು ಅನ್ನದೆ, ನಮ್ಮ ಪಾಲಿಗೆ ಬಂದ ಜೀವನವನ್ನು ಬಾಳುವಾಗ, ಮನಸ್ಸಿನಲ್ಲಿ ಒಂದಿಷ್ಟು ಸಂತೋಷವನ್ನು ತಂದುಕೊಂಡು ಬಾಳಿದರೆ ಚೆನ್ನ. ಈ ಬಾಳಿನಿಂದ ದೂರ ಎಲ್ಲಿಯೂ ಓಡಿ ಹೋಗಲು ಆಗದೆ ಇರುವಾಗ ತಂದಿಟ್ಟುಕೊಂಡ ಸಂತೋಷದಿಂದ ಈ ಬಾಳಿನಲ್ಲಿ ನಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಬಾಳಿದರೆ, ಬಾಳು ಕೊಡುವ ನೋವಿನಂಶ ಕಡಿಮೆಯಾಗುತ್ತದೆ.

೧. ಕಗ್ಗ ರಸಧಾರೆ–ಸಂಪುಟ–ರವಿ ತಿರುಮಲೈ ಪು.ಸಂ. ೭೨.

ನಮ್ಮ ಸಂಪರ್ಕದಲ್ಲಿರುವವರೊಟ್ಟಿಗೆ ಪರಸ್ಪರ ಸ್ನೇಹವನ್ನು ಬೆಸೆದುಕೊಂಡು, ಉತ್ಸಾಹದಿಂದ, ಬಾಳಬೇಕು. ಹಾಗೆ ಬಾಳುವಾಗ ಈ ಜಗತ್ತಿಗೆ ಅಂಟದೆ, ತಾವರೆ ಎಲೆಯ ಮೇಲಿನ ನೀರ ಹನಿಯಂತೆ ಬದುಕಿದರೆ, ವೈಯಕ್ತಿಕವಾಗಿ ನಮಗೆ ಯಾವ ನೋವೂ ಆಗುವುದಿಲ್ಲ. ಧೈರ್ಯವಾಗಿ ಬಾಳಬೇಕು, ಸಾಧ್ಯವಾದಷ್ಟು ಈ ಜಗತ್ತಿನಲ್ಲಿ ನಡೆಯುವ ಅನ್ಯಾಯಗಳನ್ನು ಅಳಿಸಲು ಪ್ರಯತ್ನಪಡಬೇಕು."

ಜೀವನವೆಂಬ ಕಿಗ್ಗಾಡಿನಲ್ಲಿ ನಡೆವ ಜೀವಕ್ಕೆ ಅಡೆತಡೆಗಳು ಅಪಾರ. ಆ ಎಲ್ಲವನ್ನು ಎದುರುಗೊಂಡು ದಡ ಮುಟ್ಟಲಿಕ್ಕೆ ಪಯಣಿಗ ಸಿದ್ಧನಾಗಿಯೇ ಇರಬೇಕು. ಎಂದೂ ಅಸ್ಮಿತೆಯನ್ನು ಕಳೆದುಕೊಂಡು ಭೀತನಾಗಬಾರದು, "ಬಂದದ್ದೆಲ್ಲ ಬರಲಿ ಗೋವಿಂದನ ದಯೆಯಂದಿರಲಿ" ಎಂಬ ಧೈರ್ಯವನ್ನು ತಾಳಬೇಕು. ಅದಕ್ಕಾಗಿಯೇ "ಎಲ್ಲಕಂ ಸಿದ್ಧನಿರು ಮಂಕುತಿಮ್ಮ" ಎನ್ನುತ್ತಾರೆ.

ಗರ್ವಪಡದುಪಕಾರಿ ದರ್ಪಬಿಟ್ಟಧಿಕಾರಿ।
ನಿರ್ವಿಕಾರದ ನಯನದಿಂ ನೋಳ್ಪುದಾರಿ॥

ಮನುಷ್ಯನನ್ನು ಪಥನದೆಡೆಗೆ ಕೊಂಡ್ಯೊಯ್ಯುವುದು ಆತನ ಅಹಂಕಾರದ ಗುಣ. ಎಲ್ಲವೂ (ಏಳಿಗೆ, ಪಥನ) ಆತನ ಕೈಯ್ಯಲ್ಲೇ ಇರುತ್ತದೆ. ಮನುಷ್ಯನ ಬದುಕಿನ ಧರ್ಮವೇ ಪರರಿಗೆ ಸಹಕಾರ ಮಾಡುವುದು. ಅದು ಒಂದು ಸಹಜ ಪ್ರವೃತ್ತಿಯಾಗಬೇಕೆಂದು ಡಿ.ವಿ.ಜಿ. ಉಪದೇಶಿಸುತ್ತಾರೆ. ಪ್ರಕೃತಿಯಲ್ಲೇ ಯಾವುದೇ ಬಗೆಯ ದ್ವೇಷ, ವೈಶಮ್ಯ, ತಾರತಮ್ಯಗಳು ಕಾಣುವುದಿಲ್ಲ. ಪ್ರಕೃತಿಯ ಪ್ರಮುಖ ಅಂಶಗಳಾದ ಗಾಳಿ, ನೀರು, ಬೆಳಕು ಎಲ್ಲವೂ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗುತ್ತವೆ. ಬಡವ-ಶ್ರೀಮಂತ, ಉತ್ತಮ, ಕೀಳುಕುಲ, ಶ್ರೇಷ್ಠ-ಕನಿಷ್ಠ ಎಂಬ ಯಾವ ಭೇದವೂ ಇಲ್ಲದೆ ಎಲ್ಲರನ್ನೂ ಪ್ರಕೃತಿ ಸಮಾನವಾಗಿ ಕಾಣುತ್ತದೆ. ಹೀಗಿರುವಾಗ ಯಾವುದನ್ನೂ ಸೃಷ್ಟಿಸುವ, ಸ್ವಯಂ ನೀಡಬಹುದಾದ ಸಾಮರ್ಥ್ಯವಿಲ್ಲದ ಮನುಷ್ಯ ಬೀಗುವುದು ಅದು ಧರ್ಮ ಬಾಹಿರ ಎನ್ನುತ್ತಾರೆ ಡಿವಿಜಿ.

ಅಧಿಕಾರಿ ಸ್ಥಾನದಲ್ಲಿ ಕುಳಿತವನು ಅಹಂಕಾರವನ್ನು ತೊರೆದವನಾಗಿರಬೇಕು. ಯಾರನ್ನೂ ವಕ್ರದೃಷ್ಟಿಯಿಂದ, ಹೀಯಾಳಿಕೆಯ ಮನೋಭಾವದಿಂದ ನೋಡಬಾರದು, ಎಲ್ಲ ಧರ್ಮಗಳ ಸಾರವನ್ನು ಗ್ರಹಿಸಿ ಯಾವುದು ಧರ್ಮ, ಯಾವುದು ಅಧರ್ಮ ಎಂಬುದನ್ನು ನಿಷ್ಕರ್ಷೆಮಾಡಿ ಒಳ್ಳೆಯ ತೀರ್ಮಾನಕ್ಕೆ ಬರಬೇಕು. ಸದ್ಗುಣಗಳನ್ನು ಹೊಂದಿದವನಿಗೆ ಗುರುವಿನ ಪದವಿ ತಾನಾಗಿಯೇ ಒಲಿದು ಬರುತ್ತದೆ. ಆತ ಯಾವ ಬಗೆಯ ಕಸರತ್ತನ್ನು ಮಾಡುವುದು ಅನಿವಾರ್ಯವಲ್ಲ. ಅದನ್ನೇ ಗುಂಡಪ್ಪನವರು "ಉರ್ವರಿಗೆ ಗುರುವವನು -ಮಂಕುತಿಮ್ಮ" ಎನುತ್ತಾರೆ.

ಇಂದಿನ ರಾಜಕಾರಣಿಗಳ ಮುಖ್ಯ ಗುರಿಯೇ ಆಸ್ತಿ ಸಂಪಾದನೆ. ಅದಕ್ಕಾಗಿ ಏನೆಲ್ಲಾ

ಕಸರತ್ತು ಬೇಕೋ ಎಲ್ಲವನ್ನು ಮಾಡುತ್ತಾರೆ. ತಿಮ್ಮ ಗುರುಗಳು ಹೇಳುವ ಎಲ್ಲ ಸದ್ಗುಣಗಳಿಗೂ ವಿರುದ್ಧವಾದ ನಡತೆಯನ್ನು ಬೆಳೆಸಿಕೊಂಡಿರುತ್ತಾರೆ. ಅಧಿಕಾರ ಎಂಬುದು ಸಿಕ್ಕಿದೊಡನೆಯೇ ಗರ್ವ ಬಂದು ಬಿಡುತ್ತದೆ. ತಾನೊಬ್ಬ ಅಧಿಕಾರಿ. ನನ್ನ ಕೈಕೆಳಗೆ, ನನ್ನ ಆಜ್ಞೆಯಂತೆ ದುಡಿಯುವವರೂ ಇದ್ದಾರೆ ಎಂಬ ದರ್ಪ. ತನ್ನ ಕೈಕೆಳಗಿನವರನ್ನು ಅನುಮಾನದಿಂದ, ವಿಕೃತ ಮನಸ್ಸಿನಿಂದ ನೋಡುವ ಮನೋಭಾವ ಹೊಂದಿರುತ್ತಾರೆ. ಹಿತ-ಅಹಿತಗಳನ್ನು, ಪರಾ-ಪರಗಳನ್ನು ವಿಚಾರಿಸದೆ ಗಣಿಸದೆ ಮನ ಬಂದಂತೆ ನಿರ್ಧಾರಗಳನ್ನು ಪಡೆದು ತಾನೇ ಶ್ರೇಷ್ಠ ಎಂಬಂತೆ ಮೆರೆಯುವುದೆ ಕೆಲವು ಮೇಲಾಧಿಕಾರಿಗಳ ಗುಣ.

ಸುಳ್ಳು ಭರವಸೆಗಳನ್ನು ಕೊಟ್ಟು ಜನರನ್ನು ಮಣಿಸಿ ಅಧಿಕಾರವನ್ನು ಗಿಟ್ಟಿಸಿಕೊಂಡು ಜನರನ್ನು ಹಾದಿ ತಪ್ಪಿಸುವ ಇವರು ಎಂದೂ ಯಶಸ್ಸನ್ನು ಗಳಿಸಲಾರರು ಗುರುವಿನ ಪದವಿಯನ್ನು ಗಳಿಸಲಾರರು. ಆದ್ದರಿಂದ ಮಾನವಧರ್ಮವನ್ನು ಪ್ರತಿನಿಧಿಸುವ ನಿಸ್ವಾರ್ಥ, ದರ್ಪರಹಿತ, ನಿರಹಂಕಾರದ ಉಪಕಾರಿ ಗುಣಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕುವಂತೆ ಕರೆ ನೀಡುತ್ತಾರೆ ತಿಮ್ಮಗುರು ಡಿವಿಜಿ.

ದೇವರು ಧರ್ಮ ಮೊದಲಾದ ನೈತಿಕ ತತ್ವಗಳ ಮೂಲಕ ದೃಷ್ಟಾಂತಗಳನ್ನು ಕೊಡುವ ಡಿವಿಜಿ ಜನರಲ್ಲಿ ದೇವರು ಎಂಬ ನಿಷ್ಠೆಯಿಂದಲಾದರೂ ಒಳ್ಳೆತನಗಳು ನೆಲೆಗೊಳ್ಳಲ್ಲಿ ಎಂದು ಆಶಿಸುತ್ತಾರೆ. ನಮ್ಮನ್ನು ನಾವು ತಿದ್ದಿಕೊಳ್ಳುವುದೇ ಧರ್ಮ. "ಬೆಲ್ಲ ಲೋಕಕ್ಕಾಗಿ ತನಗೆ ತಾಂ ಕಲ್ಲಾಗಬಲ್ಲವನೆ ಮುಕ್ತನಲ ಮಂಕುತಿಮ್ಮ" ಎಂದು ಹೇಳುತ್ತ ಲೋಕಹಿತಕ್ಕಾಗಿ ಬದುಕುವಂತೆ ಉಪದೇಶಿಸುತ್ತಾರೆ.

ಅಧ್ಯಾಯ–೫

ಉಪಸಂಹಾರ

ಡಿ.ವಿ.ಜಿ.ರವರ ಮಂಕುತಿಮ್ಮನ ಕಗ್ಗ ಕೃತಿ ಬದುಕಿನ ಮೌಲ್ಯಗಳನ್ನು ಒಳಗೊಂಡ ನಿಕ್ಷೇಪ. ಡಿ.ವಿ.ಜಿ. ಪರಿಚಯಿಸುವ ಮಂಕುತಿಮ್ಮ ಬದುಕಿನ ಎಲ್ಲ ಸ್ತರಗಳನ್ನೂ ತಿಳಿದಿರುವ ಮೇಧಾವಿ ಅಸಾಮಾನ್ಯ ತತ್ತ್ವಜ್ಞಾನಿ ಡಿ.ವಿ.ಜಿ. ಈ ಮಂಕುತಿಮ್ಮನಲ್ಲಿ ಅಡಗಿರುವ ತಾತ್ವಿಕ–ಸಾರ್ವಜನಿಕ ವಿಚಾರಧಾರೆಗಳನ್ನು ಜನಸಾಮಾನ್ಯರಿಗೆ ಮನದಟ್ಟು ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜೀವನದ ಯಥಾರ್ಥತೆಯನ್ನು ಅರಿಯಲು ಜ್ಞಾನದ ಅವಶ್ಯಕತೆ ಇದೆ. ಈ ಜ್ಞಾನ ಅಂತರಂಗದ ಕಣ್ಣು ತೆರೆಸುತ್ತದೆ. ಆಧ್ಯಾತ್ಮ ಪುರಾಣ, ಅಷ್ಟೇ ಅಲ್ಲ. ಆಧುನಿಕ ಮನಸ್ಸುಗಳನ್ನು ತಿದ್ದಬಲ್ಲ ಆಧುನಿಕ ಚಿಂತನೆಗಳನ್ನು ಇದು ಒಳಗೊಂಡಿದೆ. ಕಗ್ಗ ಸಮಕಾಲೀನತೆಗೆ ಅನ್ವಯಿಸಿ ಬದುಕಿನ ಸಾರವನ್ನು ಬಿಚ್ಚಿಟ್ಟಿರುವ ಸಮರ್ಥ ಕೃತಿ.

ಬದುಕಿನ ಮರ್ಮವನ್ನರಿಯಲು ಲೋಕಾನುಭವ ಮುಖ್ಯ. ಸಮಾಜವನ್ನು ತಿದ್ದಿ ಹಸನುಗೊಳಿಸಲು ಮನುಷ್ಯ ತನ್ನ ಬಾಹ್ಯ ಬದುಕಿನಲ್ಲಿ ಕಸ, ಕೊಳೆ ಎಲ್ಲವನ್ನೂ ಹೇಗೆ ತೊಳೆದುಕೊಳ್ಳುತ್ತಾನೆಯೋ ಹಾಗೆಯೇ ಆತನ ಮನಸ್ಸಿನೊಳಗಿನ ಕಸ, ಕೊಳೆ ಅನಗತ್ಯ ತ್ಯಾಜ್ಯಗಳನ್ನೆಲ್ಲ ತೊಳೆಯಲು, ಸಾರ್ಥಕ ಬದುಕನ್ನು ನಡೆಸಲು ಕಗ್ಗಕೃತಿ ಪೂರಕ ಜ್ಞಾನವನ್ನು ಒದಗಿಸುತ್ತದೆ. ಸಮೃದ್ಧ ಸಂತೃಪ್ತ ಜೀವನಕ್ಕೆ ಬೇಕಾದುದು, ಆತ ಮೈಗೂಡಿಸಿಕೊಂಡಿರುವ ಉತ್ತಮ ನಡೆ, ನುಡಿ ಒಳ್ಳೆಯ ಸಂಸ್ಕಾರಗಳು. ಆ ಎಲ್ಲ ಮೌಲ್ಯಗಳನ್ನು ಒಳಗೊಂಡಿರುವ ಕಗ್ಗ ಕೃತಿ ನೋವು ನಲಿವಿಗೆ ಹಿಗ್ಗದೆ, ಕುಗ್ಗದೆಯೂ ಸ್ಥಿತಪ್ರಜ್ಞರಾಗಿ ಬದುಕುವಂತೆ ಉಪದೇಶಿಸುತ್ತದೆ.

ಅಜ್ಞಾನ, ಅಂಧಕಾರ, ಮೌಢ್ಯ, ಮತಾಚರಣೆಗಳಲ್ಲಿ ತೊಡಗಿ ದಿಕ್ಕುಗಾಣದೆ ತೋಲಾಡುತ್ತಿರುವ ಸಮಾಜದ ಜನರಿಗೆ, ಜನರ ಗುರಿ ಸಾಧನೆಗೆ ಅಗತ್ಯವಾದ ಬೆಳಕನ್ನು ಮಂಕುತಿಮ್ಮನ ಕಗ್ಗ ಕೃತಿ ಹರಿಸಿದೆ. ಮನುಷ್ಯನ ನಡುವಿನ ಸಂಬಂಧಗಳು ಸೀಮಿತ ವ್ಯಾಪ್ತಿಯನ್ನು ಹೊಂದಿ ಅರ್ಥಹೀನವಾಗುತ್ತಿರುವ ಇಂದಿನ ಸಮಾಜದಲ್ಲಿ ಬಾಂಧವ್ಯಗಳನ್ನು, ಸಂಬಂಧಗಳನ್ನು ಬೆಸೆಯುತ್ತ ಬದುಕಿಗೆ ಅರ್ಥವನ್ನು ನೀಡುವಲ್ಲಿ ಈ ಕೃತಿ ಸಮರ್ಥ ಕೊಡುಗೆಯನ್ನಿತ್ತಿದೆ. ಬದುಕಿನ ನಿಗೂಢತೆಯ ಬಗ್ಗೆ ಅರಿವು ಮೂಡಿಸುತ್ತದೆ.

ಈ ಕೃತಿಯು ತನ್ನ ಶ್ರೇಷ್ಠತೆಯ ಕಾರಣದಿಂದಾಗಿ ಬೇರೆ ಭಾಷೆಗಳಿಗೂ ಅನುವಾದಗೊಂಡಿದೆ. ಉದಾ : 1) Dr. Myna R. Shetty (2009) Dr. DVG's mankuthimmana Kagga - An English Transcreation springs-

2) Talks on insightful living ಹಾಗೆ ಕಗ್ಗ ಕೃತಿಯನ್ನು ಕುರಿತು ಹಲವಾರು ಲೇಖಕರು, ಪಂಡಿತರು ಅಧ್ಯಯನ ಮಾಡಿದ್ದಾರೆ. ಉದಾ: ಮಂಕುತಿಮ್ಮನ ಕಗ್ಗ-ಪ್ರೋ. ಹೆಚ್.ಎಸ್. ಲಕ್ಷ್ಮೀನಾರಾಯಣಭಟ್ಟ. "Mankuthimmana Kagga Vo./2 By shatavadhani Ganesh" ಮುಂತಾದವು. ಜೊತೆಗೆ ಕಗ್ಗ ಕೃತಿ ಧ್ವನಿ ಮುದ್ರಿಕೆಗಳಾಗಿಯೂ ಹೊರಬಂದಿದೆ.

ಒಟ್ಟಾರೆಯಾಗಿ ಮಂಕುತಿಮ್ಮನ ಕಗ್ಗ ಕೃತಿ ತನ್ನೊಳಗಿನ ಸತ್ವದಿಂದಾಗಿ ಮನೆಮಾತನಾಗಿದೆ.

ಪರಾಮರ್ಶನ ಗ್ರಂಥಗಳು

೧. ಕಗ್ಗದೊಳಗಿನ ಸಗ್ಗ : ಗಣರಾಜ ಕುಂಬ್ಳೆ

೨. ಸಮಾಜ ವಿಕಾಸಕ್ಕೆ : ಡಾ॥ ವಿಜಯಲಕ್ಷ್ಮಿ ಬಾಳೆಕುಂದ್ರಿ

೩. ಡಿ.ವಿ.ಜಿ. ಕೃತಿ ಶ್ರೇಣಿ
ಸಂಪುಟ–೯, ಕಾವ್ಯ–೧ : ಡಾ॥ ಹಾ.ಮಾ. ನಾಯಕ

೪. ಜಗತ್ತಿನ ಪ್ರಸಿದ್ಧ ವ್ಯಕ್ತಿಗಳು : ಹೆಚ್.ಜಿ. ರಾಮಯ್ಯಂಗಾರ್

೫. ತತ್ವ ಪದಗಳು–ಪ್ರಾತಿನಿಧಿಕ
ಸಂಕಲನ : ಶಾಂತರಸ

೬. ಮಂಕುತಿಮ್ಮನ ಕಗ್ಗ
ಜೀವನ ದೀವಿಗೆ : ಎಸ್.ಶ್ರೀನಿವಾಸಶೆಟ್ಟಿ

೭. ಡಿ.ವಿ.ಜಿ. ಸಮಗ್ರ
ಕೃತಿ ಪರಿಶೀಲನೆ : ಡಿ.ವಿ.ಜಿ. ಶತಮಾನೋತ್ಸವ ಸಮಿತಿ.

೮. ಡಿ.ವಿ.ಜಿ. ಮಂಕುತಿಮ್ಮನ
ಕಗ್ಗ ತಾತ್ಪರ್ಯ : ಶ್ರೀಕಾಂತ್.

೯. ಕಗ್ಗ ರಸಧಾರೆ : ರವಿ ತಿರುಮಲೈ
(ಸಂಪುಟ – ೨)